# ಪ್ರಾಣ ಹೋದರೂ ನೀರು ಕೊಡಲು ಸಾಧ್ಯವಿಲ್ಲ: ರೈತರ ಆಕ್ರೋಶ

• ಉದಯವಾಹಿನಿ, ತಿಪಟೂರು

ನಗರಕ್ಕೆ ಶುದ್ಧ ಕುಡಿಯುವ ನೀರು ಒದಗಿಸಲು ನೊಣವಿನಕೆರೆ ಗ್ರಾಮದ ಕೆರೆಯಿಂದ ಯೋಜನೆ ರೂಪಿಸಿದರೆ ಇಲ್ಲಿನ ಜನತೆಗೆ ದಯಾಮರಣ ನೀಡಿ. ಇಲ್ಲಿನ ರೈತರ ಸಾವಿನ ನಂತರ ನೀರು ಪಡೆಯಿರಿ ಎಂದು ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಎಸ್.ವಿ.ಸ್ವಾಮಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರಕ್ಕೆ ಕುಡಿಯುವ ನೀರು ನೀಡಲು ಹಿಂದೆಯೂ ನೊಣವಿನಕೆರೆಯನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಆದರೆ ಅಂದು ರೈತರ ವಿರೋಧದ ನಂತರ ಯೋಜನೆ ಕೈಬಿಡಲಾಗಿತ್ತು. ಆದರೆ ಈಗಿನ ಶಾಸಕರು ನೊಣವಿನಕೆರೆಯಿಂದ ನಗರಕ್ಕೆ ಕುಡಿಯುವ ನೀರಿಗಾಗಿ ಯೋಜನೆ ಮಾಡಲಾಗುತ್ತದೆ ಎಂದಿದ್ದಾರೆ. ಯಾವುದೇ ಕಾರಣಕ್ಕೂ ಇಲ್ಲಿಂದ ನೀರು ಕೊಡಲು ಬಿಡುವುದಿಲ್ಲ ಎಂದರು.

ತಾಲ್ಲೂಕಿನ ಭತ್ತದ ಕಣಜವಾಗಿರುವ ಇಲ್ಲಿನ ಅಚ್ಚುಕಟ್ಟು ಪ್ರದೇಶದಲ್ಲಿ 2,500 ಎಕರೆ ಸಾಗುವಳಿ ಮಾಡಲಾಗುತ್ತಿದೆ.


ಉದಯವಾಹಿನಿ ಚಿತ್ರ

1,600 ಎಕರೆಯಲ್ಲಿ ಭತ್ತ ಬೆಳೆಯಲಾಗುತ್ತಿದೆ. ತೋಟಗಾರಿಕಾ ಬೆಳೆ ಬೆಳೆಯುತ್ತಿದ್ದು, ನಾಲ್ಕು ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ಕುಟುಂಬ ಸೇರಿದಂತೆ ಲಕ್ಷಕ್ಕೂ ಹೆಚ್ಚು ರೈತರು ಜೀವನ ಮಾಡುತ್ತಿದ್ದಾರೆ. ಕೆರೆ ಆಶ್ರಯದಿಂದ ಕೃಷಿ ಇಲಾಖೆ ಪ್ರಕಾರ 56 ಸಾವಿರ ಟನ್ ಭತ್ತ, 90 ಸಾವಿರ ಟನ್ ಮೇವು ಪ್ರತಿ ವರ್ಷ ಉತ್ಪತ್ತಿಯಾಗಿದೆ ಎಂದರು.

ರೈತ ಸಂಘದ ಜಯಚಂದ್ರಶರ್ಮಾ ಮಾತನಾಡಿ, 'ಈಗಾಗಲೇ ನಗರಕ್ಕೆ ಕುಡಿಯುವ ನೀರಿಗಾಗಿ ಈಚನೂರು ಕೆರೆ ಹಾಗೂ ತಿಪಟೂರು ಕೆರೆಯು ಅನುಮೋದನೆಯಾಗಿದೆ.

ಅಧಿಕಾರಿಗಳ ನಿರ್ಲಕ್ಷ್ಯದಿಂದ ನಗರದ ಯುಜಿಡಿ ನೀರನ್ನು ಈಚನೂರು ಕೆರೆಗೆ ಬಿಡುವ ಮೂಲಕ ಕಲುಷಿತಗೊಳಿಸಿ ನಗರಕ್ಕೆ ನೀರಿಗೆ ತೊಂದರೆ ಮಾಡಲಾಗಿದೆ. ನೊಣವಿನಕೆರೆಯ ಜನರ ಬದುಕನ್ನು ಕಸಿಯಲು ಹೊರಟಿರುವ ನಿರ್ಧಾರಕ್ಕೆ ರೈತರ ವಿರೋಧವಿದೆ. ನಗರಕ್ಕೆ ಶುದ್ಧ ಕುಡಿಯುವ ನೀರು ಒದಗಿಸಲು ಪಶ್ಚಿಮ ಭಾಗದ ದಸರೀಘಟ್ಟ, ಗುರಗದಹಳ್ಳಿ, ಚಿಕ್ಕಬಿದರೆ ಮುಂತಾದ ಗ್ರಾಮ ಕೆರೆಯಿಂದ ಯೋಜನೆ ರೂಪಿಸಿ ಎಂದರು.

ರೈತ ಮುಖಂಡ ವೇದಮೂರ್ತಿ ಮಾತನಾಡಿ, ನೀರಿನ ವಿಷಯಕ್ಕೆ ಸಂಬಂಧಿಸಿದ ಈಚನೂರು ಕೆರೆ ಕಲುಷಿತದ ಬಗ್ಗೆ, ನಗರಕ್ಕೆ ಕುಡಿಯುವ ನೀರಿನ ಪರ್ಯಾಯ ವ್ಯವಸ್ಥೆಯ ಬಗ್ಗೆ ದಾಖಲಾತಿ ಪಡೆಯಲು ನಗರಸಭೆಗೆ ಮಾಹಿತಿ ಹಕ್ಕು ಅಧಿನಿಯಮದಲ್ಲಿ ಕೇಳಿದರೂ ಎರಡು ತಿಂಗಳಾದರೂ ಮಾಹಿತಿ ನೀಡಿಲ್ಲ. ಉದ್ದೇಶಪೂರ್ವಕವಾಗಿ ನಮ್ಮನ್ನು ದಿಕ್ಕು ತಪ್ಪಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ನೊಣವಿನಕೆರೆಯ ನೀರನ್ನು ಪ್ರಾಣ ಹೋದರೂ ನಗರಕ್ಕೆ ನೀಡಲು ಸಾಧ್ಯವಿಲ್ಲ' ಎಂದರು.

ವಿಕಾಸ್, ಗಂಗಾಧರ್ ಆಲ್ಲೂರು, ಹಸಿರು ಸೇನೆ ಸಂಘದ ಬಸ್ತಿಹಳ್ಳಿರಾಜಣ್ಣ, ಶ್ರೀನಿವಾಸ್ ಹಾಜರಿದ್ದರು.

# ಕೆಸ್ತೂರು ಗ್ರಾ.ಪಂ.ನಲ್ಲಿ ಭ್ರಷ್ಟಾಚಾರ ಆರೋಪ: ರೈತ ಸಂಘದಿಂದ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮದ್ದೂರು

ತಾಲ್ಲೂಕಿನ ಕೆಸ್ತೂರು ಗ್ರಾಮ ಪಂಚಾಯಿತಿಯಲ್ಲಿ ಭ್ರಷ್ಟಾಚಾರ ನಡೆದಿದ್ದು, ಹಣ ದುರ್ಬಳಕೆಯಾಗಿದೆ ಎಂದು ಆರೋಪಿಸಿ ರೈತ ಸಂಘದ ಕಾರ್ಯಕರ್ತರು ಗ್ರಾಮ ಪಂಚಾಯಿತಿ ಕಾರ್ಯಾಲಯದ ಎದುರು ಪ್ರತಿಭಟನೆ ನಡೆಸಿದರು. ರೈತ ಸಂಘದ ತಾಲ್ಲೂಕು ಅಧ್ಯಕ್ಷ ವಳೆಗೆರೆಹಳ್ಳಿ ಉಮೇಶ್ ಮಾತನಾಡಿ, ಕೆಸ್ತೂರು ಗ್ರಾಮ ಪಂಚಾಯಿತಿಯಲ್ಲಿ 15ನೇ ಹಣ ಕಾಸು ಯೋಜನೆಯಡಿ 2020ರಿಂದ 23 ರವರೆಗಿನ ಕ್ರಿಯಾ ಯೋಜನೆಯ ಪೈಕಿ ಸುಮಾರು 25 ಕಾಮಗಾರಿಗಳ ಹಣವನ್ನು ಬಳಸದೇ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಅಲ್ಲದೇ ಅಡಗನಹಳ್ಳಿ ಗ್ರಾಮದ ಅಂಗನವಾಡಿ ನಿರ್ಮಾಣಕ್ಕೆ ಬಿಡುಗಡೆಯಾಗಿದ್ದ 5 ಲಕ್ಷ ಹಣ ದುರ್ಬಳಕೆಯಾಗಿದೆ. ದಾಖಲಾತಿಗಳ ಅಕ್ರಮ ತಿದ್ದುಪಡಿ ಅಸಮರ್ಪಕ ನಿರ್ವಹಣೆ ಮಾಡಿರುವುದನ್ನು ವಿರೋಧಿಸಿ ಇಂದು ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ತಾಲ್ಲೂಕು ಪಂಚಾಯಿತಿ ಇಒ ರಾಮಲಿಂಗಯ್ಯ ಸ್ಥಳಕ್ಕೆ ಆಗಮಿಸಿ ಮಾತನಾಡಿ, ಕೆಸ್ತೂರು ಗ್ರಾಮ ಪಂಚಾಯಿತಿ ಮೇಲೆ ಬಂದಿರುವ ಆರೋಪ ಸಂಬಂಧ ಶೀಘ್ರ ತನಿಖಾ ತಂಡ ರಚಿಸಿ ಅದರ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನಕಾರರು ಪ್ರತಿಭಟನೆ ಹಿಂಪಡೆದರು. ರೈತ ಮುಖಂಡರಾದ ಬೋರಾಪುರ ಶಂಕರೇಗೌಡ, ವಿನೋದ್ ಬಾಬು, ಮಲ್ಲಯ್ಯ, ಅಣ್ಣಯ್ಯ, ವರದಯ್ಯ, ರತ್ನಮ್ಮ ಇನ್ನಿತರರಿದ್ದರು.

### ರಸಗೊಬ್ಬರ ದಾಸ್ತಾನು ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ನಿರ್ದೇಶನ

# ಕಳಪೆ ರಸಗೊಬ್ಬರ ಸರಬರಾಜಾಗದಂತೆ ನಿಗಾ ವಹಿಸಿ

• ಉದಯವಾಹಿನಿ, ಮಡಿಕೇರಿ

ಯಾವುದೇ ಕಾರಣಕ್ಕೂ ಕಳಪೆ ರಸಗೊಬ್ಬರ ಸರಬರಾಜಾಗದಂತೆ ಹಾಗೂ ಅನ್ಯ ಉದ್ದೇಶಕ್ಕೆ ಬಳಕೆಯಾಗದಂತೆ ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದರು. ಜಿಲ್ಲೆಯ ರಸಗೊಬ್ಬರ ಕಂಪನಿ ಪ್ರತಿನಿಧಿಗಳು, ಸಹಕಾರ ಸಂಘಗಳು, ಕೃಷಿ ಪರಿಕರ ಮಾರಾಟ ಸಹಕಾರ ಸಂಘ ಪ್ರತಿನಿಧಿಗಳು ಮತ್ತಿತರ ಜೊತೆ ಜಿಲ್ಲಾಡಳಿತ ಮುಂಗಾರು ಹಾಗೂ ಮುಂಗಾರುಪೂರ್ವದ ಸಂದರ್ಭದಲ್ಲಿ ರಸಗೊಬ್ಬರ ದಾಸ್ತಾನು ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಹಲವು ನಿರ್ದೇಶನಗಳನ್ನು ಅಧಿಕಾರಿಗಳಿಗೆ ನೀಡಿದರು. ಹೊರ ಜಿಲ್ಲೆಗೆ ರಸಗೊಬ್ಬರ ಸಾಗಾಣಿಕೆ ಮಾಡದಂತೆ ಚೆಕ್‌ಪೋಸ್ಟ್‌ಗಳಲ್ಲಿ ಅಗತ್ಯ ತಪಾಸಣೆ ಮಾಡಬೇಕು. ಈ ನಿಟ್ಟಿನಲ್ಲಿ ಪೊಲೀಸರ ಸಹಾಯ ಪಡೆಯಬೇಕು ಎಂದು ಹೇಳಿದರು.

ರೈತರಿಗೆ ಯಾವುದೇ ರೀತಿಯ ಕಳಪೆ ರಸಗೊಬ್ಬರ ಸರಬರಾಜು ಆಗದಂತೆ ಎಲ್ಲಾ ರಸಗೊಬ್ಬರ ತಯಾರಿಕ ಸಂಸ್ಥೆ ಹಾಗೂ ಎಲ್ಲಾ ಖಾಸಗಿ ಮತ್ತು ಸಹಕಾರ ಸಂಘಗಳು ಎಚ್ಚರ ವಹಿಸಬೇಕು ಎಂದೂ ಅವರು ನಿರ್ದೇಶನ ನೀಡಿದರು. ರಸಗೊಬ್ಬರ ಸಮರ್ಪಕವಾಗಿ ಸರಬರಾಜು ಆಗಬೇಕು. ಕೃಷಿಕರಿಂದ ಯಾವುದೇ ರೀತಿ ದೂರು ಬರದಂತೆ ರಸಗೊಬ್ಬರ ಮಾರಾಟಗಾರರು, ಕಂಪನಿಗಳು, ಸಹಕಾರ ಸಂಘಗಳು ಗಮನಹರಿಸಬೇಕು ಎಂದು ಅವರು ಸೂಚಿಸಿದರು.

ರೈತರಿಗೆ ಸಬ್ಸಿಡಿ ದರದಲ್ಲಿ ನೀಡಲಾಗುತ್ತಿರುವ ರಸಗೊಬ್ಬರಗಳನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಕೆ ಮಾಡುತ್ತಿರುವುದನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲೆಯ ಸಹಾಯಕ ಕೃಷಿ ನಿರ್ದೇಶಕರು (ಜಾರಿದಳ), ಎಲ್ಲಾ ರಸಗೊಬ್ಬರ ಪರಿವೀಕ್ಷಕರುಗಳಿಗೆ ಕಾಲಕಾಲಕ್ಕೆ ಪರಿಶೀಲನೆ ಮಾಡುವಂತೆ, ಅಂತಹ ಪ್ರಕರಣಗಳು ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಕ್ರಮವಹಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಮುಂಬರುವ ಮುಂಗಾರು ಹಂಗಾಮಿನ ಪೂರ್ವದಲ್ಲಿ ಎಲ್ಲಾ ಸಗಟು ಮತ್ತು ಚಿಲ್ಲರೆ ರಸಗೊಬ್ಬರ ಮಾರಾಟಗಾರರಿಗೆ ಒಂದು ದಿನ ಕಾರ್ಯಾಗಾರ ಏರ್ಪಡಿಸಿ ಪಿಒಎಸ್ ಯಂತ್ರದ ಬಳಕೆ ಹಾಗೂ ಕೃಷಿ ಪರಿಕರಗಳ ಮಾರಾಟ ಕಾಯ್ದೆಗಳ ಬಗ್ಗೆ ಒಂದು ದಿನದ ತರಬೇತಿ ನೀಡಲಾಗುವುದು ಎಂದು ಸಭೆಗೆ ಹೇಳಿದರು. ಪ್ರಸಕ್ತ ಸಾಲಿನಲ್ಲಿ 99,893 ಮೆಟ್ರಿಕ್ ಟನ್ ವಿವಿಧ ರಸಗೊಬ್ಬರ ಪೂರೈಕೆ ಆಗಿತ್ತು. ಇಲ್ಲಿಯವರೆಗೆ ಒಟ್ಟು ಲಭ್ಯತೆ 1,31,502 ಮೆಟ್ರಿಕ್ ಟನ್ ಆಗಿದ್ದು, 1,04,396 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆಯಾಗಿದ್ದು, 27,106 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಉಳಿಕೆಯಾಗಿದೆ ಎಂದು ಅವರು ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

**ತಾಂತ್ರಿಕ ದೋಷ: ನಿಗಾ ಇಡಿ**

**ಎಲ್ಲಾ ಸಗಟು ಮತ್ತು ಚಿಲ್ಲರೆ ರಸಗೊಬ್ಬರ ಮಾರಾಟಗಾರರು 'ಪಿಒಎಸ್' ಯಂತ್ರದಲ್ಲಿನದಾಸ್ತಾನು, ವಾಸ್ತವಿಕ ಭೌತಿಕ ದಾಸ್ತಾನನ್ನು ತಾಳೆ ಇರುವಂತೆ ನೋಡಿಕೊಳ್ಳಬೇಕು. ಇಲ್ಲವಾದಲ್ಲಿ, ಪಿಒಎಸ್ ಯಂತ್ರದಲ್ಲಿನ ತೀರುವಳಿಗೊಳಿಸದ ದಾಸ್ತಾನನ್ನು ಪರಿಗಣಿಸಿ, ವಾಸ್ತಾವಿಕವಾಗಿ ಭೌತಿಕ ದಾಸ್ತಾನು ಕಡಿಮೆ ಇದ್ದರೂ, ಜಿಲ್ಲೆಗೆ ಬರುವ ರಸಗೊಬ್ಬರ ಪ್ರಮಾಣದಲ್ಲಿ ಕೊರತೆ ಉಂಟಾಗುತ್ತದೆ. ಆದ್ದರಿಂದ, ಎಲ್ಲಾ ಸಗಟು ಮತ್ತು ಚಿಲ್ಲರೆ ರಸಗೊಬ್ಬರ ಮಾರಾಟಗಾರರು ತಮ್ಮ ತಾಂತ್ರಿಕ ದೋಷಪೂರಿತ ಪಿಒಎಸ್ ಯಂತ್ರಗಳನ್ನು ಸಂಬಂಧಪಟ್ಟವರಿಂದ ನವೀಕರಿಸಿಕೊಳ್ಳಬೇಕು ಹಾಗೂ ಪ್ರತಿದಿನದ ಮಾರಾಟಕ್ಕೆ ಅನುಗುಣವಾಗಿ 'ಪಿಒಎಸ್' ಯಂತ್ರದಲ್ಲಿಯೂ ಸಹ ದಾಸ್ತಾನನ್ನು ತೀರುವಳಿಗೊಳಿಸಿ ವಾಸ್ತವಿಕ ಭೌತಿಕ ದಾಸ್ತಾನು ಹಾಗೂ 'ಪಿಒಎಸ್' ಯಂತ್ರದ ದಾಸ್ತಾನು ತಾಳೆ ಇರುವಂತೆ ನಿರ್ವಹಿಸಬೇಕು ಎಂದರು.**

**ಜಿಲ್ಲೆಯಲ್ಲಿ ಯೂರಿಯಾ ಮತ್ತು ಡಿ.ಎ.ಪಿ ರಸಗೊಬ್ಬರಗಳಿಗೆ ರೈತರಿಂದ ಹೆಚ್ಚಿನ ಬೇಡಿಕೆ ಇದ್ದು, ಸಕಾಲದಲ್ಲಿ ರೈತರಿಗೆ ರಸಗೊಬ್ಬರಗಳನ್ನು ದೊರೆಯುವಂತೆ ಮಾಡುವ ಸಂಬಂಧ ಈಗಾಗಲೇ ಕೇಂದ್ರ ಕಚೇರಿಗೆ ಜಿಲ್ಲೆಗೆ ಸರಬರಾಜು ಮಾಡಲಾಗುವ ಯೂರಿಯಾ ಮತ್ತು ಡಿ.ಎ.ಪಿ ರಸಗೊಬ್ಬರ ಪ್ರಮಾಣದಲ್ಲಿ ಶೇ 25ರಷ್ಟು ರಸಗೊಬ್ಬರವನ್ನು ಕಾಪು ದಾಸ್ತಾನೀಕರಿಸಲು ಕೋರಲಾಗಿದೆ. ಈ ಸಂಬಂಧ ಕೇಂದ್ರ ಕಚೇರಿಯಿಂದ ಪತ್ರ ಬಂದಿದೆ**

**– ಚಂದ್ರಶೇಖರ್, ಕೃಷಿ ಇಲಾಖೆ ಜಂಟಿ ನಿರ್ದೇಶಕ**

# ಪಿಕಾರ್ಡ್ ಬ್ಯಾಂಕ್ ಚುನಾವಣೆ: 13 ಸ್ಥಾನಗಳಲ್ಲೂ ಕಾಂಗ್ರೆಸ್ ಗೆಲುವು

• ಉದಯವಾಹಿನಿ, ಶ್ರೀರಂಗಪಟ್ಟಣ

ಶ್ರೀರಂಗಪಟ್ಟಣ ಪ್ರಾಥಮಿಕ ಸಹಕಾರ ಕೃಷಿ, ಗ್ರಾಮೀಣ ಅಭಿವೃದ್ಧಿ (ಪಿಕಾರ್ಡ್) ಬ್ಯಾಂಕ್‌ನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಎಲ್ಲಾ 13 ನಿರ್ದೇಶಕರ ಸ್ಥಾನಗಳಲ್ಲೂ ಕಾಂಗ್ರೆಸ್ ಬೆಂಬಲಿಗರು ಜಯಗಳಿಸಿದ್ದಾರೆ.

ಬ್ಯಾಂಕ್‌ನ ಆಡಳಿತ ಮಂಡಳಿಗೆ ಜ.25ರಂದು ಚುನಾವಣೆ ನಡೆದಿತ್ತು. ಈ ಪೈಕಿ ಕಾಂಗ್ರೆಸ್ ಬೆಂಬಲಿತ ಬಿ.ಜೆ. ನಾಗೇಶಪ್ರಭು, ಬುಟ್ಟೇಗೌಡ, ಕೆ. ಮಹದೇವು, ಪಿ. ಸದಾಶಿವ, ದೇವರಸಯ್ಯ, ಕೆ.ಸಿ. ವೀಣಾ, ಬಿ.ಎಸ್. ವಾಸು, ಬಿ.ಎಸ್. ಮೋಹನ್, ಕಮಲಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದರು.

ಚನಾವಣೆ ನಡೆದಿದ್ದ ನಾಲ್ಕು ಸ್ಥಾನಗಳ ಮತ ಎಣಿಕೆ ಹೈಕೋರ್ಟ್ ನಿರ್ದೇಶನದಂತೆ ಮಂಗಳವಾರ ನಡಿದಿದ್ದು, ನಾಲ್ಕೂ ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿಗರು ಜಯಗಳಿಸಿದ್ದಾರೆ.

ಕೆ.ಶೆಟ್ಟಹಳ್ಳಿ (ಕ್ಷೇತ್ರ-4) ಸಾಲಗಾರರ ಕ್ಷೇತ್ರದಿಂದ ಎಚ್.ಡಿ. ಮಹದೇವು (51) ಜಯಗಳಿಸಿದ್ದು, ಎಸ್.ಎಲ್. ದಿವಾಕರ್ (31) ಮತ್ತು ಕೇಶವ (14) ಪರಾಭವಗೊಂಡಿದ್ದಾರೆ. ಬಲ್ಲೇನಹಳ್ಳಿ (ಕ್ಷೇತ್ರ-6) ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಚಲುವೇಗೌಡ (107) ಜಯಗಳಿಸಿದ್ದು, ಶ್ರೀಕಂಠೇಗೌಡ (42) ಮತ್ತು ಸುರೇಶ್ (02) ಪರಾಭವಗೊಂಡಿದ್ದಾರೆ.

ಕಸಬಾ ಹೋಬಳಿ (ಕ್ಷೇತ್ರ-9) 3ನೇ ಸಾಗಾರರ ಕ್ಷೇತ್ರದಿಂದ ಚಿಕ್ಕತಾಯಮ್ಮ (18) ಜಯಗಳಿಸಿದ್ದು, ಮಹದೇವು (12) ಸೋಲನುಭವಿಸಿದ್ದಾರೆ.

ಬೆಳಗೊಳ ಹೋಬಳಿ (ಕ್ಷೇತ್ರ-10) ಪಾಲಹಳ್ಳಿ ಸಾಲಗಾರರ ಕ್ಷೇತ್ರದಿಂದ ಸಿ. ದೇವರಾಜು (24) ಆಯ್ಕೆಯಾಗಿದ್ದು, ಶಂಕರೇಗೌಡ ಪರಾಭವಗೊಂಡಿದ್ದಾರೆ ಎಂದು ಚನಾವಣಾಧಿಕಾರಿ ಎ.ಬಿ.ವೇಣು ತಿಳಿಸಿದರು. ಕೆ.ಶೆಟ್ಟಹಳ್ಳಿ (ಕ್ಷೇತ್ರ-4) ಸಾಲಗಾರರ ಕ್ಷೇತ್ರ, ಬಲ್ಲೇನಹಳ್ಳಿ (ಕ್ಷೇತ್ರ-6) ಸಾಲಗಾರರ ಸಾಮಾನ್ಯ ಕ್ಷೇತ್ರ, ಕಸಬಾ ಹೋಬಳಿ (ಕ್ಷೇತ್ರ-9) 3ನೇ ಸಾಗಾರರ ಕ್ಷೇತ್ರ, ಬೆಳಗೊಳ ಹೋಬಳಿ (ಕ್ಷೇತ್ರ-10) ಪಾಲಹಳ್ಳಿ ಸಾಲಗಾರರ ಕ್ಷೇತ್ರಗಳಿಗೆ ಜ.25ರಂದು ಚುನಾವಣೆ ನಡೆದಿತ್ತು. ಆದರೆ ಅರ್ಹ, ಅನರ್ಹ ಮತದಾರರು ಎಂಬ ಗೊಂದಲದಿಂದ ಅಭ್ಯರ್ಥಿಗಳು ಹೈಕೋರ್ಟ್ ಮೊರೆ ಹೋಗಿದ್ದರು. ಈ ಹಿನ್ನೆಲೆಯಲ್ಲಿ ಮತ ಎಣಿಕೆ ಪ್ರಕ್ರಿಯೆಗೆ ನ್ಯಾಯಾಲಯ ತಡೆ ನೀಡಿತ್ತು. ವಿಚಾರಣೆ ಪೂರ್ಣಗೊಳಿಸಿದ ಹೈಕೋರ್ಟ್ ಎರಡೂ ವರ್ಗಗಳ ಮತಗಳನ್ನು ಪರಿಗಣಿಸುವಂತೆ ಸೂಚನೆ ನೀಡಿದ ಮೇರೆಗೆ ಮಂಗಳವಾರ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಲಾಯಿತು.


ಉದಯವಾಹಿನಿ ಚಿತ್ರ

**ಕಾಂಗ್ರೆಸ್ ಸಂಭ್ರಮಾಚರಣೆ**

**ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಚುನಾಯಿತ ನಿರ್ದೇಶಕರು ಹಾಗೂ ಅವರ ಬೆಂಬಲಿಗರು ಪಟ್ಟಣದಲ್ಲಿ ಸಂಭ್ರಮ ಆಚರಿಸಿದರು. ಸಾಲುಸಾಲು ಪಟಾಕಿ ಸಿಡಿಸಿ, ಸಿಹಿ ಹಂಚಿದರು. ಶಾಸಕ ರಮೇಶ ಬಂಡಿಸಿದ್ದೇಗೌಡ ಮತ್ತು ಮನ್‌ಮುಲ್ ಅಧ್ಯಕ್ಷ ಬಿ. ಬೋರೇಗೌಡ ಅವರ ಪರ ಘೋಷಣೆ ಕೂಗಿದರು.**

# ಎಡದಂಡೆ ಕಾಲುವೆಗೆ ನೀರು, ಶಾಸಕ ಇಕ್ಬಾಲ್ ಚಾಲನೆ

• ಉದಯವಾಹಿನಿ, ರಾಮನಗರ

ಎರಡು ದಶಕಗಳ ತರುವಾಯ ಸಾವಿರಾರು ಹೆಕ್ಟೇರ್ ಕೃಷಿ ಪ್ರದೇಶಕ್ಕೆ ಮಂಚನಬೆಲೆ ಜಲಾಶಯದ ಎಡದಂಡೆ ಕಾಲುವೆಗೆ ನೀರು ಹರಿಸುವ ಕಾರ್ಯಕ್ಕೆ ಶಾಸಕ ಇಕ್ಬಾಲ್ ಹುಸೇನ್ ಚಾಲನೆ ನೀಡಿದರು. ಮಂಚನಬೆಲೆ ಜಲಾಶಯದಲ್ಲಿ ನೀರನ್ನು ಲಿಫ್ಟ್ ಮಾಡುವ ಯಂತ್ರಕ್ಕೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಶಾಸಕ ಇಕ್ಬಾಲ್ ಹುಸೇನ್ ಎಡದಂಡೆ ಕಾಲುವೆಗೆ ನೀರು ಹರಿಸಿದರು. ಕಾಲುವೆಯಲ್ಲಿನೀರು ಹರಿಯುತ್ತಿರುವುದನ್ನು ಕಂಡು ಸಂತಸಗೊಂಡ ಗ್ರಾಮಸ್ಥರು ಇಕ್ಬಾಲ್ ಹುಸೇನ್‌ಗೆ ರೇಷ್ಮೆ ಹಾರ ಹಾಕಿ ಅಭಿನಂದಿಸಿದರು. ಆನಂತರ ಶಾಸಕರು ನಾಲೆ ದಂಡೆ ಮೇಲೆ ಕಾಲ್ನಡಿಗೆಯಲ್ಲಿ ಸಾಗಿ ನೀರು ಹರಿಯುತ್ತಿರುವುದನ್ನು ವೀಕ್ಷಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಚನಬೆಲೆ ಜಲಾಶಯದಿಂದ ಎಡದಂಡೆ ನಾಲೆಯಿಂದ ನೀರು ಹರಿಯುವುದನ್ನು ರೈತರ ಬಹು ವರ್ಷಗಳ ಕನಸಾಗಿತ್ತು. 20 ವರ್ಷಗಳಿಂದ ನಾಲೆ ಯಲ್ಲಿ ನೀರು ಹರಿಸಿರಲಿಲ್ಲ. ರೈತನ ಮಗನಾಗಿ, ರೈತನಾಗಿ ಆ ಕನಸನ್ನು ಸಾಕಾರಗೊಳಿಸುವ ಕೆಲಸ ಮಾಡಿರುವುದಕ್ಕೆ ಖುಷಿ ತಂದಿದೆ ಎಂದರು. ಕೋಟ್ಯಂತರ ರುಪಾಯಿ ಖರ್ಚು ಮಾಡಿ ನಾಲೆ ನಿರ್ಮಿಸಿದ್ದರೂ ಅದರ ಪ್ರಯೋಜನ ಪಡೆಯಲಿಲ್ಲ ಎಂಬ ಕೊರಗು ನೀಗಿದ್ದು, ಇದರಿಂದ ಹೈನುಗಾರಿಕೆ, ರೇಷ್ಮೆ, ಕೃಷಿಚಟುವಟಿಕೆಗಳಿಗೆ ಅನುಕೂಲವಾಗಲಿದೆ. ಅಲ್ಲದೆ ಅಂತರ್ಜಲ ವೃದ್ಧಿಯಾಗಲಿದೆ ಎಂದರು.

ಈಗ ಎಡ ದಂಡೆ ನಾಲೆಯನ್ನು 20 ಕಿ.ಮೀ.ವರೆಗೆ ಸ್ವಚ್ಛಗೊಳಿಸಿದ್ದು, ಅಲ್ಲಿವರೆಗೂ ನೀರು ಸರಾಗವಾಗಿ ಹರಿಯಲಿದೆ. ಮುಂದಿನ 15 ದಿನದೊಳಗೆ ಬಲದಂಡೆ ನಾಲೆಯನ್ನು ದುರಸ್ತಿಗೊಳಿಸಿ ನೀರು ಬಿಡಲಾಗುವುದು. ಎಡದಂಡೆ ನಾಲೆಯಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಲಾಗು ತ್ತಿದೆ. ಕೈಲಾಂಚವರೆಗೂ ನೀರು ಹರಿಯುವುದರಲ್ಲಿ ಸಂಶಯ ಇಲ್ಲ ಎಂದರು. ಕೇಂದ್ರ **ಸರ್ಕಾರಕ್ಕೆ ಪ್ರಸ್ತಾವನೆ:** ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮಾಜಿ ಸಂಸದ ಡಿ.ಕೆ. ಸುರೇಶ್ ಈ ಕಾರ್ಯಕ್ಕೆ ಪ್ರೋತ್ಸಾಹ ನೀಡಿದರು.

ಶಾಸಕ ಬಾಲಕೃಷ್ಣ ಅವರ ಸಹಕಾರವನ್ನು ಎಂದಿಗೂ ಮರೆಯುವಂತಿಲ್ಲ ಎಂದು ಹೇಳಿದ ಶಾಸಕರು, ಮಂಚನಬೆಲೆ ಜಲಾಶಯದ ಎಡ ಮತ್ತು ಬಲ ದಂಡೆ ಕಾಲುವೆಗಳನ್ನು ನವೀಕರಣಗೊಳಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೂ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು. ಮಾಜಿ ಶಾಸಕ ಕೆ.ರಾಜು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಗಾಣಕಲ್ ನಟರಾಜ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಕೆಎಂಎಫ್ ಮಾಜಿ ಅಧ್ಯಕ್ಷ ಪಿ. ನಾಗರಾಜು, ನಗರಸಭೆ ಉಪಾಧ್ಯಕ್ಷೆ ಆಯಿಷಾ ಬಾನು, ಸುಗ್ಗನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಅರ್ಪಿತಾ, ಉಪಾಧ್ಯಕ್ಷ ಚಿಕ್ಕ ಸ್ವಾಮಿ ಇನ್ನಿತರರು ಹಾಜರಿದ್ದರು.


ಉದಯವಾಹಿನಿ ಚಿತ್ರ

# ಮತ್ತೊಬ್ಬ ವಿದ್ಯಾರ್ಥಿ ಸಾವು

• ಉದಯವಾಹಿನಿ, ಮಂಡ್ಯ

ಕಲುಷಿತ ಆಹಾರ ಸೇವನೆಯಿಂದ ಅಸ್ವಸ್ಥಗೊಂಡು ಚಿಕಿತ್ಸೆ ಪಡೆಯುತ್ತಿದ್ದ 40 ಮಕ್ಕಳ ಪೈಕಿ, ತಾಲ್ಲೂಕಿನ ಟಿ.ಕಾಗೇಪುರ ಗೋಕುಲ ವಿದ್ಯಾಸಂಸ್ಥೆಯ ಮತ್ತೊಬ್ಬ ವಿದ್ಯಾರ್ಥಿ, ಮೇಘಾಲಯದ ನಮೀಬ್ ಮಾಂತೆ (12) ಮೈಸೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಸಾವಿನ ಸಂಖ್ಯೆ 2ಕ್ಕೇರಿದೆ. ಉದ್ಯಮಿ ಪುಷ್ಪೇಂದ್ರಕುಮಾರ್ ಕಳಿಸಿದ್ದ ಆಹಾರ ಸೇವಿಸಿ ಅಸ್ವಸ್ಥಗೊಂಡಿದ್ದ ಮಾಂತೆಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆ ಯಿಂದ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಉದ್ಯಮಿ ಸೇರಿ ಆತನ 40 ಸಂಬಂಧಿಕರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

**ಮೇಘಾಲಯದ ಅಧಿಕಾರಿಗಳು ಭೇಟಿ:** ಮೇಘಾಲಯ ಆಡಳಿತ ಇಲಾಖೆಯ ಆಯುಕ್ತ ಸಿರಿಲ್, ಕಾರ್ಯದರ್ಶಿ ಕ್ರಯಿಲ್ ವಿ ಡಿಂಗ್ ದೋ ಅವರು ಮಿಮ್ಸ್ ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ, ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಿ, ವೈದ್ಯರಿಂದ ಮಾಹಿತಿ ಪಡೆದರು. ಘಟನೆಯ ಬಗ್ಗೆ ಡಿಸಿ ಕುಮಾರ ಮಾಹಿತಿ ನೀಡಿದರು.

# ಕನಕ ಭವನ, ವಿದ್ಯಾರ್ಥಿ ನಿಲಯದ ಕಾಮಗಾರಿಯನ್ನು ಶೀಘ್ರವಾಗಿ ಪರಿಪೂರ್ಣಗೊಳಿಸಿ

• ಉದಯವಾಹಿನಿ, ಕೋಲಾರ

ಕುರುಬ ಸಮಾಜದ ಚಟುವಟಿಕೆಗಳಿಗಾಗಿ ಸ್ವಂತ ಸಮುದಾಯದ ಭವನ ನಿರ್ಮಾಣವಾಗುತ್ತಿರುವುದು ಸಂತೋಷಕರವೆಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ತಿಳಿಸಿದರು. ನಗರದ ಕುವೆಂಪು ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಕನಕ ಭವನ ಹಾಗೂ ವಿದ್ಯಾರ್ಥಿ ನಿಲಯದ ಕಾಮಗಾರಿಯನ್ನು ವೀಕ್ಷಿಸಿ ಮಾತನಾಡಿದ ಅವರು, ಕುರುಬ ಸಮಾಜದ ಬಡವರಿಗೆ ಅನುಕೂಲವಾಗಲು ಭವನ ನಿರ್ಮಾಣವಾಗುತ್ತಿದೆ. ಶೀಘ್ರವಾಗಿ ಕಾಮಗಾರಿಯನ್ನು ಪರಿಪೂರ್ಣಗೊಳಿಸಿ ಎಂದು ಹೇಳಿದರು.

ಭವನ ನಿರ್ಮಾಣ ಮಾಡಲು ಸಿಎಂ ಸಿದ್ದರಾಮಯ್ಯ ಅವರು ಎರಡು ಕೋಟಿ ಮಂಜೂರು ಮಾಡಿದ್ದರು. ಆರಂಭದ ಕಾಮಗಾರಿಗೆ 50 ಲಕ್ಷ ರೂ. ಬಿಡುಗಡೆಗೊಂಡಿದೆ. ಉಳಿದ ಹಣವನ್ನು ಕೂಡಲೇ ಬಿಡುಗಡೆಗೊಳಿಸಿ ಎಂದು ಕೆಎಸ್‌ಆರ್‌ಟಿಸಿ ಮುನಿಯಪ್ಪ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕನಕ ಭವನ ಹಾಗೂ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಕೆಎಸ್‌ಆರ್‌ಟಿಸಿ ಮುನಿಯಪ್ಪ, ಖಜಾಂಚಿ ಕೆಎನ್‌ಎನ್ ಪ್ರಕಾಶ್, ಕುರುಬ ಸಮುದಾಯ ಹಿರಿಯ ಮುಖಂಡರಾದ ಅಂಚೆ ಅಶ್ವಥ್, ನಗರಸಭೆ ಸದಸ್ಯ ಪ್ರಸಾದ್ ಬಾಬು, ನಗರಸಭೆ ಮಾಜಿ ಅಧ್ಯಕ್ಷ ಪ್ರಕಾಶ್, ಅಂಚೆ ವಿಜಯ್, ತ್ಯಾಗರಾಜ್ ಮುದ್ದಪ್ಪ, ವಿಶ್ವನಾಥ್, ರಾಜು, ಶ್ರೀನಾಥ್, ಚಂದನ್ ಮತ್ತಿತರರು ಹಾಜರಿದ್ದರು.


ಉದಯವಾಹಿನಿ ಚಿತ್ರ

**ಹಣ ಬಿಡುಗಡೆಗೆ ಪ್ರಯತ್ನ**

**ಕೆ.ವಿ.ಪ್ರಭಾಕರ್ ಪ್ರತಿಕ್ರಿಯಿಸಿ ಮುಖ್ಯಮಂತ್ರಿಗಳ ಬಳಿ ಚರ್ಚಿಸಿ ಸರ್ಕಾರ ಮಟ್ಟದಲ್ಲಿ ಬಾಕಿ ಇರುವ ಹಣವನ್ನು ಬಿಡುಗಡೆಗೊಳಿಸಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.**

**-ಕೆ.ವಿ.ಪ್ರಭಾಕರ್, ಮಾಧ್ಯಮ ಸಲಹೆಗಾರ**

# ಮೈಸೂರು: ಹಾಳು ಸುರಿಯುತ್ತಿದೆ ಅಂಬೇಡ್ಕರ್ ಭವನ

## ಉಳಿಕೆ ಕಾಮಗಾರಿ ಪುನರಾರಂಭಕ್ಕೆ ಬೇಕಾದ ಅನುದಾನ ನೀಡಲು ಸಚಿವ ಸಂಪುಟದಲ್ಲಿ ಒಪ್ಪಿಗೆ

• ಉದಯವಾಹಿನಿ, ಮೈಸೂರು:

ಇಲ್ಲಿನ ದೇವರಾಜ ಮೊಹಲ್ಲಾದ ಲೋಕಾಯುಕ್ತ ಪೊಲೀಸ್ ಕಚೇರಿ ಎದುರು ನಿರ್ಮಿಸಲಾಗುತ್ತಿರುವ ಅಂಬೇಡ್ಕರ್ ಭವನ ಹಾಳು ಸುರಿಯುತ್ತಿದೆ. ಕಟ್ಟಡ ಕಟ್ಟಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡದಿರುವ ಸರ್ಕಾರದ ವಿರುದ್ಧ ದಲಿತ ಸಂಘಟನೆಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಹೋರಾಟದ ಹಾದಿ ತುಳಿದಿವೆ.

ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಈ ಬಾರಿಯ ಜಯಂತಿ ಆಚರಣೆ (ಏ.14) ಕಾರ್ಯಕ್ರಮದ ವೇಳೆಗೂ ಭವನ ಸಿದ್ಧಗೊಳ್ಳುವುದು ಅನುಮಾನ. ಏಕೆಂದರೆ, ಸ್ಥಗಿತಗೊಂಡಿರುವ ವಿವಿಧ ಕಾಮಗಾರಿಗಳಿಗೆ ಈವರೆಗೂ ಚಾಲನೆಯೇ ದೊರೆತಿಲ್ಲ. ಇಚ್ಛಾಶಕ್ತಿಯ ಕೊರತೆ, ಅನುದಾನದ ಅಲಭ್ಯತೆ ಸೇರಿದಂತೆ ಹಲವು ಕಾರಣಗಳಿಂದಾಗಿ 'ವಿಘ್ನ'ಗಳನ್ನು ಎದುರಿಸುತ್ತಲೇ ಬಂದಿರುವ ಈ ಯೋಜನೆಯು ಪೂರ್ಣಗೊಳ್ಳುವುದು ಯಾವಾಗ ಎನ್ನುವುದು ಬಹುಜನರಾದ ಅಂಬೇಡ್ಕರ್ ಅನುಯಾಯಿಗಳನ್ನು ಕಾಡುತ್ತಿದೆ. ಕಟ್ಟಡವೀಗ ಭೂತಬಂಗಲೆಯಂತಾಗಿದೆ. ಈವರೆಗೆ ಕೋಟ್ಯಂತರ ರೂಪಾಯಿ ಖರ್ಚಾಗಿದ್ದರೂ, ಅದು ಬಳಕೆಗೆ ಬರುತ್ತಿಲ್ಲ. ಸರ್ಕಾರಗಳೇ ಬದಲಾದರೂ, ವರುಷಗಳು ಉರುಳಿದ್ದರೂ ಭವನದ ಸ್ಥಿತಿ ಬದಲಾಗಿಲ್ಲ.

**ಈಗಿನವರ ಹೆಗಲಿಗೆ:** ಭವನ ಪೂರ್ಣಗೊಳಿಸಿ ಜನರು ಬಳಕೆಗೆ ಮುಕ್ತಗೊಳಿಸುವ ಜವಾಬ್ದಾರಿ ಈಗ, ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿಯೂ ಆಗಿರುವ ಸಮಾಜಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಹೆಗಲಿಗೆ ಬಂದಿದೆ. 27 ಕೋಟಿಯನ್ನು ಈಗ ಕೊಡಬೇಕಾಗಿದೆ. ಹಿಂದಿನ ಬಿಜೆಪಿ ಸರ್ಕಾರದಲ್ಲೂ ಪೂರ್ಣಗೊಳ್ಳಲಿಲ್ಲ. ಹೊಸ ಸರ್ಕಾರ (ಕಾಂಗ್ರೆಸ್) ಬಂದ ನಂತರವೂ ಕಾಮಗಾರಿ ಪುನರಾರಂಭಕ್ಕೆ ಕ್ರಮ ಕೈಗೊಳ್ಳದಿರುವುದು ದಲಿತ ಸಂಘಟನೆಗಳ ಆಕ್ರೋಶಕ್ಕೆ ಕಾರಣವಾಗಿದೆ. ಬೃಹತ್ ಕಟ್ಟಡವೇನೋ ನಿರ್ಮಾಣಗೊಂಡಿದೆ. ಆದರೆ, ಇತರ 'ಅಗತ್ಯ' ಕೆಲಸಗಳು ಪೂರ್ಣಗೊಳ್ಳದಿರುವುದು ಸಂಘಟನೆಗಳ ಕೋಪಕ್ಕೆ ಕಾರಣವಾಗಿದೆ.

ಸಚಿವ ಎಚ್.ಸಿ.ಮಹದೇವಪ್ಪ ಅವರ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟಿಸುವ ನಿರ್ಧಾರವನ್ನೂ ದಸಂಸ ವತಿಯಿಂದ ಮಾಡಲಾಗಿದೆ. ಈ ಹಿಂದೆಯೂ ಹಲವು ಬಾರಿ ಪ್ರತಿಭಟನೆಗಳು ನಡೆದಿವೆ. ಅಂಬೇಡ್ಕರ್ ಮಹಾಪರಿನಿರ್ವಾಣ ಕಾರ್ಯಕ್ರಮದ ವೇಳೆಯೂ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತರೆಡ್ಡಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು.

**2012ರಲ್ಲೇ ಆರಂಭ:** ಭವನದ ನಿರ್ಮಾಣ ಕಾಮಗಾರಿಯನ್ನು 2012ರಲ್ಲಿ ಪ್ರಾರಂಭಿಸಲಾಗಿತ್ತು. ನಡೆದಿರುವುದು ಕಟ್ಟಡದ ಕೆಲಸವಷ್ಟೆ. ಅಂದರೆ, ಹೊರ ಹಾಗೂ ಒಳಭಾಗದ ಸಿವಿಲ್ ಕಾಮಗಾರಿಗಳು ಶೇ 70ರಷ್ಟು ಮಾತ್ರವೇ ಪೂರ್ಣಗೊಂಡಿದೆ. ಕಟ್ಟಡದ ಸುತ್ತಲೂ ನಿರ್ವಹಣೆಗೆ ಆದ್ಯತೆ ನೀಡುತ್ತಿಲ್ಲ. ಇದು ಅಂಬೇಡ್ಕರ್ ಅನುಯಾಯಿಗಳ ಅಸಮಾಧಾನಕ್ಕೆ ಕಾರಣವಾಗಿದೆ. ಆರಂಭದಲ್ಲಿ 14.66 ಕೋಟಿಗೆ ಯೋಜನೆ ರೂಪಿಸಲಾಗಿತ್ತು. ಅದು ಪರಿಷ್ಕರಣೆಗೊಂಡು 20.66 ಕೋಟಿಗೆ ಏರಿಕೆಯಾಯಿತು. ಮುಡಾದಿಂದ 10.56 ಕೋಟಿ, ಸಮಾಜ ಕಲ್ಯಾಣ ಇಲಾಖೆಯಿಂದ 6.50 ಕೋಟಿ, ಮಹಾನಗರಪಾಲಿಕೆಯಿಂದ 3 ಕೋಟಿ ಹಾಗೂ ಜಿಲ್ಲಾ ಪಂಚಾಯಿತಿಯಿಂದ 50 ಲಕ್ಷ ನೀಡಲಾಗಿದೆ. ಪರಿಷ್ಕರಿಸಲಾದ ಅಂದಾಜು ಪಟ್ಟಿಗೆ 2018ರ ಜ.8ರಂದು ಆಡಳಿತಾತ್ಮಕ ಅನುಮೋದನೆ ಕೊಡಲಾಗಿತ್ತು.


ಉದಯವಾಹಿನಿ ಚಿತ್ರ

**27 ಕೋಟಿ ಅನುದಾನದ ಅಗತ್ಯ**



**ಭವನದ ಸುತ್ತಲೂ ಆಗಾಗ ನಿರ್ವಹಣೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಉಳಿಕೆ ಕಾಮಗಾರಿ ಪುನರಾರಂಭಕ್ಕೆ ಬೇಕಾದ ಅನುದಾನ ನೀಡಲು ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಲಾಗಿದೆ. ಶೀಘ್ರದಲ್ಲೇ ಕೆಲಸ ಆರಂಭಿಸಲಾಗುವುದು**

**-ಡಾ.ಎಚ್.ಸಿ.ಮಹದೇವಪ್ಪ
ಜಿಲ್ಲಾ ಉಸ್ತುವಾರಿ ಸಚಿವ**

**ಭವನದ ವಿಷಯದಲ್ಲಿ ಉಸ್ತುವಾರಿ ಸಚಿವರು ಹಾಗೂ ಅಧಿಕಾರಿಗಳ ಭರವಸೆ ಈಡೇರಿಲ್ಲ. ಸದ್ಯಕ್ಕೆ ಕಾಮಗಾರಿ ಆರಂಭದ ಲಕ್ಷಣಗಳು ಕಾಣಿಸುತ್ತಿಲ್ಲ. ಹೀಗಾಗಿ ಹೋರಾಟದ ಹಾದಿ ಅನಿವಾರ್ಯವಾಗಿದೆ**

**-ಆಲಗೂಡು ಶಿವಕುಮಾರ್
ಜಿಲ್ಲಾ ಸಂಚಾಲಕ ದಂಸಸ ಮೈಸೂರು**

## ಮಿನಿ ನ್ಯೂಸ್

### ಗುಡಿಸಲಿಗೆ ಬೆಂಕಿ: ದವಸ, ಧಾನ್ಯ ಭಸ್ಮ

• ಉದಯವಾಹಿನಿ, ಕನಕಪುರ

ತಾಲ್ಲೂಕಿನ ಕೋಡಿಹಳ್ಳಿ ಹೋಬಳಿ ಗುರುವಯ್ಯನ ದೊಡ್ಡಿ ಗ್ರಾಮದಲ್ಲಿ ಈಚೆಗೆ ಗುಡಿಸಲಿಗೆ ಬೆಂಕಿ ಬಿದ್ದು, ಗುಡಿಸಲಿನಲ್ಲಿದ್ದ ದವಸ, ಧಾನ್ಯ, ಮನೆಯಲ್ಲಿನ ಎಲ್ಲಾ ವಸ್ತುಗಳು ಸುಟ್ಟು ಭಸ್ಮವಾಗಿವೆ. ಸುಟ್ಟ ಗುಡಿಸಲು ಗುರುವಯ್ಯನದೊಡ್ಡಿ ಗ್ರಾಮದ ಜಯಮ್ಮ ಎಂಬು ವರಿಗೆ ಸೇರಿದ್ದಾಗಿದೆ. ಅವರು ಕುರಿ, ಮೇಕೆ ಮೇಯಿಸಲು ಹೊರಗಡೆ ಹೋಗಿದ್ದಾಗ ಈ ಅವಘಡ ಸಂಭವಿಸಿದೆ.

ಬೆಂಕಿ ಕಂಡು ಅಕ್ಕಪಕ್ಕದ ಮನೆಯವರು ಅಗ್ನಿಶಾಮಕ ದಳದವರಿಗೆ ಮಾಹಿತಿ ನೀಡಿದ್ದು, ದಳದವರು ಬೆಂಕಿ ನಂದಿಸಿದ್ದಾರೆ. ಆದರೆ, ಗುಡಿಸಲಿನಲ್ಲಿದ್ದ ದವಸ, ಧಾನ್ಯ, ಗೃಹ ಉಪ ಯೋಗಿ ವಸ್ತುಗಳು, ನಗದು, ಚಿನ್ನಾಭರಣ ಬೆಂಕಿಗಾಹುತಿಯಾಗಿವೆ.

ಬೆಂಕಿಗೆ ಎರಡು ಮೇಕೆ, 300 ಕೆ.ಜಿ.ಹುರುಳಿಕಾಳು, ಹಲಸಂದೆ ಕಾಳು, ಒಂದು ಮೂಟೆ ಭತ್ತ, 400 ಕೆ.ಜಿ ರಾಗಿ, 200 ಕೆ.ಜಿ ಅಕ್ಕಿ, ನಾಲ್ಕು ಚೀಲ ಕೊಬ್ಬರಿ, 40 ಸಾವಿರ ನಗದು, ಒಂದು ಚಿನ್ನದ ನೆಕ್‌ಲೆಸ್, ಕಿವಿ ಒಲೆ, ಮಾಂಗಲ್ಯ ಸರ, ಟಿ ವಿ, ಬೀರು, ಬಟ್ಟೆ ಸೇರಿದಂತೆ ಲಕ್ಷಾಂತರ ರೂ ಬೆಲೆ ಬಾಳುವ ವಸ್ತುಗಳು ಸುಟ್ಟು ಭಸ್ಮವಾಗಿವೆ. ಹಾಗಾಗಿ ತಾಲ್ಲೂಕು ಆಡಳಿತವು ಸಂತ್ರಸ್ಥರಿಗೆ ಸೂಕ್ತ ಪರಿಹಾರ ನೀಡುವ ಜತೆಗೆ ಪುನರ್ವಸತಿ ಕಲ್ಪಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಕೋಡಿಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

### ಮೈಕ್ರೋ ಫೈನಾನ್ಸ್ ಕಿರುಕುಳ ಆರೋಪ: ವ್ಯಕ್ತಿ ಆತ್ಮಹತ್ಯೆ

• ಉದಯವಾಹಿನಿ, ಗೌರಿಬಿದನೂರು

ಮೈಕ್ರೋ ಫೈನಾನ್ಸ್‌ಗಳ ಕಿರುಕುಳಕ್ಕೆ ಬೇಸತ್ತ ತಾಲ್ಲೂಕಿನ ಎಂ.ಜಾಲಹಳ್ಳಿಯ ಮಂಜುನಾಥ್ (34) ಭಾನುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಮಗ ಗ್ರಾಮದಲ್ಲಿ ತಳ್ಳುವ ಗಾಡಿಯಲ್ಲಿ ಎಗ್‌ರೈಸ್ ಮಾರಾಟ ಮಾಡಿ ಕುಟುಂಬ ನಿರ್ವಹಣೆ ಮಾಡುತ್ತಿದ್ದ. ಕೆಲವು ಖಾಸಗಿ ಫೈನಾನ್ಸ್‌ಗಳಲ್ಲಿ 6.25ಲಕ್ಷ ಸಾಲ ಮಾಡಿದ್ದ. ಭಾನುವಾರ ಎಲ್‌ಎನ್‌ಟಿ ಫೈನಾನ್ಸ್‌ನವರು 10ಸಾವಿರ ಹಣದ ಕಂತು ಕಟ್ಟಲೇಬೇಕು ಎಂದು ಪಟ್ಟು ಹಿಡಿದಿದ್ದರು. ಮತ್ತೊಬ್ಬರ ಬಳಿ ಹಣ ತಂದು ಸಾಲ ಕಟ್ಟುವುದಾಗಿ ಹೇಳಿ ಇಡಗೂರು ರಸ್ತೆ ಬದಿ ಜಮೀನಿನಲ್ಲಿ ನೇಣು ಹಾಕಿಕೊಂಡಿದ್ದಾನೆ' ಎಂದು ಮೃತಪಟ್ಟ ಮಂಜುನಾಥ್ ಅವರ ತಾಯಿ ಗಂಗರತ್ನಮ್ಮ ಹೇಳಿದ್ದಾರೆ.

ಕುಟುಂಬಸ್ಥರು ಗೌರಿಬಿದನೂರಿನ ಎಲ್‌ಎನ್‌ಟಿ ಫೈನಾನ್ಸ್ ಕಚೇರಿ ಎದುರು ಪ್ರತಿಭಟಿಸಲು ಮುಂದಾಗುತ್ತಿದ್ದಂತೆ ಸಿಬ್ಬಂದಿ ಕಚೇರಿಗೆ ಬೀಗ ಹಾಕಿಕೊಂಡು ಹೊರಟು ಹೋದರು. ಶವ ತಂದು ಕಚೇರಿ ಮುಂದೆ ಪ್ರತಿಭಟಿಸಲು ಮುಂದಾದರು. ಆಗ ವೃತ್ತ ನಿರೀಕ್ಷಕ ಕೆ.ಪಿ ಸತ್ಯನಾರಾಯಣ್ ಮಧ್ಯಪ್ರವೇಶಿಸಿ ಫೈನಾನ್ಸ್ ವಿರುದ್ಧ ಕ್ರಮಕೈಗೊಳ್ಳುವ ಭರವಸೆ ನೀಡಿದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

### ಶಿವಪುರ ಪಂಚಾಯಿತಿ ಬಜೆಟ್ ಮಂಡನೆ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಶಿವಪುರ ಗ್ರಾಮ ಪಂಚಾಯಿತಿ 2025-26ನೇ ಸಾಲಿನ 1.83 ಕೋಟಿ ಮೊತ್ತದ ಬಜೆಟ್ ಅನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷ ಚನ್ನಬಸಪ್ಪ ಮಂಡಿಸಿದರು. ಪಂಚಾಯಿತಿ ಕಚೇರಿಯಲ್ಲಿ ನಡೆದ ಬಜೆಟ್ ಸಭೆಯಲ್ಲಿ 15ನೇ ಹಣಕಾಸಿನಲ್ಲಿ ಕುಡಿಯುವ ನೀರಿನ ಸಾಮಗ್ರಿ ಖರೀದಿ 3.60 ಲಕ್ಷ, ಕುಡಿಯುವ ನೀರಿನ ಪ್ಲಾಟ್ ಫಾರಂ ದುರಸ್ತಿ 90 ಸಾವಿರ, ಕುಡಿಯುವ ನೀರಿನ ಪೈಪ್ ಲೈನ್ ದುರಸ್ತಿ 1.60 ಲಕ್ಷ, ಗ್ರಾಮೀಣ ನೈರ್ಮಲ್ಯ ನಿರ್ವಹಣೆ 4.25 ಲಕ್ಷ, ಚರಂಡಿಗಳ ನಿರ್ಮಾಣ 4.19 ಲಕ್ಷ, ಕಟ್ಟಡ ನಿರ್ವಹಣಾ ವೆಚ್ಚ 2.65 ಲಕ್ಷ, ಬೀದಿ ದೀಪ ಖರೀದಿ ವೆಚ್ಚ 2.03 ಲಕ್ಷ, ಸೇರಿದಂತೆ ಒಟ್ಟು 29 ಲಕ್ಷ. ನರೇಗಾ 1.60 ಲಕ್ಷ, ಸ್ವಚ್ಛ ಭಾರತ್ ಮಿಷನ್ 2.40 ಲಕ್ಷ, ಎಷ್ಟೋ 1.50 ಲಕ್ಷ ಸೇರಿದಂತೆ ಒಟ್ಟಾರೆ 1,83,68,000 ಆದಾಯ ನಿರೀಕ್ಷೆಯಲ್ಲಿ ಬಜೆಟ್ ಮಂಡಿಸಿದರು.

### ಕೊಡಿಗೇನಹಳ್ಳಿ: ಈಜಲು ತೆರಳಿದ್ದ ವಿದ್ಯಾರ್ಥಿ ನೀರಿನಲ್ಲಿ ಮುಳುಗಿ ಸಾವು

• ಉದಯವಾಹಿನಿ, ಕೊಡಿಗೇನಹಳ್ಳಿ



ಶಾಲೆಯಲ್ಲಿ ಪರೀಕ್ಷೆ ಮುಗಿಸಿಕೊಂಡು ಮಂಗಳವಾರ ಸಮೀಪದ ಜಯಮಂಗಲಿ ನದಿಯಲ್ಲಿ ಈಜಾಡಲು ತೆರಳಿದ್ದ ಹರ್ಷವರ್ಧನ (14) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಹೋಬಳಿಯ ರಂಗನಹಳ್ಳಿ ಗ್ರಾಮದ ದೇವರಾಜು ಅವರ ಮಗ ಹರ್ಷವರ್ದನ ಕೊಡಿಗೇನಹಳ್ಳಿ ಸರ್ವೋದಯ ಪ್ರೌಢಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದ. ಪಟ್ಟಣದ ಬಿಸಿಎಂ ಹಾಸ್ಟೆಲ್‌ನಲ್ಲಿದ್ದ.

ಮಂಗಳವಾರ ಶಾಲೆಯಲ್ಲಿ ನಡೆದ ಚಿತ್ರಕಲೆ ಪರೀಕ್ಷೆಗೆ ಹಾಜರಾಗಿ ಮಧ್ಯಾಹ್ನ 1.30ಕ್ಕೆ ಶಾಲೆ ಬಿಟ್ಟ ನಂತರ ಸ್ನೇಹಿತರ ಜೊತೆಗೂಡಿ ಜಯಮಂಗಲಿ ಸಮೀಪದಲ್ಲಿರುವ ಸುಮಾರು 15ರಿಂದ 20 ಅಡಿ ಆಳದ ಗುಂಡಿಯಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

**ಪೋಷಕರ ಆಕ್ರಂದನ:** ಹರ್ಷವರ್ಧನ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಸಾವಿನ ಬಗ್ಗೆ ಸೂಕ್ತ ತನಿಖೆ ನಡೆಸಿ, ನ್ಯಾಯ ಒದಗಿಸಬೇಕು ಎಂದು ಪೊಲೀಸರನ್ನು ಒತ್ತಾಯಿಸಿದರು.

**ಸಾರ್ವಜನಿಕರ ಆಕ್ರೋಶ:** ಹಿಂದೆ ಇಲ್ಲಿ ಕೆಲ ಮರಳು ದಂಧೆಕೋರರು ಮರಳು ತುಂಬಲು ಆಳವಾದ ಗುಂಡಿಗಳನ್ನು ತೆಗೆದ ಪರಿಣಾಮ ಅವು 15ರಿಂದ 20 ಅಡಿಯಷ್ಟು ಆಳವಾದ ಗುಂಡಿಗಳಾಗಿದ್ದವು. ಅಪರೂಪಕ್ಕೆ ನದಿ ಹರಿದಾಗ ಗುಂಡಿಯಲ್ಲಿ ನೀರು ನಿಲ್ಲುವಂತಾಗಿದೆ. ಈಗ ಬಿಸಿಲಿಗೆ ಕೆಲ ವಿದ್ಯಾರ್ಥಿಗಳು ನೀರು ಹಾಗೂ ಗುಂಡಿಯ ಆಳ ತಿಳಿಯದೆ ನೀರಿನಲ್ಲಿ ಮುಳುಗಿ ಸಾಯುವಂತಾಗಿದೆ. ನದಿಯಲ್ಲಿ ಆಳವಾದ ಗುಂಡಿಗಳನ್ನು ತೆಗೆಯದಂತೆ ಎಚ್ಚರವಹಿಸಬೇಕು ಎಂದು ಜನರು ಒತ್ತಾಯಿಸಿದರು. ಸ್ಥಳಕ್ಕೆ ಪಿಎಸ್‌ಐ ಶ್ರೀನಿವಾಸ್ ಪ್ರಸಾದ್ ಹಾಗೂ ಪೊಲೀಸ್ ಸಿಬ್ಬಂದಿ ಭೇಟಿ ನೀಡಿದ್ದರು.

ಅಂತರಾಳದಿಂದ... EDITORIAL

# ಸರಕಾರಿ ವೈದ್ಯರು ಪ್ರಾಮಾಣಿಕತೆ ಮೆರೆಯಲಿ

ಜನತೆಯ ಹಣದಿಂದ ನಡೆಯುವ ಸರಕಾರಿ ಆಸ್ಪತ್ರೆಗಳು ಅವ್ಯವಸ್ಥೆಯ ತಾಣಗಳಾಗಿವೆ. ನಗರ ಮತ್ತು ಗ್ರಾಮೀಣ ಪ್ರದೇಶಗಳ ಜನಸಾಮಾನ್ಯರಿಗಾಗಿ ಅಸ್ತಿತ್ವಕ್ಕೆ ಬಂದಿರುವ ಈ ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯಗಳು, ಔಷಧಿ ಸಾಮಗ್ರಿಗಳ ಕೊರತೆ ಒಂದೆಡೆಯಾದರೆ, ಇನ್ನೊಂದೆಡೆ ಅನೇಕ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಕೊರತೆ ಎದ್ದು ಕಾಣುತ್ತಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯರಿಗೆ ತಿಂಗಳಿಗೆ ಒಂದು ಲಕ್ಷ ರೂ.ಗಿಂತ ಜಾಸ್ತಿ ಸಂಬಳ ನೀಡಿದರೂ ವೈದ್ಯಕೀಯ ಪದವೀಧರರು ಸಿಗುತ್ತಿಲ್ಲ. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿರುವ ಸರಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೆಲಸ



ಮಾಡಲು ವೈದ್ಯರು ಇಷ್ಟಪಡುತ್ತಿಲ್ಲ.

**ಇವುಗಳ ಜೊತೆಗೆ ಇನ್ನೊಂದು ಸಮಸ್ಯೆಯಿದೆ. ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ವೈದ್ಯರು ಕೂಡ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿಲ್ಲ. ಈ ಸರಕಾರಿ ವೈದ್ಯರು ತಮ್ಮ ಕೆಲಸದ ಅವಧಿಯಲ್ಲಿ ಬೇರೆ ಖಾಸಗಿ ಆಸ್ಪತ್ರೆಗಳಲ್ಲಿ ಹೋಗಿ ಕೆಲಸ ಮಾಡುತ್ತಾರೆ ಎಂಬ ದೂರುಗಳು ಸಾಕಷ್ಟಿವೆ. ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲರು ವಿಧಾನ ಸಭಾ ಅಧಿವೇಶನದಲ್ಲಿ ಈ ಬಗ್ಗೆ ಪ್ರಸ್ತಾವಿಸಿ ಸರಕಾರಿ ಆಸ್ಪತ್ರೆಗಳಲ್ಲಿ ಸಂಬಳ ಪಡೆದು ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಕೆಲಸ ಮಾಡುತ್ತಾರೆ ಎಂದು ಆರೋಪಿಸಿದ್ದಾರೆ.**

ಅಷ್ಟೇ ಅಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯರ ಸಲುವಾಗಿ ದಿನದಲ್ಲಿ ನಾಲ್ಕು ಸಲ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗುವುದೆಂದು ತಿಳಿಸಿದ್ದಾರೆ.ಸರಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯರಿಗೆ ನಿಗದಿತ ಸಂಬಳ, ಭತ್ತೆಯನ್ನು ನೀಡಲಾಗುತ್ತಿದೆ. ಆದರೂ ಹೆಚ್ಚಿನ ಆದಾಯದ ಆಸೆಯಿಂದ ಈ ವೈದ್ಯರು ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಕೆಲಸ ಮಾಡುತ್ತಾರೆ. ಇದನ್ನು ತಪ್ಪಿಸಲೆಂದೇ, ಸರಕಾರಿ ಆಸ್ಪತ್ರೆಗಳಲ್ಲಿ ಮುಂಜಾನೆ ಮತ್ತು ಸಂಜೆ ಬಯೋಮೆಟ್ರಿಕ್ ಹಾಜರಾತಿಗಳನ್ನು ಕಡ್ಡಾಯಗೊಳಿಸಲಾಗಿತ್ತು.

ಆದರೂ ಸರಕಾರಿ ವೈದ್ಯರನ್ನು ನಿರ್ಬಂಧಿಸಲು ಸಾಧ್ಯವಾಗಿಲ್ಲ. ಹೀಗಾಗಿ ಇದನ್ನು ತಡೆಯಲು ದಿನಕ್ಕೆ ನಾಲ್ಕು ಸಲ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯಗೊಳಿಸುವುದು ಅನಿವಾರ್ಯವಾಗಿದೆ ಎಂದು ಸಚಿವರು ಹೇಳಿದ್ದಾರೆ. ಸರಕಾರದಿಂದ ಸಂಬಳ ಪಡೆದು ಹೆಚ್ಚು ಹಣ ಗಳಿಸುವ ದುರಾಸೆಯಿಂದ ಸರಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯದ ಮೇಲಿರುವಾಗಲೇ ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಕೆಲಸ ಮಾಡುವುದು ತಮ್ಮ ವೃತ್ತಿ ಧರ್ಮಕ್ಕೆ ಬಗೆಯುವ ಮಹಾದ್ರೋಹವಾಗಿದೆ. ಒಬ್ಬ ವಿದ್ಯಾರ್ಥಿ ವೈದ್ಯಕೀಯ ಪದವೀಧರನಾಗಲು ಸರಕಾರ ಲಕ್ಷಾಂತರ ರೂ. ಖರ್ಚು ಮಾಡುತ್ತದೆ. ಹೀಗೆ ಸರಕಾರದ ಅನುದಾನದಿಂದ ವೈದ್ಯಕೀಯ ಪರೀಕ್ಷೆ ಪಾಸಾಗಿ ಕೆಲವರು ವಿದೇಶಕ್ಕೆ ಹೋಗಿ ಅಲ್ಲೇ ನೆಲೆಸುತ್ತಾರೆ. ಇನ್ನುಳಿದವರು ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಾರೆ. ಇನ್ನು ಕೆಲವರು ಸರಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲೇ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ಇದನ್ನು ಯಾರೂ ಕೂಡ ಸಮರ್ಥಿಸಲು ಸಾಧ್ಯವಿಲ್ಲ.ಈಗಿನ ಪರಿಸ್ಥಿತಿಯಲ್ಲಿ ಬಯೋಮೆಟ್ರಿಕ್ ಹಾಜರಾತಿಯನ್ನು ಹಾಕದೆ ತಿಂಗಳ ಕೊನೆಯಲ್ಲಿ ಹಾಜರಾತಿಯನ್ನು ಅಪ್‌ಡೇಟ್ ಮಾಡುವ ಸಿಬ್ಬಂದಿಯೂ ಸಾಕಷ್ಟಿದ್ದಾರೆ. ಹಾಗಾಗಿ ಈಗ ಸಚಿವರು ಹೇಳಿರುವಂತೆ ದಿನಕ್ಕೆ ನಾಲ್ಕು ಬಾರಿ ಹಾಜರಾತಿಯನ್ನು ಕಡ್ಡಾಯಗೊಳಿಸಿದರೂ ಅದಕ್ಕೂ ದುರ್ಗತಿ ಬಂದರೆ ಅಚ್ಚರಿ ಪಡಬೇಕಾಗಿಲ್ಲ. ಸರಕಾರದ ಈ ಹೊಸ ಹಾಜರಾತಿ ಪದ್ಧತಿ ಕೇವಲ ಕಿರಿಯ ವೈದ್ಯರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರಬಾರದು. ಸಂಸ್ಥೆಯ ಎಲ್ಲಾ ಮುಖ್ಯಸ್ಥರಿಗೂ ಇದನ್ನು ಕಡ್ಡಾಯಗೊಳಿಸಬೇಕು. ಇದರ ಜೊತೆಗೆ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಇದನ್ನು ಸ್ವಾಗತಿಸಬೇಕು. ರೋಗಿಗಳ ಸಲುವಾಗಿ ಸರಕಾರ ಕೈಗೊಂಡ ಅನಿವಾರ್ಯ ಕ್ರಮ ಎಂಬ ವಾಸ್ತವವನ್ನು ವೈದ್ಯರು ಒಪ್ಪುವುದು ಸೂಕ್ತ. ಸರಕಾರಿ ಆಸ್ಪತ್ರೆಗಳಿಗೆ ಬರುವವರು ಕೋಟ್ಯಧೀಶರಲ್ಲ ನಗರ ಮತ್ತು ಗ್ರಾಮೀಣ ಪ್ರದೇಶಗಳ ಜನಸಾಮಾನ್ಯರು. ರೈತರು, ಕಾರ್ಮಿಕರು, ಕಡುಬಡವರು ಅಸ್ವಸ್ಥರಾದಾಗ ಸರಕಾರಿ ಆಸ್ಪತ್ರೆಗಳಿಗೆ ಬರುತ್ತಾರೆ. ಅವರಿಗೆ ಅನನುಕೂಲ ಆಗದಂತೆ ನೋಡಿಕೊಳ್ಳಬೇಕು. ಸರಕಾರಿ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಇನ್ನೊಂದು ಮಹತ್ವದ ಅಂಶವೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳಲ್ಲಿ ಔಷಧಿಗಳ ಖರೀದಿಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಭ್ರಷ್ಟಾಚಾರದ ಪ್ರಕರಣಗಳಲ್ಲಿ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ನಿರಾಕರಿಸುವ ವೈದ್ಯರನ್ನು ಮನವೊಲಿಸಬೇಕು. ಆರೋಗ್ಯ, ಶಿಕ್ಷಣ ಇವುಗಳು ಲಾಭಕ್ಕಾಗಿ ಮಾಡುವ ಸೇವೆಯಲ್ಲ. ಪ್ರಜೆಗಳ ಆರೋಗ್ಯ ರಕ್ಷಣೆ ವೈದ್ಯರ ಕರ್ತವ್ಯವಾಗಿರಬೇಕು. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸ್ವತಃ ಆಸಕ್ತಿ ವಹಿಸಬೇಕು. ಪ್ರತೀ ಹತ್ತು ಸಾವಿರ ಜನರಿಗೆ ಕನಿಷ್ಠ ಒಂಭತ್ತು ಮಂದಿ ವೈದ್ಯರು ಲಭ್ಯವಿರಬೇಕು. ಆದರೆ ವಾಸ್ತವವೆಂದರೆ ಉತ್ತರ ಕರ್ನಾಟಕ ಅದರಲ್ಲೂ ಕಲ್ಯಾಣ ಕರ್ನಾಟಕದಂತಹ ಹಿಂದುಳಿದ ಭಾಗದಲ್ಲಿ ಪ್ರತೀ ಹತ್ತು ಸಾವಿರ ಜನಸಂಖ್ಯೆಗೆ ಒಬ್ಬರು ವೈದ್ಯರಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹೆಸರಿಗೆ ಮಾತ್ರ ಇವೆ. ಇದನ್ನು ಸರಿಪಡಿಸಲು ಸರಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಖಾಸಗಿ ಮೆಡಿಕಲ್ ಕಾಲೇಜು, ಕಾರ್ಪೊರೇಟ್ ಆಸ್ಪತ್ರೆಗಳು ಬಂದ ನಂತರ ಬಡವರನ್ನು ಕೇಳುವವರೇ ಇಲ್ಲ. ಬಹುತೇಕ ಮಂತ್ರಿ ಶಾಸಕರಿಗೆ ಅವರದೇ ಆದ ಮೆಡಿಕಲ್ ಕಾಲೇಜುಗಳು, ಕಾರ್ಪೊರೇಟ್ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಗಳು ಇರುವುದರಿಂದ ಸರಕಾರಿ ಆಸ್ಪತ್ರೆಗಳ ಸುಧಾರಣೆ ಬಗ್ಗೆ ಅವರಿಗೆ ಆಸಕ್ತಿಯಿಲ್ಲ.ಈ ಲೋಪವನ್ನು ಸರಿಪಡಿಸಬೇಕು. ಬಹುತೇಕ ಸರಕಾರಿ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳಿವೆ. ಅದರೆ ತಕ್ಕ ವೈದ್ಯಕೀಯ ಸಿಬ್ಬಂದಿ ಇಲ್ಲ ಹಾಗೂ ಚಿಕಿತ್ಸೆಗೆ ಅಗತ್ಯವಿರುವ ಸಾಧನ, ಸಲಕರಣೆಗಳು ಇಲ್ಲರೋಗವನ್ನು ಪತ್ತೆ ಹಚ್ಚುವ ಪರೀಕ್ಷಾ ವ್ಯವಸ್ಥೆ ಇಲ್ಲ. ಅವಶ್ಯವಿರುವಷ್ಟು ಹಾಸಿಗೆಗಳು, ಶಸ್ತ್ರ ಚಿಕಿತ್ಸೆಗೆ ಅಗತ್ಯವಿರುವ ಕೊಠಡಿ, ತೀವ್ರ ನಿಗಾ ಘಟಕಗಳು, ಔಷಧಿ ಸಂಗ್ರಹಾಲಯ ಇದಾವುದೂ ಇಲ್ಲ. ಆರೋಗ್ಯ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಶೇ. 52ರಷ್ಟು ತಜ್ಞ ವೈದ್ಯರ ಕೊರತೆಯಿದೆ. ಇದನ್ನು ಸರಿಪಡಿಸಲು ಮೊದಲು ಆದ್ಯತೆ ನೀಡಬೇಕು. ರೋಗಿಗಳು ಬಂದರೆ ತಕ್ಷಣ ಚಿಕಿತ್ಸೆ ಆರಂಭಿಸಬೇಕು.

## ರಾಮಾಯಣ



ಕೌಸಲ್ಯಾ ದೇವಿಯು ಶ್ರೀರಾಮನಿಗೆ ಮಾಡಿದ ಆಶೀರ್ವಾದ

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

**ಕೌಸಲ್ಯಾದೇವಿಯು ಶೋಕದಿಂದ ಕಣ್ಣೀರು ತುಂಬಿಕೊಂಡು ಹೀಗೆಂದಳು:** ಶ್ರೀರಾಮ, ನೀನು ವನವಾಸಕ್ಕೆ ತೆರಳಬೇಕೆಂದು ನಿಶ್ಚಯಿಸಿರುವುದನ್ನು ನಾನು ನಿಲ್ಲಿಸುವುದಕ್ಕೆ ಸಮರ್ಥಳಲ್ಲ. ನಮ್ಮ ಸಂಭಾಷಣೆಗಳಿಂದ ಕಾಲವಿಳಂಬವಾಗುತ್ತದೆ.

ನೀನು ಏಕಾಗ್ರಚಿತ್ರನಾಗಿ ಸಾವಧಾನದಿಂದ ವನಕ್ಕೆ ತೆರಳು. ನಿನಗೆ ಅನೇಕ ಶ್ರೇಯಸ್ಸಾಗಲಿ ನೀನು ವನಕ್ಕೆ ಹೋಗಿ ಹದಿನಾಲ್ಕು ವರುಷಗಳೆಂಬ ಮಿತಿಯನ್ನು ತೀರಿಸಿ ನಿನ್ನ ತಂದೆಯಾದ ದಶರಥರಾಯನ ಪ್ರತಿಜ್ಞೆಯನ್ನು ಪರಿಪಾಲಿಸಿ ಪಿತೃ ಋಣವನ್ನು ಕಳೆದುಕೊಂಡು ವ್ರತಸಮಾಪ್ತಿಯನ್ನು ಮಾಡಿ ಸುಖದಿಂದ ಅಯೋಧ್ಯಾ ಪಟ್ಟಣಕ್ಕೆ ತಿರುಗಿ ಬಂದರೆ ನಾನು ನನ್ನ ಮನಸ್ಸಿನ ಬಳಲಿಕೆಯನ್ನು ಬಿಟ್ಟು ಅನೇಕ ಸುಖವನ್ನು ಪಡೆಯುವೆನು. ರಾಮ, ನಾನು ಎಷ್ಟು ಬಗೆಯಲ್ಲಿ ನಿಲ್ಲಹೇಳಿದರೂ ನನ್ನ ಮಾತನ್ನತಿಕ್ರಮಿಸುವಹಾಗೆ ದೈವಗತಿಯು ನಿನ್ನನ್ನು ಪ್ರೇರಿಸುತ್ತಿದೆ.

ಲೋಕದಲ್ಲಿ ದೈವಗತಿಯನ್ನು ಮೀರುವವರಿಲ್ಲ ! ಆದ್ದರಿಂದ ಶ್ರೀರಾಪು, ನೀನು ವನಕ್ಕೆ ಹೋಗಿ ತಿರುಗಿ ಬಂದು ನನಗೆ ಸಂತೋಷವನ್ನುಂಟುಮಾಡು, ಈಗ ನಿನ್ನ ವಿಯೋಗವಾಗುವುದೆಂಬ ದುಃಖದಿಂದ ಅಧಿಕವಾಗಿ ನೊಂದುಕೊಳ್ಳುತ್ತಿರುವ ನನ್ನನ್ನು ಮನೋಹರವಾದ ಸಮಾಧಾನವಾದ ವಾಕ್ಯಗಳಿಂದ ಸಂತವಿಟ್ಟು ಸಂತೋಷ ಪಡಿಸು, ನೀನು ವನಕ್ಕೆ ಹೋಗಿ ನಾರುಡುಗೆಯನ್ನುಟ್ಟು ಜಡೆಗಳನ್ನು ಧರಿಸಿಕೊಂಡು ಪ್ರತಸಮಾಪ್ತಿಯನ್ನು ಮಾಡಿ ಪುನಃ ಯತಾವಾಗ ಬರುವೆಯೋ ಎಂದು ಹಾತೊರೆಯುತ್ತಿರುತ್ತೇನೆ ಎಂದು ನುಡಿದಳು. ಆನಂತರ ವನವಾಸವನ್ನು ನಿಶ್ಚಯಿಸಿಕೊಂಡು ಪ್ರಯಾಣವಾಗಿ ಹೊರಟಂಥ ಸರ್ವಲಕ್ಷಣಸಂಪನ್ನನಾದ ಶ್ರೀರಾಮನಿಗೆ ಅನೇಕ ಆಶೀರ್ವಾಸಗಳನ್ನು ಮಾಡಿ ಮಂಗಳವನ್ನು ಕೋರುತ್ತಿದ್ದಳು. ಅನಂತರ ಕೌಸಲ್ಯಾದೇವಿಯು ತನ್ನ ದುಃಖನನ್ನು ತಡೆದುಕೊಂಡು ಕೈಯಲ್ಲಿ ಉದಕವನ್ನು ತೆಗೆದು ಕಣ್ಣಿಗೆ ತೊಡೆದುಕೊಂಡಳು. ಆಮೇಲೆ ತನ್ನ ಮಗನಾದ ಶ್ರೀರಾಮನಿಗೆ ಮಂಗಳಾರ್ಥವಾಗಿ ಆಶೀರ್ವಾದವನ್ನು ಮಾಡುತ್ತ ಆತನನ್ನು **ಕುರಿತು ಹೀಗೆ ಆಶೀರ್ವಾದ ಮಾಡಿದಳು:** ಶ್ರೀರಾಮ, ನೀನು ದಶರಥರಾಯನ ಆಜ್ಞೆಯನ್ನು ಮೀರುವುದಿಲ್ಲ. ಶೀಘ್ರವಾಗಿ ತಿರುಗಿ ಬಾ. ಸನ್ಮಾರ್ಗದಲ್ಲಿ ನಡೆಯುತ್ತಿರು. ಎಲೈ ಧರ್ಮಜ್ಞತೆ, ನೀನು ಧೈರ್ಯದಿಂದಲೂ ನಿಯಮದಿಂದಲೂ ಧರ್ಮಕ್ಕೆ ವಿಘ್ನಬಾರದಂತೆ ನಡೆದುಕೊಂಡರೆ ಆ ಧರ್ಮವೇ ನಿನ್ನನ್ನು ರಕ್ಷಿಸುವುದು.ಯಾವ ದೇವಾಲಯಗಳಲ್ಲಿರುವ ದೇವತೆಗಳಿಗೆ ನೀನು ನಮಸ್ಕಾರವನ್ನು ಮಾಡುತ್ತಿದ್ದೆಯೋ ಆ ದೇವತೆಗಳೂ ಸಮಸ್ತ ಋಷಿಗಳೂ ನಿನ್ನನ್ನು ರಕ್ಷಿಸಲಿ! ಪೂರ್ವದಲ್ಲಿ ನಿನಗೆ ವಿಶ್ವಾಮಿತ್ರನು ಕೊಟ್ಟ ಮಂತ್ರಾಸ್ತ್ರಗಳು ಸದ್ಗುಣಸಂಪನ್ನನಾದ ನಿನ್ನನ್ನು ರಕ್ಷಿಸಲಿ ! ಆಜಾನುಬಾಹುಗಳುಳ್ಳ ಶ್ರೀರಾಮ.

**ಮುಂದುವರಿಯುವುದು...**

# ಶಿಲ್ಪಕಲಾ ದೇವಾಲಯಕ್ಕೆ ದಾರಿ

ಶಿಲ್ಪಕಲಾ ದೇವಾಲಯಕ್ಕೆ ದಾರಿ ಇದು ಶ್ರೀನಿವಾಸಮೂರ್ತಿ ಎನ್.ಎಸ್. ಅವರ ಕೃತಿ. ಈ ಕೃತಿಯಲ್ಲಿ ಕರ್ನಾಟಕದ ಆಯ್ದ ನೂರು ಸುಂದರ ಅಪರಿಚಿತ ದೇವಾಲಯಗಳ ಪರಿಚಯ ಹಾಗೂ ಮಾರ್ಗಸೂಚಿಯನ್ನು ಲೇಖಕರು ಬರೆದಿದ್ದಾರೆ. ಈ ಕೃತಿಯನ್ನು ಕಮಲ ಎಂಟರ್ ಪ್ರೈಸಸ್ ಅವರಿಂದ ಪ್ರಕಟಣೆಯಾಗಿದೆ.

**ಕೃತಿಯಲ್ಲಿರುವ ಮಾಹಿತಿಗಳು:-** ಕರ್ನಾಟಕ ರಾಜ್ಯ ಕಲೆಗಳ ನಾಡು ಇಲ್ಲಿನ ಹಲವು ಕಲೆಗಳ ನಡುವೆ ವಾಸ್ತುಶಿಲ್ಪವೂ ಒಂದು. ದೇಗುಲಗಳ ನಿರ್ಮಾಣ ಪರಂಪರೆ ಕದಂಬರ ಕಾಲದಿಂದ ಇಲ್ಲಿಯವರೆಗೆ ವಿಸ್ತೃತವಾಗಿ ಬೆಳೆದು ಬಂದಿದೆ. ಈ ಕೃತಿಯಲ್ಲಿ ಕರ್ನಾಟಕದ 100 ಸುಂದರ ಅಪರಿಚಿತ ದೇವಾಲಯಗಳ ಪರಿಚಯ ಹಾಗೂ ಮಾರ್ಗಸೂಚಿಯನ್ನು ಲೇಖಕರು ಬರೆದಿದ್ದಾರೆ. ಈ ಕೃತಿಯಲ್ಲಿ ನಾವು ಹೊಯ್ಸಳ ಶೈಲಿಯ ಶಿಲ್ಪಕಲೆಗಳನ್ನು ಕಾಣಬಹುದು. ಲೇಖಕರು ಇತಿಹಾಸ ಪ್ರಸಿದ್ಧ ದೇವಾಲಯಗಳ ಬಗ್ಗೆ ಸಂಶೋಧನೆಗಳನ್ನು ಮಾಡಿ ಈ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ದೇವಾಲಯಗಳ ಬಗ್ಗೆ ಲೇಖಕರು ವಿವರವಾಗಿ ಬರೆದಿದ್ದಾರೆ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವಿ ಎಂಬ ಶಿಲ್ಪಕಲಾ ಲೋಕ, ಅನಾಥ ಪ್ರಜ್ಞೆಯಲ್ಲಿ ನೆರಳಲ್ಲಿ ಬಂದಳಿಕೆ, ಹಸಿರಿಗೆ ಹೋದ ಕೈಯಲ್ಲಿ ಅರಳಿದ ಶಿಲಾ ಬೆರಗು ಉಮಾ ಮಹೇಶ್ವರ, ಮಂಡ್ಯ ಜಿಲ್ಲೆಯ ಹೊಯ್ಸಳರ ಬೆರಗು ಶ್ರೀ ಲಕ್ಷ್ಮೀನಾರಾಯಣ ದೇವಾಲಯ, ಕಿಕ್ಕೇರಿ ಬ್ರಹ್ಮೇಶ್ವರ ದೇವಾಲಯ, ಹೊಯ್ಸಳ ಶಿಲಾ ಬೆರಗು ಬಸವರಾಜು ಮಲ್ಲಿಕಾರ್ಜುನ ದೇವಾಲಯ ಸೇರಿ ನೂರಕ್ಕೂ ಹೆಚ್ಚಿನ ದೇವಾಲಯಗಳನ್ನು ಲೇಖಕರು ಈ ಕೃತಿಯಲ್ಲಿ ಬರೆದಿದ್ದಾರೆ. ಶಿಲ್ಪಕಲೆ ಎಂದಾಗ ನಮಗೆ ನೆನಪು ಬರುವುದು ಹೊಯ್ಸಳರ ಶಿಲ್ಪಕಲೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಹೊಯ್ಸಳರ ಶಿಲ್ಪಕಲೆ ಜನಪ್ರಿಯ ಪಡೆದ ಶಿಲ್ಪ ಕಲೆಯಾಗಿದೆ. ಹಳೇಬೀಡು, ಹಂಪೆ, ಬೇಲೂರು, ಬಾದಾಮಿ, ಪಟ್ಟದಕಲ್ಲು ಇವೆಲ್ಲ ಕಲ್ಲಿನಿಂದ ಕೆತ್ತಿ ಮಾಡಿರುವ ದೇವಾಲಯಗಳು. ಈ ದೇವಾಲಯಗಳು ಸುಂದರ ಕಾಣಲು ಕಾರಣವೇ ಇದರ ಶಿಲ್ಪಕಲೆ. ನಮ್ಮ ರಾಜ್ಯದಲ್ಲಿ ಅನೇಕ ರಾಜ್ಯ ವಂಶಸ್ಥರು ತಮ್ಮ ತಮ್ಮ ಶಿಲ್ಪಕಲೆಗಳನ್ನು ಪ್ರದರ್ಶಿಸಿದ್ದಾರೆ. ಹಿಂದಿನ ಕಾಲದ ರಾಜ್ಯ ವಂಶಸ್ಥರು ತಮ್ಮ ಸಂಪ್ರದಾಯ ಮತ್ತು ವೀರಪರಂಪರೆಗಳನ್ನು ಈ ಶಿಲ್ಪ ಕಲೆಗಳ ಮೂಲಕ ಕೆತ್ತಿಸುವುದರ ಮೂಲಕ ಸುಂದರ ದೇವಸ್ಥಾನಗಳನ್ನು ಕರ್ನಾಟಕದಲ್ಲಿ ನಿರ್ಮಾಣ ಮಾಡಿದ್ದಾರೆ. ಆ ದೇವಸ್ಥಾನಗಳು ಅನೇಕ ಎಲೆಮರೆಯ ಹಾಗೆ ಜನರಿಂದ ದೂರನೇ ಉಳಿದಿದೆ. ಆ ದೂರ ಉಳಿದಿರುವ ದೇವಸ್ಥಾನಗಳನ್ನು ಪತ್ತೆಹಚ್ಚಿ ಅಂಕಣದ ಮೂಲಕ ಬರೆದಿದ್ದಾರೆ.ಆ ಅಂಕಣಗಳ ಸಂಕಲನವೇ ಈ ಸುಂದರ ಕೃತಿಯಾಗಿದೆ.





**ವಿಶ್ವಾಸ್.ಡಿ.ಗೌಡ**
ಉದಯವಾಹಿನಿ, ವಿಶೇಷ

ಈ ಕೃತಿಯಲ್ಲಿ ಲೇಖಕರು ಸಂಶೋಧನ ಕ್ಕೆ ಸೀಮಿತಗೊಳಿಸದೆ ಜನರಿಗೂ ಕೂಡ ಲೇಖನಗಳ ಮೂಲಕ ತಲುಪಿಸಿದ್ದಾರೆ. ನಾವು ದೇವಾಲಯಗಳಿಗೆ ಭೇಟಿ ನೀಡಿದಾಗ ದೇವರಿಗೆ ಪೂಜೆ ಸಲ್ಲಿಸಿ ಮನೆಗೆ ತರುತ್ತೇವೆ ಆದರೆ ಈ ಕೃತಿಯ ಲೇಖಕರು ಅಲ್ಲಿರುವ ವಾಸ್ತುಶಿಲ್ಪ ಹಾಗೂ ಶಿಲ್ಪಕಲೆಗಳನ್ನು ಸಂಶೋಧನೆ ಮಾಡಿ ಹೊಸ ವಿಚಾರಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಿದ್ದಾರೆ. ಈ ಕೃತಿಯ ಮೂಲ ಉದ್ದೇಶವೇ ದೇವಾಲಯಗಳ ವಾಸ್ತುಶಿಲ್ಪವನ್ನು ಪರಿಚಯ ಮಾಡುವುದು. ಶ್ರೀ ಶ್ರೀನಿವಾಸಮೂರ್ತಿ ಅವರು ಕರ್ನಾಟಕದ ಪ್ರತಿಯೊಂದು ಜಿಲ್ಲೆಗಳಿಗೆ ಭೇಟಿ ನೀಡಿ ಅದರ ಶಿಲ್ಪಕಲೆಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಈ ಕೃತಿಯಲ್ಲಿ ಅವರು ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲೆಯ ಕೆಲ ಆಯ್ದ ದೇವಾಲಯಗಳ ಶಿಲ್ಪಕಲೆ ಹಾಗೂ ಇತಿಹಾಸವನ್ನು ಬರೆದಿದ್ದಾರೆ.

ನಮ್ಮ ರಾಜ್ಯವನ್ನು ಅನೇಕ ರಾಜರು ಆಳಿದ್ದಾರೆ. ಆ ರಾಜರು ಅವರದೇ ಆದ ಶಿಲ್ಪಕಲೆಗಳಿಂದ ಅವರು ಪ್ರಸಿದ್ಧಿ ಪಡೆದಿದ್ದಾರೆ. ಆ ಬಗೆಯ ಶಿಲ್ಪಕಲೆಯನ್ನು ಈ ಕೃತಿಯಲ್ಲಿ ಲೇಖಕರು ವಿವರವಾಗಿ ಬರೆದಿದ್ದಾರೆ. ಈ ಕೃತಿಯು ನಮ್ಮ ರಾಜ್ಯದ ಶಿಲ್ಪಕಲಾ ಗ್ರಂಥ ಎಂದರೆ ತಪ್ಪಾಗಲಾರದು. ಈ ಕೃತಿಯಲ್ಲಿ ಲೇಖಕರು ಶಿಲ್ಪಕಲಾ ದೇವಾಲಯಕ್ಕೆ ದಾರಿ ಎಂಬ ಶೀರ್ಷಿಕೆಯಡಿಯಲ್ಲಿ ಸುಂದರ ಲೇಖನಗಳನ್ನು ಪ್ರಕಟಣೆ ಮಾಡಿದ್ದಾರೆ. ಈ ಕೃತಿಯು ಇಂದಿನ ವಿದ್ಯಾರ್ಥಿಗಳು ಓದಿದರೆ ನಮ್ಮ ಕರ್ನಾಟಕ ರಾಜ್ಯದ ಶಿಲ್ಪ ಕಲೆಗಳ ಬಗ್ಗೆ ತಿಳಿದುಕೊಳ್ಳಬಹುದು. ಇತಿಹಾಸದ ಬಗ್ಗೆ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೂ ಕೂಡ ಈ ಕೃತಿ ಮಾದರಿಯಾಗಬಹುದು. ಎಲ್ಲರೂ ಶಿಲ್ಪಕಲೆಗಳ ಬಗ್ಗೆ ತಿಳಿದುಕೊಂಡು ಕರ್ನಾಟಕದ ಪಾರಂಪರಿಕ ದೇವಾಲಯಗಳ ಬಗ್ಗೆ ಮಾಹಿತಿಗಳನ್ನು ತಿಳಿದುಕೊಳ್ಳಿ ಎಂದು ಹಾರೈಸುತ್ತೇನೆ. ಲೇಖಕರು ಇದೇ ರೀತಿ ದೇವಾಲಯಗಳ ಬಗ್ಗೆ ಲೇಖನಗಳನ್ನು ಬರೆಯಲು ಎಂದು ಹಾರೈಸುತ್ತೇನೆ.

**ಶಿಲ್ಪಕಲೆಗಳ ಬಗ್ಗೆ ಅಧ್ಯಯನ**

# ಮಾಧವಿಯ ಬದುಕು



ಸಾಮಾಜಿಕ ಕಳಕಳಿ

**ಹೆಚ್.ಎಸ್.ಪ್ರತಿಮಾ ಹಾಸನ್**
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

**ಕೆಲಸವನು ಮಾಡುತಲಿ ಸಾಗುವರು ದಿನವಿಡಿಯು**
**ಮಲಿನತೆಯು ಬರದಂತೆ ನಡೆವವರಲ್ಲಿ**
**ಕಲಿಕೆಯನು ಜೀವನದಿ ಕಲಿಯುತಲೆ**
**ಹೋಗುವರು**
**ತಲೆಯನ್ನು ಓಡಿಸುತಲಿ ಲಕ್ಷ್ಮಿ ದೇವಿ......**



ನಮ್ಮ ಹಳ್ಳಿಯ ಸ್ತ್ರೀಯರು ಬೆಳಗ್ಗೆ ಎದ್ದರೆ ಸಾಕು ಕೆಲಸವನ್ನು ಮಾಡುತ್ತಾ ದಿನವನ್ನು ಕಳೆಯುತ್ತಾರೆ. ಮಲಗಿದ್ದರು ಅಲ್ಲಿಯೂ ಜವಾಬ್ದಾರಿ ಮರೆಯುವುದಿಲ್ಲ. ಎಲ್ಲೆಡೆಯೂ ಮಲಿನವಾಗದ ರೀತಿಯಲ್ಲಿ ಸ್ವಚ್ಛವಾಗಿ ಜಾಗವನ್ನು ಶುಚಿಗೊಳಿಸುತ್ತಾರೆ. ಕಲಿಕೆಯನ್ನು ಜೀವನದಲ್ಲಿ ಕಲಿಯುವುದು ಜೀವನದ ಪಾಠದಲ್ಲಿ ಎಂಬುದನ್ನು ಅರಿತಿರುತ್ತಾರೆ. ಅದಕ್ಕೆ ತನ್ನದೇ ಆದ ತಲೆಯನ್ನು ಓಡಿಸುತ್ತಾ ಕಾರ್ಯಗಳನ್ನು ಮಾಡುವುದು ಹೊಸತೇನಲ್ಲ.

ಬೆಳಗ್ಗೆ ಎದ್ದೆವೆಂದರೆ ಅಂಗಣಗಳನ್ನು ಸ್ವಚ್ಛಗೊಳಿಸಿ ಹಸು ಕರುಗಳಿಗೆ ಮೇವನ್ನು ಹಾಕುತ್ತಾ ಹಾಲು ಕರೆದು ಡೈರಿಗಳಿಗೆ ಹಾಕಿ ಬೆಳಗಿನಜಾವದ ತಿಂಡಿಯನ್ನು ತಯಾರಿಸಿ ಮಧ್ಯಾನಕ್ಕೆ ಬೇಕಾದಂತಹ ಸಿದ್ಧತೆಗಳು ಮಾಡಿಟ್ಟು ಹೋಗುತ್ತಾರೆ. ಹೊಲ ಗದ್ದೆ ಕೆಲಸಗಳಲ್ಲಿ ಕೈಕೆಸರಾಗಿ ಮಾಡಿಕೊಂಡು ಬಹಳಷ್ಟು ಬಾಯಿ ಮೊಸರು ಮಾಡಿಕೊಳ್ಳುವವರು ಈ ನಮ್ಮ ರೈತಪಿ ಜನರು. ನಮ್ಮ ಸ್ತ್ರೀಯರಂತೂ ಎಳೆ ಮಕ್ಕಳನ್ನು ಇಟ್ಟುಕೊಂಡೆ ಕೆಲಸಗಳನ್ನು ಮಾಡಿರುವ ಮಾಡುತ್ತಿರುವ ಉದಾಹರಣೆಗಳು ಬಹಳಷ್ಟು ಇದೆ. ಹೊಲಗದ್ದೆಯ ನಾಟಿಯಂತೂ ನಮ್ಮ ಸ್ತ್ರೀಯರ ಕೈಯಲ್ಲಿ ಪಕ್ಕ ಸರಿಯಾದ ರೀತಿಯಲ್ಲಿ ಮಾಡುತ್ತಾರೆ. ಯಾವುದು ಕಡಿಮೆಯೂ ಆಗದು ಹೆಚ್ಚು ಆಗದು. ಜೀವನದಲ್ಲಿನ ಪಾಠಗಳನ್ನು ಪ್ರತಿಯೊಂದು ಹಂತ ಹಂತದಲ್ಲಿ ಕಲಿಯುತ್ತಾ ಸಾಗುವವರು ನಮ್ಮ ಸ್ತ್ರೀಯರು. ಅವರು ಮಾಡುವ ಅಡುಗೆ ಅಂತೂ ಆರೋಗ್ಯಕರವಾಗಿ, ರುಚಿಕರವಾಗಿ, ಬಹಳ ಸ್ವಾದಿಷ್ಟವಾಗಿರುತ್ತದೆ. ಸಿಟಿಯ ಊಟಕ್ಕಿಂತ ಹಳ್ಳಿಯ ಊಟ ಆರೋಗ್ಯಕರ ಮತ್ತು ಬಹಳಷ್ಟು ರುಚಿಕರವಾಗಿರುತ್ತದೆ. ಅದಕ್ಕೆ ಹೇಳುವುದು ಶ್ರೀಮಂತರ ಮನೆಯ ನೋಟ ಚಂದ, ಬಡವರ ಮನೆ ಊಟ ಚಂದ ಎಂದು. ರೈತರೇ ನಮ್ಮ ನಾಯಕರು ಅವರಿಲ್ಲ ಎಂದರೆ ಜೀವನದಲ್ಲಿ ನಾವುಗಳು ಏನನ್ನು ಸಾಧಿಸಲು ಸಾಧ್ಯವಿಲ್ಲ. ಅವರ ಶ್ರಮದ ಫಲವೇ ನಾವು ದಿನನಿತ್ಯ ಬೇಕು ಬೇಡಗಳಾದ ಅಡುಗೆಗಳನ್ನು ಮಾಡಿಕೊಂಡು ಸವಿಯುತ್ತೇವೆ. ಸೈನಿಕ ದೇಶ ಕಾದರೆ ರೈತರು ನಮ್ಮನ್ನು ದಿನನಿತ್ಯದ ಆಹಾರವನ್ನ ಬೆಳೆದು ಕೊಟ್ಟು ಕಾಯುತ್ತಾರೆ. ಆರೋಗ್ಯವಾದ ಜೀವನವನ್ನು ನಡೆಸಲು ಸಹಕಾರ ನೀಡುತ್ತಾರೆ.

**ಜೀವನದಲ್ಲಿ ಕಲಿಯುವುದು ಜೀವನದ ಪಾಠ**

ಹೀಗೆ ಹೇಳಬೇಕೆಂದರೆ ಮಾಧವಿ ಎಂಬ ಹೆಣ್ಣು ಮಗಳು ರೈತಾಪಿ ಕುಟುಂಬದಲ್ಲಿ ಹುಟ್ಟುತ್ತಾಳೆ. ತಂದೆ ತಾಯಿ ಹೊಲದ ಗದ್ದೆ ಕೆಲಸವನ್ನು ಮಾಡಿಕೊಂಡು ನಡೆದರೆ ಸಿಟಿಗೆ ಹೋಗಿ ಓದುತ್ತಿದ್ದಳು. ಚಿಕ್ಕ ವಯಸ್ಸಿನಿಂದಲೂ ಆಟದ ಸ್ವಭಾವದಲ್ಲಿ ನಡೆದುಕೊಳ್ಳುತ್ತಿದ್ದ ಮಾಧವಿಯು ಜೀವನದಲ್ಲಿ ಅದೇ ರೀತಿ ಎಲ್ಲಾ ಕೆಲಸಗಳಲ್ಲೂ ನಿಪುನಳಾಗಿದ್ದಳು. ಗಂಡು ಮಗಳಂತೆ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಳು. ತಮ್ಮ ಚಿಕ್ಕವನಾದ್ದರಿಂದ ಪೋಷಿಸುತ್ತ ಸಲಹತ್ತ ಸಾಗುತ್ತಿದ್ದಳು. ಕೆಲವೊಮ್ಮೆ ಗದರಿಸಿ ಹೊಡೆಯುತ್ತಿದ್ದಳುವ ಅವಳಿಗೆ ತಪ್ಪು ಮಾಡುವುದೆಂದರೆ ದೊಡ್ಡ ಅಪರಾಧವೇ ಸರಿ. ಸುಳ್ಳಂತೂ ಆಕೆ ಸಹಿಸುತ್ತಲಿಲ್ಲ. ಎಲ್ಲಿಯೂ ತಗ್ಗಿ ಬಗ್ಗೆ ನಡೆಯುವ ಸ್ವಭಾವದವಳೆ ಅಲ್ಲ. ಹಠವಾದಿ, ಸ್ವಾಭಿಮಾನಿ, ಸಕಲ ಗುಣ ಸಂಪನ್ನಗಳು, ಪಿಯುಸಿ ಎಲ್ಲಾ ಡಿಸ್ಟಿಂಕ್ಷನ್‌ನಲ್ಲಿ ಪಾಸಾದ ಮಾಧವಿಯು ಹಳ್ಳಿಯ ಎಲ್ಲಾ ಹೆಣ್ಣು ಮಕ್ಕಳಿಗೂ ಮಾದರಿಯಾದಳು. ಆಕೆ ಎಸ್‌ಎಸ್‌ಎಲ್‌ಸಿ ಯಿಂದಲೆ ಟೈಲರಿಂಗ್ ಮತ್ತು ಹಲವು ಕರಕುಶಲ ವಸ್ತುಗಳನ್ನು ತಯಾರಿಸುವ ಹಂಬಲ ಹೊಂದಿದವಳು. ಪ್ರೀತಿ ವಿಶ್ವಾಸದಲ್ಲಿ ಸಹೃದಯಳಾದ ಇವಳು. ಬದುಕಿನಲ್ಲಿ ಹಲವಾರು ಭವಣೆಗಳನ್ನ ಕಂಡವಳು. ಪ್ರೀತಿ ವಿಶ್ವಾಸ ನೋವು ನಲಿವು ಎಲ್ಲವನ್ನು ಅರಿತು ಸಾಗಿದವಳು. ಸಂಸಾರ ಎಂದರೆ ಕಷ್ಟ ಸುಖಗಳನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ತಂದೆ ತಾಯಿ ಹಾಗೂ ಚಿಕ್ಕಪ್ಪ ಚಿಕ್ಕಮ್ಮ ಅಜ್ಜ, ಅಜ್ಜಿ, ಮುತ್ತಜಿ ಯರಿಂದ ಕಲಿತಿದ್ದಳು ಅವರ ಕುಟುಂಬದಲ್ಲಿ ಮೊದಲನೆಯ ವಿದ್ಯಾವಂತ ಹೆಣ್ಣು ಮಗಳು ಮಾಧವಿ. ಬಹಳಷ್ಟು ಬುದ್ಧಿವಂತೆಯಾದ ಈಕೆ ಯಾವುದರಲ್ಲೂ ಎಡವದಂತೆ ಸಾಗುತ್ತಿರುತ್ತಾಳೆ . ಪ್ರೀತಿ ವಿಶ್ವಾಸದ ಸೆಲೆಗಳನ್ನು ಅಲೆಯಾಗಿ ಮಾಡಿಕೊಂಡು ಜೀವನವನ್ನು ಸಾಗಿಸುವ ಪರಿಯನ್ನು ಹೊಂದಿರುವ ಬುದ್ಧಿವಂತೆ. ಒಟ್ಟಾರೆ ಹಳ್ಳಿಯಲ್ಲಿ ಹುಟ್ಟಿದರು ಸಹ ಜೀವನದ ಪರಿಯನ್ನು ಅರಿತು ಬದುಕು ಸಾಗಿಸುವ ಮಾಧವಿ ಹಲವಾರು ಹೆಣ್ಣು ಮಕ್ಕಳಿಗೆ ಮಾದರಿಯಾಗಿರುತ್ತಾಳೆ.

# ಭುಜನೋವು ಕೂಡ ಶ್ವಾಸಕೋಶದ ಕ್ಯಾನ್ಸರ್ ಲಕ್ಷಣಗಳಲ್ಲಿ ಒಂದು!

ಸಾಮಾನ್ಯವಾಗಿ ದೇಹದಲ್ಲಿ ಯಾವುದೇ ರೀತಿಯ ನೋವು ಕಂಡುಬಂದರೂ ಅದನ್ನು ಕಡೆಗಣಿಸುವವರು ಹೆಚ್ಚು. ಆದರೆ ಕೆಲವು ಇದನ್ನು ಗಂಭೀರವಾಗಿ ತೆಗೆದುಕೊಳ್ಳುವುದು ಅಗತ್ಯ. ಯಾಕೆಂದ್ರೆ ಕೆಲವೊಂದು ಕಾಯಿಲೆಗಳ ರೋಗಲಕ್ಷಣಗಳು ಗೊತ್ತಾಗುವುದೇ ಇಲ್ಲ ಉದಾಹರಣೆಗೆ ಕ್ಯಾನ್ಸರ್ ಕಾಯಿಲೆ. ಇನ್ನು ಕೆಲವೊಮ್ಮೆ ಈ ಕಾಯಿಲೆಯ ರೋಗಲಕ್ಷಣಗಳು ಗೊತ್ತಾದರೂ ಕೂಡ ಅದು ಸಾಮಾನ್ಯ ಕಾಯಿಲೆಗಳೆಂದು ತಿಳಿದು ಕಡೆಗಣಿಸುವ ಸಾಧ್ಯತೆಯೇ ಹೆಚ್ಚಾಗಿರುವುದು. ಇಂತಹದರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಕೂಡ ಒಂದಾಗಿದೆ. ಕ್ಯಾನ್ಸರ್ ಎನ್ನುವುದು ತುಂಬಾ ಮಾರಕ ಕಾಯಿಲೆಯಾಗಿದ್ದು, ಇದು ದೇಹದಲ್ಲಿ ಆರಂಭಿಕ ಹಂತದಲ್ಲೇ ಕೆಲವೊಂದು ಸೂಚನೆಗಳನ್ನು ನೀಡಿದರೂ ಅದನ್ನು ಪತ್ತೆ ಮಾಡುವುದು ಕಷ್ಟ. ಹೀಗಾಗಿ ಇದು ಅಂತಿಮ ಹಂತಕ್ಕೆ ಹೋದ ಬಳಿಕ ತಿಳಿದುಬರುವ ಕಾರಣದಿಂದಾಗಿ ಪ್ರಾಣಪಾಯ ಹೆಚ್ಚು. ದೇಹದ ವಿವಿಧ ಭಾಗಗಳಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳಬಹುದು. ಅದರಲ್ಲೂ ಶ್ವಾಸಕೋಶದ ಕ್ಯಾನ್ಸರ್ ನಿಂದ ಬಳಲುತ್ತಿರುವವರಲ್ಲಿ ಕೆಮ್ಮುವಾಗ ಕಫದಲ್ಲಿ ರಕ್ತ ಮತ್ತು ಉಸಿರಾಡಲು ತೊಂದರೆ ಆಗಬಹುದು. ಆದರೆ ಇದರ ಜತೆಗೆ ಶ್ವಾಸಕೋಶದ



ಕ್ಯಾನ್ಸರ್ ಇದ್ದರೆ ಆಗ ಇದರಿಂದ ಭುಜದಲ್ಲಿ ನೋವು ಕೂಡ ಕಂಡು ಬರಬಹುದು. ಶ್ವಾಸಕೋಶದ ಗಡ್ಡೆಯು ದೊಡ್ಡದಾಗಿ ಬೆಳೆದು, ಅದು ಬೇರೆ ನರಗಳ ಮೇಲೆ ಒತ್ತಡ ಹಾಕುತ್ತಿರುವ ಕಾರಣದಿಂದಾಗಿ ಭುಜದಲ್ಲಿ ನಿಶ್ಯಕ್ತಿಯು ಕಂಡುಬರಬಹುದು. ಕೆಲವು ಸಂದರ್ಭದಲ್ಲಿ ಇದು ಗಂಟುನೋವಿನ ಸಮಸ್ಯೆ ಎಂದು ಹೆಚ್ಚಿನ ಜನರು ಹಾಗೆ ಇದನ್ನು ಕಡೆಗಣಿಸುವರು. **ಈ ಕಾಯಿಲೆ ವಯಸ್ಸಾದವರಲ್ಲಿ ಹೆಚ್ಚು ಕಂಡುಬರುವುದು:** ಶ್ವಾಸಕೋಶದ ಕ್ಯಾನ್ಸರ್ ಸಾಮಾನ್ಯವಾಗಿ ವಯಸ್ಸಾದವರಲ್ಲಿ ಹೆಚ್ಚು ಕಂಡುಬರುವುದು. ಆದರೆ 45ರ ಹರೆಯಕ್ಕಿಂತ ಕಡಿಮೆ ವಯಸ್ಸಿನಲ್ಲಿ ಇದು ಕಂಡುಬರುವುದು ತುಂಬಾ ಕಡಿಮೆ. ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಆರೋಗ್ಯದ ಬಗ್ಗೆ ಜಾಗೃತಿಯಾಗಿ ಧೂಮಪಾನ ತ್ಯಜಿಸುತ್ತಿರುವ ಕಾರಣದಿಂದಾಗಿ ಶ್ವಾಸಕೋಶದ ಕ್ಯಾನ್ಸರ್ ಕೂಡ ಕಡಿಮೆಯಾಗುತ್ತಿದೆ. ಧೂಮಪಾನಿಯ ಬದಿಯಲ್ಲಿ ಇರುವುದು, ವಿಕಿರಣ ಮತ್ತು ಭಾರ ಲೋಹಗಳಿಗೆ ಒಗ್ಗಿಕೊಳ್ಳುವ ಕಾರಣದಿಂದಲೂ ಇದು ಬರುವ ಸಾಧ್ಯತೆಯು ಇದೆ.

**ಶ್ವಾಸಕೋಶದ ಕ್ಯಾನ್ಸರ್ ನ ರೋಗಲಕ್ಷಣಗಳು:** ಶ್ವಾಸಕೋಶದ ಕ್ಯಾನ್ಸರ್ ನೇರವಾಗಿ ವಾಯುನಾಳಕ್ಕೆ ಹಾನಿ ಮಾಡುವ ಕಾರಣದಿಂದಾಗಿ ಇದು ಉಸಿರುಕಟ್ಟುವಿಕೆ, ಉಬ್ಬಸ ಮತ್ತು ನಿರಂತರ ಕೆಮ್ಮು ಉಂಟು ಮಾಡುವುದು. ಇದರ ಜತೆಗೆ ಕಫದಲ್ಲಿ ರಕ್ತ ಬರಬಹುದು. ಧೂಮ ಪಾನ ತ್ಯಜಿಸುವುದು ಮತ್ತು ಧೂಮಪಾನಿಯಿಂದ ದೂರ ಇರುವುದರಿಂದ ಶ್ವಾಸಕೋಶದ ಆರೋಗ್ಯ ಕಾಪಾಡಬಹುದು.

**ಭುಜ ನೋವು ಶ್ವಾಸಕೋಶದ ಕ್ಯಾನ್ಸರ್ ಲಕ್ಷಣವೇ:** ಅಧ್ಯಯನಗಳು ಹೇಳುವ ಪ್ರಕಾರ ಒಬ್ಬ ವ್ಯಕ್ತಿಯ ಶ್ವಾಸಕೋಶದ ಮೇಲಿನ ಭಾಗದಲ್ಲಿ ಗಡ್ಡೆಯಾದರೆ, ಆಗ ಇದರಿಂದ ಭುಜದ ನೋವು ಕಾಣಿಸಬಹುದು. ಯಾಕೆಂದರೆ ಈ ಗಡ್ಡೆಯು ರಕ್ತನಾಳ ಹಾಗೂ ನರಗಳ ಮೇಲೆ ಒತ್ತಡ ಹಾಕುವುದು. ಇದರಿಂದ ಭುಜದಲ್ಲಿ ನೋವು, ನಿಶ್ಯಕ್ತಿ ಬರುವುದು. ಕೆಲವು ಸೂಜಿಯಿಂದ ಚುಚ್ಚಿದಂತೆ ಆಗಬಹುದು ಎಂದು ಅಧ್ಯಯನಗಳು ತಿಳಿಸಿವೆ.

# ಮಹಿಳಾ ಒಳಗೊಳ್ಳುವಿಕೆ ಕಡೆಗಿನ ತನ್ನ ಬದ್ಧತೆ ಸಾರಿದ ಟೊಯೋಟಾ ಕಿರ್ಲೋಸ್ಕರ್

• **ಉದಯವಾಹಿನಿ, ಬೆಂಗಳೂರು,**

ಮಹಿಳೆಯರನ್ನು ಸಬಲೀಕರಣಗೊಳಿಸಲು ಮತ್ತು ಆಟೋಮೋಟಿವ್ ಉದ್ಯಮದಲ್ಲಿ ಅವರ ಮಹಿಳಾ ಪ್ರಾತಿನಿಧ್ಯವನ್ನು ಹೆಚ್ಚಿಸಲು ಶ್ರಮಿಸುತ್ತಿರುವ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ (ಟಿಕೆಎಂ) ಕಂಪನಿಯು ಇತ್ತೀಚೆಗೆ 2025ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಎರಡು ವಿಶಿಷ್ಟ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಮಾರ್ಚ್ 12 ಮತ್ತು ಮಾರ್ಚ್ 16ರಂದು ಟಿಕೆಎಂನ ಬಿಡದಿಯ ಉತ್ಪಾದನಾ ಘಟಕದಲ್ಲಿ ನಡೆದ ಈ ಕಾರ್ಯಕ್ರಮಗಳಲ್ಲಿ 700ಕ್ಕೂ ಹೆಚ್ಚು ಮಹಿಳಾ ಉದ್ಯೋಗಿಗಳು ಉತ್ಸಾಹದಿಂದ ಭಾಗವಹಿಸಿದರು. ಈ ಕಾರ್ಯಕ್ರಮಗಳು ಒಳಗೊಳ್ಳುವಿಕೆ ಮತ್ತು ಉಲ್ಲಾಸದಾಯಕ ಕೆಲಸದ ವಾತಾವರಣವನ್ನು ಸೃಷ್ಟಿಸುವ ಕಂಪನಿಯ ಬದ್ಧತೆಗೆ ಪುರಾವೆಯಾಗಿ ಮೂಡಿಬಂದಿವೆ.

ಈ ಎರಡು ಕಾರ್ಯಕ್ರಮಗಳು ಮಹಿಳಾ ಪ್ರತಿಭೆಗಳನ್ನು ಬೆಳೆಸುವ ಮತ್ತು ಕೆಲಸ ಹಾಗೂ ಬದುಕಿನ ಸಮತೋಲನವನ್ನು ಕಾಪಾಡಿಕೊಳ್ಳಲು ನೆರವಾಗುವ ಟಿಕೆಎಂನ ಪ್ರಯತ್ನಗಳನ್ನು ಪ್ರದರ್ಶಿಸಿದವು. ಮಾರ್ಚ್ 12ರಂದು ನಡೆದ ವಿಶೇಷ ಕಾರ್ಯಕ್ರಮದಲ್ಲಿ ವಿವಿಧ ಶಿಫ್ಟ್‌ಗಳ 250ಕ್ಕೂ ಹೆಚ್ಚು ಮಹಿಳಾ ತಂಡದ ಸದಸ್ಯರು ಮತ್ತು ಹಿರಿಯ ನಾಯಕರು ಭಾಗವಹಿಸಿದರು. ಕೆಲಸ-ಜೀವನ ಸಮತೋಲನ ಎಂಬ ವಿಷಯದ ಕುರಿತು ಈ ಕಾರ್ಯಕ್ರಮದಲ್ಲಿ ಮಹತ್ವದ ಚರ್ಚೆಗಳು ನಡೆದವು. ಕಂಪನಿಯ ಪ್ರಮುಖ ಹಿರಿಯ ಮಹಿಳಾ ನಾಯಕರು ತಮ್ಮ ಅಮೂಲ್ಯ ಅನುಭವಗಳನ್ನು ಮತ್ತು ಒಳನೋಟಗಳನ್ನು ಹಂಚಿಕೊಂಡರು. ಯುವ ಪ್ರತಿಭೆಗಳಿಗೆ ವೈಯಕ್ತಿಕ ಮತ್ತು ವೃತ್ತಿಪರ ಜವಾಬ್ದಾರಿಗಳನ್ನು ಉತ್ತಮವಾಗಿ ನಿರ್ವಹಿಸಲು ಸೂಕ್ತವಾದ ಮಾರ್ಗದರ್ಶನ ನೀಡಿದರು. ಕ್ವಿಜ್ ಗಳು ಮತ್ತು ಇನ್ನಿತರ ಚಟುವಟಿಕೆಗಳನ್ನು ಆಯೋಜಿಸಲಾಗಿದ್ದು, ಈ ಚಟುವಟಿಕೆಗಳು ವಾತಾವರಣ



ಉದಯವಾಹಿನಿ ಚಿತ್ರ

ವನ್ನು ಉಲ್ಲಾಸದಾಯಕವಾಗಿಸಿದವು.

ಮಾರ್ಚ್ 16ರಂದು ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮ ಮತ್ತಷ್ಟು ವಿಶಿಷ್ಟವಾಗಿತ್ತು. ಟಿಕೆಎಂನ ಉತ್ಪಾದನಾ ಘಟಕದ ವಿವಿಧ ಶಿಫ್ಟ್‌ಗಳ 450ಕ್ಕೂ ಹೆಚ್ಚು ಮಹಿಳಾ ಉದ್ಯೋಗಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ಮತ್ತು ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀಮತಿ ಆರ್. ಲತಾ (ಐಎಎಸ್) ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ತಮ್ಮ ವೈಯಕ್ತಿಕ ಪಯಣದ ಕತೆಯನ್ನು ಹೇಳಿ ನೆರೆದವರಿಗೆ ಸ್ಫೂರ್ತಿ ನೀಡಿದ ಶ್ರೀಮತಿ ಲತಾ ಅವರು ತಾವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ವೃತ್ತಿಜೀವನ ಆರಂಭಿಸಿದ್ದರಿಂದ ಹಿಡಿದು ಯಶಸ್ವಿ ಐಎಎಸ್ ಅಧಿಕಾರಿಯಾಗಿ ರೂಪುಗೊಳ್ಳುವವರೆಗಿನ ಪ್ರಯಾಣದ ಅನುಭವಗಳನ್ನು ಹಂಚಿಕೊಂಡರು. ಅವರ ಪ್ರೋತ್ಸಾಹದಾಯಕ ಮಾತುಗಳು ಉದ್ಯೋಗಿಗಳಿಗೆ ಮಹತ್ವಾಕಾಂಕ್ಷೆಯ ವೃತ್ತಿ ಮಾರ್ಗದಲ್ಲಿ ನಡೆಯಲು ಪ್ರೇರೇಪಿಸಿದವು. ಕಾರ್ಯಕ್ರಮದಲ್ಲಿ ಟಿಕೆಎಂನ ಪ್ರತಿಭಾವಂತ ಮಹಿಳಾ ಉದ್ಯೋಗಿಗಳು ಸಾಂಸ್ಕೃತಿಕ ಪ್ರದರ್ಶನಗಳನ್ನೂ ನೀಡಿದರು. ಮಹಿಳಾ ಉದ್ಯೋಗಿಗಳ ಗಾಯನ, ನೃತ್ಯ ಮತ್ತು ಕರಾವಳಿ ಕರ್ನಾಟಕದ ಸಾಂಪ್ರದಾಯಿಕ ಕಲೆಯಾದ ಯಕ್ಷಗಾನ ಪ್ರದರ್ಶಗಳಿಗೆ ಮೆಚ್ಚುಗೆ ವ್ಯಕ್ತವಾಯಿತು.

**700ಕ್ಕೂಹೆಚ್ಚು ಮಹಿಳಾ ಉದ್ಯೋಗಿಗಳು ಉತ್ಸಾಹ**

**ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀಮತಿ ಆರ್. ಲತಾ (ಐಎಎಸ್) ಅವರು, ಮಹಿಳೆಯರ ಸಬಲೀಕರಣಗೊಳಿಸುವುದು ಕೇವಲ ಅವಕಾಶಗಳ ಕುರಿತಾದದದ್ದು ಮಾತ್ರವೇ ಅಲ್ಲ, ಬದಲಿದೆ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬುವುದೂ ಆಗಿದೆ. ಜೊತೆಗೆ ಮಹತ್ವಾಕಾಂಕ್ಷೆಯ ಗುರಿ ಸಾಧಿಸಲು ಪ್ರೇರೇಪಿಸುವುದು ಕೂಡ ಬಹಳ ಮುಖ್ಯವಾಗಿದೆ. ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಕಂಪನಿಯು ಒಳಗೊಳ್ಳುವಿಕೆಯ ಸಂಸ್ಕೃತಿಯನ್ನು ಸೃಷ್ಟಿಸುವ ವಿಚಾರದಲ್ಲಿ ಮುಂಚೂಣಿಯಲ್ಲಿದ್ದು, ಆಟೋಮೋಟಿವ್ ಉದ್ಯಮಕ್ಕೆ ಮಾದರಿಯಾಗಿದೆ ಎಂದು ತಿಳಿದು ನನಗೆ ಸಂತೋಷವಾಗಿದೆ. ಇಂತಹ ಯೋಜನೆಗಳು ಮಹಿಳೆಯರನ್ನು ವೃತ್ತಿಪರವಾಗಿ ಸಶಕ್ತಗೊಳಿಸುವುದರ ಜೊತೆಗೆ ಸಮಾಜಕ್ಕೆ ಸಕಾರಾತ್ಮಕ ಕೊಡುಗೆ ನೀಡುತ್ತವೆ ಎಂದು ಹೇಳಿದರು.**

ಈ ಸಂದರ್ಭದಲ್ಲಿ ಮಾತನಾಡಿರುವ ಟೊಯೊಟಾ ಕಿರ್ಲೋಸ್ಕರ್ ಮೋಟಾರ್‌ನ ಫೈನಾನ್ಸ್ ಮತ್ತು ಆಡಳಿತ ವಿಭಾಗದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಶ್ರೀ ಜಿ. ಶಂಕರ್ ಅವರು, ''ಟೊಯೋಟಾ ಕಿರ್ಲೋಸ್ಕರ್ ಮೋಟಾರ್‌ನಲ್ಲಿ ನಾವು ನಮ್ಮ ಮಹಿಳಾ ಉದ್ಯೋಗಿಗಳು ನೀಡುತ್ತಿರುವ ಕೊಡುಗೆಗಳನ್ನು ಗೌರವಿಸುತ್ತೇವೆ ಮತ್ತು ಮೆಚ್ಚುಗೆ ಸಲ್ಲಿಸುತ್ತೇವೆ. ಎರಡೂ ಕಾರ್ಯಕ್ರಮಗಳಲ್ಲಿ ಎಲ್ಲರೂ ಉತ್ಸಾಹದಿಂದ ಪಾಲ್ಗೊಂಡಿದ್ದು, ಈ ಭಾಗವಹಿಸುವಿಕೆಯು ಲಿಂಗ ವೈವಿಧ್ಯತೆಯ ಕಡೆಗಿನ ನಮ್ಮ ಗಮನವನ್ನು ತೋರಿಸುತ್ತದೆ. 2030ರ ವೇಳೆಗೆ ಶೇ.30ರಷ್ಟು ಮಹಿಳಾ ಪ್ರಾತಿನಿಧ್ಯವನ್ನು ಸಾಧಿಸುವ ನಮ್ಮ ಗುರಿಯತ್ತ ಮುನ್ನಡೆಯಲು ಈ ಕಾರ್ಯಕ್ರಮಗಳು ನಮಗೆ ಪ್ರೇರಣೆ ನೀಡಿವೆ. ಮಹಿಳಾ ಸ್ನೇಹಿ ಕೆಲಸದ ವಾತಾವರಣ ಸೃಷ್ಟಿ, ವೃತ್ತಿ ವಿರಾಮದ ಬಳಿಕ ಮರಳುವ ಮಹಿಳೆಯರಿಗೆ ಮರುನೇಮಕಾತಿ ನೀತಿಗಳು, ರಿಮೋಟ್ ಕೆಲಸದ ಅವಕಾಶಗಳು ಮುಂತಾದ ನಮ್ಮ ಯೋಜನೆಗಳ ಮೂಲಕ ನಾವು ಒಳಗೊಳ್ಳುವಿಕೆಯ ಕೆಲಸದ ವಾತಾವರಣವನ್ನು ರೂಪಿಸಲು ಸದಾ ಬದ್ಧರಾಗಿದ್ದೇವೆ'' ಎಂದು ಹೇಳಿದರು. ಟಿಕೆಎಂನ ಪ್ರಸ್ತುತ ನಡೆಯುತ್ತಿರುವ ಅತ್ಯಾಧುನಿಕ ಪಿ3 ಘಟಕದಲ್ಲಿ ಮಹಿಳಾ ಸ್ನೇಹಿ ಸೌಲಭ್ಯಗಳನ್ನು ವಿನ್ಯಾಸಗೊಳಿಸಲಾಗಿದ್ದು, ಈ ಸೌಲಭ್ಯಗಳು ಶೇ. 30ರಷ್ಟು ಮಹಿಳಾ ಉದ್ಯೋಗಿಗಳು ಉತ್ತಮವಾಗಿ ಕೆಲಸ ಮಾಡಲು ನೆರವಾಗುತ್ತವೆ. ಇಂತಹ ಯೋಜನೆಗಳು ಆಟೋಮೋಟಿವ್ ಉತ್ಪಾದನಾ ಹುದ್ದೆಗಳನ್ನು ಹೊಂದಲು ಮಹಿಳೆಯರನ್ನು ಆಕರ್ಷಿಸುವ, ಅವರನ್ನು ಕೆಲಸದಲ್ಲಿ ಉಳಿಸಿಕೊಳ್ಳುವ ಮತ್ತು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದ್ದು,

ಉದ್ಯಮದಲ್ಲಿನ ಆದ್ಯತೆಯ ಉದ್ಯೋಗದಾತ ಎಂಬ ಟಿಕೆಎಂ ಸಂಸ್ಥೆಯ ಹೆಗ್ಗಳಿಕೆಯನ್ನು ಮತ್ತಷ್ಟು ಬಲಪಡಿಸುತ್ತವೆ. ಈ ಕಾರ್ಯಕ್ರಮಗಳು ಮತ್ತು ಹಲವಾರು ಪ್ರಗತಿಪರ ನೀತಿಗಳ ಮೂಲಕ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಸಂಸ್ಥೆಯು ಮಹಿಳಾ ಸಬಲೀಕರಣಗೊಳಿಸುವ ಮತ್ತು ಆಟೋಮೋಟಿವ್ ಉತ್ಪಾದನಾ ವಲಯದಲ್ಲಿ ಲಿಂಗ ವೈವಿಧ್ಯತೆ, ಸಮಾನತೆ ಮತ್ತು ಒಳಗೊಳ್ಳುವಿಕೆಯಲ್ಲಿ ಮಾನದಂಡಗಳನ್ನು ಹಾಕಿಕೊಡುವ ತನ್ನ ಬದ್ಧತೆಯನ್ನು ಸಾರಿದೆ.






## ಶೀಘ್ರದಲ್ಲೇ ಹಾಲು ಸಂಗ್ರಹಣಾ ಕೇಂದ್ರ ಪ್ರಾರಂಭ: ಆವುಂಟಿ

• ಉದಯವಾಹಿನಿ,ಚಿಂಚೋಳಿ

ಅವಳಿ ಪಟ್ಟಣದ ಚಂದಾಪೂರದಲ್ಲಿ ಹಾಲು ಸಂಗ್ರಹಣಾ ಕೇಂದ್ರ ಶೀಘ್ರದಲ್ಲೇ ಪ್ರಾರಂಭ ಮಾಡಲಾಗುವುದು ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷೆ ನರಸಮ್ಮಾ ಲಕ್ಷ್ಮಣ ಆವುಂಟಿ ಹೇಳಿದರು.

ಪಟ್ಟಣದ ಚಂದಾಪೂರದಲ್ಲಿ ತಾಲ್ಲೂಕಾ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು,ಮಹಿಳೆಯರು ಯಾವುದರಲ್ಲಿಯೂ ಕಡಿಮೆಯಿಲ್ಲ ಎಲ್ಲಾ ರಂಗದಲ್ಲಿಯೂ ಮುಂದು ವರೆಯಬೇಕು,ಆರ್ಥಿಕವಾಗಿ ಸಬಲೀಕರಣ ಆಗಬೇಕು, ಸರ್ಕಾರಗಳು ಅನೇಕ ಯೋಜನೆಗಳು ರೂಪಿಸಿವೆ ಅಂಥಹ ಯೋಜನೆಗಳು ಸದುಪಯೋಗ ಪಡೆದುಕೊಂಡು ಸದೃಢರಾಗಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ಒಕ್ಕೂಟದ ಉಪಾಧ್ಯಕ್ಷೆ ಜಗದೇವಿ


ಉದಯವಾಹಿನಿ ಚಿತ್ರ

ವಹಿಸಿದ್ದರು,ಕೆಎಂಎಫ್ ವಿಸ್ತರಣಾಧೀಕಾರಿ ಚಾಂದ್ ಪಟೇಲ್, ಮಾತನಾಡಿದರು. ಈ ಸಂದರ್ಭದಲ್ಲಿ ಮಾರುತಿ ಗಂಜಗೇರಿ, ಸೈಯದ್ ಖಲೀಲ್ ಪಟೇಲ, ಧರ್ಮಸ್ಥಳ ಕೃಷಿ ಮೇಲ್ವಿಚಾರಕ ಸತೀಶ, ಸೇವಾ ಪ್ರತಿನಿಧಿಗಳಾದ ಕಾವ್ಯ, ಆರತಿ, ಮಹಾಲಕ್ಷ್ಮಿ, ಕನಕಲಕ್ಷ್ಮಿ, ಸ್ವಸಹಾಯ ಸಂಘದ ಸದಸ್ಯರು ಅನೇಕರಿದ್ದರು.

## ತೊಗರಿ ಖರೀದಿಸಲು ಮಾ. 31ರವರೆಗೆ ಕಾಲಾವಧಿ ವಿಸ್ತರಣೆ

• ಉದಯವಾಹಿನಿ ಕಲಬುರಗಿ

2024-25ನೇ ಸಾಲಿನ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಸಲು ಕಾಲಾವಧಿಯನ್ನು 2025ರ ಮಾರ್ಚ್ 31 ರವರೆಗೆ ವಿಸ್ತರಿಸಿ, ನೋಂದಣಿಯ ಜೊತೆಗೆ ಖರೀದಿ ಪ್ರಕ್ರಿಯೆಯನ್ನೂ ಸಹ ಕೈಗೊಳ್ಳಲು ಸರ್ಕಾರವು ಆದೇಶಿಸಿದೆ.

ಆದ್ದರಿಂದ ಜಿಲ್ಲೆಯ ರೈತ ಭಾಂದವರು ಇದರ ಸದುಪಯೋಗ ಪಡೆದುಕೊಂಡು ಇನ್ನೂ ಹೆಚ್ಚಿನ ರೈತರು ಎಫ್.ಎ.ಕ್ಯೂ. ಗುಣಮಟ್ಟದ ತೊಗರಿ ಮಾರಾಟಕ್ಕಾಗಿ ತಮ್ಮ ಸಮೀಪದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅಥವಾ ರೈತ ಉತ್ಪಾದಕ ಸಂಘಗಳಿಗೆ ಭೇಟಿ ನೀಡಿ ತಾವು ಬೆಳೆದ ತೊಗರಿ ಮಾರಾಟಕ್ಕೆ ನೊಂದಾಯಿಸಿಕೊಂಡು ತಾವು ಬೆಳೆದ ತೊಗರಿ ಉತ್ಪನ್ನವನ್ನು ಮಾರಾಟ ಮಾಡಬೇಕೆಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.



ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ತೊಗರಿಗೆ ಪ್ರತಿ ಕ್ವಿಂಟಾಲ್ ರೂ.7,550 ನಿಗದಿ ಪಡಿಸಿದ್ದು, ಇದಕ್ಕೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನ 450 ರೂ.ಪ್ರತಿ ಕ್ವಿಂಟಾಲಗೆ ಸೇರಿಸಿ ಒಟ್ಟು ಪ್ರತಿ ಕ್ವಿಂಟಾಲ್‌ಗೆ 8,000 ರೂ.ದರದಂತೆ ಪ್ರತಿ ಎಕರೆಗೆ 04 ಕ್ವಿಂಟಾಲ್ ಮತ್ತು ಪ್ರತಿ ರೈತರಿಂದ ಗರಿಷ್ಠ 40 ಕ್ವಿಂಟಲ್ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿಯಮಿತ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಕಲಬುರಗಿ ಸಂಸ್ಥೆಗಳ ಮೂಲಕ ಜಿಲ್ಲೆಯಲ್ಲಿ ಒಟ್ಟು 196 ಖರೀದಿ ಕೇಂದ್ರಗಳನ್ನು ತೆರೆದು ರೈತರಿಂದ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಖರೀದಿ ಮಾಡಲಾಗುತ್ತಿದೆ.

### ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಹೇಳಿಕೆ

# ಮತದಾರರ ಪಟ್ಟಿ ಸೇರ್ಪಡೆ: ವರ್ಷಕ್ಕೆ ನಾಲ್ಕು ಅರ್ಹತಾ ದಿನಾಂಕ ನಿಗದಿ

• ಉದಯವಾಹಿನಿ ಚಿತ್ರದುರ್ಗ

ಭಾರತ ಚುನಾವಣಾ ಆಯೋಗವು ಪ್ರಜಾಪ್ರತಿನಿಧಿ ಕಾಯ್ದೆ 1950ರ ಸೆಕ್ಷನ್ 14ಕ್ಕೆ ತಿದ್ದುಪಡಿ ಮಾಡಿ ಮತದಾರರ ನೋಂದಣಿ ನಿಯಮಗಳು 1960ಕ್ಕೆ ಅನುಗುಣವಾಗಿ ಮತದಾರರ ಪಟ್ಟಿಗೆ ಹೆಸರುಗಳನ್ನು ಸೇರ್ಪಡೆ ಮಾಡಲು ವರ್ಷಕ್ಕೆ ನಾಲ್ಕು ಅರ್ಹತಾ ದಿನಾಂಕಗಳನ್ನು ನೀಡಿ ಅವಕಾಶ ಕಲ್ಪಿಸಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ನೋಂದಾಯಿತ ಹಾಗೂ ಮಾನ್ಯತೆ ಪಡೆದ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವರ್ಷದಲ್ಲಿ ನಾಲ್ಕು ದಿನ ಅಂದರೆ, 1ನೇ ಜನವರಿ, 1ನೇ ಏಪ್ರಿಲ್, 1ನೇ ಜುಲೈ ಹಾಗೂ 1ನೇ ಅಕ್ಟೋಬರ್‌ಗೆ 18 ವರ್ಷ ಪೂರ್ಣಗೊಳ್ಳುವವರು ಹಾಗೂ ಅರ್ಹ ಮತದಾರರು ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಲ್ಲದವರು ಹಾಗೂ ಹೆಸರು ಕೈ ಬಿಟ್ಟು ಹೋಗಿರುವವರು ಹಾಗೂ ಮತದಾರರ ಪಟ್ಟಿಯಲ್ಲಿ ಮಾಹಿತಿಯನ್ನು ತಿದ್ದುಪಡಿ ಮಾಡಿಸಬೇಕಾದಲ್ಲಿ ಮತ್ತು ಅದೇ ವಿಧಾನಸಭಾ ಕ್ಷೇತ್ರದ ಬೇರೆ ಮತಗಟ್ಟೆಗೆ ವರ್ಗಾಯಿಸಬೇಕಾಗಿದ್ದಲ್ಲಿ ನಿಗದಿಪಡಿಸಿರುವ ನಮೂನೆಗಳಲ್ಲಿ ಅರ್ಜಿ ಭರ್ತಿ ಮಾಡಿ, ತಮ್ಮ ವ್ಯಾಪ್ತಿಯ ಮತದಾನ ಕೇಂದ್ರದಲ್ಲಿ, ತಾಲ್ಲೂಕು ಕಚೇರಿಯಲ್ಲಿ, ಉಪವಿಭಾಗಾಧಿಕಾರಿಗಳ ಕಾರ್ಯಾಲಯದಲ್ಲಿ ನೀಡಿ


ಉದಯವಾಹಿನಿ ಚಿತ್ರ

> ನಮೂನೆ-6 ಹೊಸದಾಗಿ ಹೆಸರುಗಳನ್ನು ಸೇರಿಸುವುದಕ್ಕೆ ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬೇಕು. ನಮೂನೆ-7 ಹೆಸರುಗಳನ್ನು ಕೈಬಿಡಲು ಮತ್ತು ಆಕ್ಷೇಪಣೆ ಅರ್ಜಿ, ನಮೂನೆ-8 ಮತದಾರರ ಪಟ್ಟಿಯಲ್ಲಿ ಮಾಹಿತಿ ತಪ್ಪಾಗಿದ್ದಲ್ಲಿ ತಿದ್ದುಪಡಿ ಬಗ್ಗೆ ಹಾಗೂ ಬೇರೆ ಮತಗಟ್ಟೆಗೆ ವರ್ಗಾಯಿಸಬೇಕಾಗಿದ್ದಲ್ಲಿ, ಎಪಿಕ್ ಕಾರ್ಡ್ ಬದಲಾಯಿಸಲು, ವಿಕಲಚೇತನ ಮತದಾರರನ್ನು ಗುರುತು ಮಾಡಲು ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಬೇಕು -ಟಿ.ವೆಂಕಟೇಶ್, ಡಿಸಿ

ಸ್ವೀಕೃತಿ ಪಡೆಯಬಹು ದಾಗಿದೆ ಎಂದು ತಿಳಿಸಿದರು. ಮತದಾರರು ತಪ್ಪದೇ ತಮ್ಮ ಮತದಾನ ಕೇಂದ್ರಗಳಲ್ಲಿ ನೇಮಕಗೊಂಡಿರುವ ನಿರ್ಧಿಷ್ಠಾಧಿಕಾರಿಗಳಿಗೆ,

> ಜಿಲ್ಲೆ ಎಲ್ಲಾ ವಿಧಾನಸಭಾ ಕ್ಷೇತ್ರದ ಎಲ್ಲಾ ಮತಗಟ್ಟೆಗಳಲ್ಲಿ ಮತಗಟ್ಟೆ ಏಜೆಂಟ್‌ರನ್ನು ಪಕ್ಷವಾರು ನೇಮಕಾತಿ ಮಾಡಬೇಕು, ನೇಮಕಾತಿ ಮಾಡಿರುವ ಮತಗಟ್ಟೆ ಏಜೆಂಟರವರ ಮಾಹಿತಿಯನ್ನು ಮತಗಟ್ಟೆವಾರು ಸಲ್ಲಿಸುವಂತೆ ರಾಜಕೀಯ ಪಕ್ಷಗಳ ಮುಖಂಡರಿಗೆ ತಿಳಿಸಿದರು -ಬಿ.ಟಿ.ಕುಮಾರಸ್ವಾಮಿ, ಅಪರ ಜಿಲ್ಲಾಧಿಕಾರಿ

ಮತಗಟ್ಟೆ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. 2025ರ ಜನವರಿ 06ರಂದು ಪ್ರಚಾರ ಪಡಿಸಿದ ಅಂತಿಮ ಮತದಾರರ ಪಟ್ಟಿಯನ್ನು ಮತಗಟ್ಟೆ ಕೇಂದ್ರ, ಗ್ರಾಮ ಪಂಚಾಯಿತಿ ಕಚೇರಿ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿ, ತಾಲ್ಲೂಕು ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ ಹಾಗೂ www.ceokarnataka.kar.nic.in , https:// chitradurga.nic.in ವೆಬ್‌ಸೈಟ್‌ನಲ್ಲಿಯೂ ಸಹ ಪರಿಶೀಲಿಸಿಕೊಂಡು ಪಟ್ಟಿಯಲ್ಲಿ ಹೆಸರು ಇಲ್ಲದಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ವೋಟರ್ ಹೆಲ್ಪ್‌ಲೈನ್ ನಲ್ಲಿ ಆನ್‌ಲೈನ್ ಮೂಲಕವೂ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು. ವಯಸ್ಸಿನ ಬಗ್ಗೆ ದಾಖಲೆಗಾಗಿ ಸಕ್ಷಮ ಸ್ಥಳೀಯ ಸಂಸ್ಥೆ, ಪುರಸಭಾ ಪ್ರಾಧಿಕಾರ, ಜನನ ಮತ್ತು ಮರಣಗಳ ರಿಜಿಸ್ಟ್ರಾರರು ನೀಡಿದ ಜನನ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಪಾನ್‌ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಜನ್ಮ ದಿನಾಂಕ ಹೊಂದಿದ ಸಿಬಿಎಸ್‌ಸಿ, ಐಸಿಎಸ್‌ಇ, ರಾಜ್ಯ ಶಿಕ್ಷಣ ಮಂಡಳಿಗಳು ನೀಡಿದ 10ನೇ ತರಗತಿ ಅಥವಾ 12ನೇ ತರಗತಿಯ ಪ್ರಮಾಣ ಪತ್ರಗಳನ್ನು ವಯಸ್ಸಿನ ದಾಖಲೆಗಾಗಿ ನೀಡಬಹುದಾಗಿದೆ.

> **ಪಕ್ಷಗಳ ಮುಖಂಡರಿಗೆ ಮಾಹಿತಿ**
>
> ಭಾರತ ಚುನಾವಣಾ ಆಯೋಗದ ನಿರ್ದೇಶನದ ಪ್ರಕಾರ ಪ್ರಜಾಪ್ರಾತಿನಿಧ್ಯ ಅಧಿನಿಯಮ1950, 1951 ಮತ್ತು ಮತದಾರರ ನೋಂದಣಿ ನಿಯಮಗಳು 1960 ಹಾಗೂ ಚುನಾವಣಾ ನಡವಳಿಗಳ ನಿಯಮಗಳು 1961 ಕುರಿತು, ಭಾರತ ಸಂವಿಧಾನ 15ನೇ ಭಾಗ 324 ರಿಂದ 329ರ ಆರ್ಟಿಕಲ್ ಬಗ್ಗೆ ತಿಳಿಸಲಾಯಿತು. ಭಾರತ ಚುನಾವಣಾ ಆಯೋಗ ಹೊರಡಿಸಿರುವ ಸುತ್ತೋಲೆಗಳು, ನಿಯಮ ಹಾಗೂ ಚೌಕಟ್ಟುಗಳ ಬಗ್ಗೆ ಸಂಪೂರ್ಣವಾಗಿ ಸಭೆಯಲ್ಲಿ ರಾಜಕೀಯ ಪಕ್ಷಗಳ ಮುಖಂಡರಿಗೆ ಮಾಹಿತಿ ನೀಡಲಾಯಿತು.

ವಿಳಾಸದ ಬಗ್ಗೆ ದಾಖಲೆಗಾಗಿ ಕನಿಷ್ಟ 1 ವರ್ಷದ ನೀರು, ವಿದ್ಯುತ್‌ಚ್ಛಕ್ತಿ, ಗ್ಯಾಸ್ ಸಂಪರ್ಕದ ಬಿಲ್, ಆಧಾರ್ ಕಾರ್ಡ್, ರಾಷ್ಟ್ರೀಕೃತ, ಶೆಡ್ಯೂಲ್ಡ್ ಬ್ಯಾಂಕ್, ಅಂಚೆ ಕಚೇರಿಯ ಚಾಲ್ತಿಯಲ್ಲಿರುವ ಪಾಸ್‌ಬುಕ್, ಪಾಸ್‌ಪೋರ್ಟ್, ಕಿಸಾನ್ ವಹಿಯನ್ನೊಳಗೊಂಡ ಕಂದಾಯ ಇಲಾಖೆಯ ಭೂ ಮಾಲೀಕತ್ವದ ದಾಖಲೆಗಳು, ನೋಂದಾಯಿತ ಬಾಡಿಗೆ ಭೋಗ್ಯ ಪತ್ರ, ನೋಂದಾಯಿತ ಕ್ರಯ ಪತ್ರ ವಿಳಾಸದ ಬಗ್ಗೆ ದಾಖಲೆಯನ್ನು ನೀಡಬಹುದಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಮಹಬೂಬ್ ಜಿಲಾನಿ ಖುರೇಷಿ, ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಟಿ.ಯಶವಂತ್ ಕುಮಾರ್, ಜಿಲ್ಲಾ ಜೆಡಿಎಸ್ ಜಿಲ್ಲಾ ಮಹಾ ಪ್ರಧಾನ ಕಾರ್ಯದರ್ಶಿ ಡಿ.ಗೋಪಾಲಸ್ವಾಮಿ ನಾಯಕ, ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಡಿ.ಎನ್.ಮೈಲಾರಪ್ಪ, ಕಾರ್ಯದರ್ಶಿ ಸಿ.ಜೆ.ನಾಸಿರುದ್ದೀನ್, ಸಿಪಿಐ(ಎಂ) ಡಿಒಸಿ ಸಿ.ಕೆ.ಗೌಸ್‌ಪೀರ್ ಸೇರಿದಂತೆ ಚುನಾವಣಾ ತಹಶೀಲ್ದಾರ್ ಮಲ್ಲಿಕಾರ್ಜುನ ನಾಯಕ ಸೇರಿದಂತೆ ಚುನಾವಣಾ ಶಾಖೆ ಸಿಬ್ಬಂದಿ ಇದ್ದರು.

## ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಕುರಿತು 3 ದಿನಗಳ ಕಮ್ಮಟ

• ಉದಯವಾಹಿನಿ ಚಿತ್ರದುರ್ಗ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ಹಾವೇರಿ ಜಿಲ್ಲೆ ಇವರ ಸಹಯೋಗ ದಲ್ಲಿ ಗಿರಿಜನ ಉಪಯೋಜನೆಯಡಿ ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಎಂಬ ಹೆಸರಿನಲ್ಲಿ 3 ದಿನಗಳ ಕಮ್ಮಟವನ್ನು 2025ರ ಏಪ್ರಿಲ್ 21, 22 ಮತ್ತು 23ರಂದು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ಹಾವೇರಿ ಜಿಲ್ಲೆಯಲ್ಲಿ ನಡೆಸಲು ಉದ್ದೇಶಿಸಿದ್ದು, ಈ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯಿರುವ 20 ರಿಂದ 45 ವರ್ಷ ವಯಸ್ಸುಳ್ಳ ಪರಿಶಿಷ್ಟ ಪಂಗಡಕ್ಕೆ ಸೇರಿದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಏಪ್ರಿಲ್ 05 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದು, ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ http://karnatakasahithyaacademy.org ಇಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಎನ್.ಕರಿಯಪ್ಪ ತಿಳಿಸಿದ್ದಾರೆ.

## ಬೈಕ್- ಲಾರಿ ನಡುವೆ ಅಪಘಾತ ಸವಾರ ಸ್ಥಳದಲ್ಲೇ ಮೃತ್ಯು

• ಉದಯವಾಹಿನಿ ಕಾಸರಗೋಡು

ಬೈಕ್ ಮತ್ತು ಲಾರಿ ನಡುವೆ ಉಂಟಾದ ಅಪಘಾತದಲ್ಲಿ ಸವಾರ ಮೃತಪಟ್ಟ ಘಟನೆ ಮಧ್ಯಾಹ್ನ ರಾಷ್ಟ್ರೀಯ ಹೆದ್ದಾರಿಯ ಕುಂಬಳೆ ಶಿರಿಯ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ನಡೆದಿದೆ.

ಕುಂಬಳೆ ಕಣ್ಣೂರಿನ ತ್ಯಾಂಪಣ್ಣ ಪೂಜಾರಿ ರವರ ಪುತ್ರ ರವಿಚಂದ್ರ (35) ಮೃತಪಟ್ಟವರು. ಅವರು ಮೆಡಿಕಲ್ ರೆಪ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ರವಿಚಂದ್ರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕುಂಬಳೆ ಕಡೆಗೆ ತೆರಳುತ್ತಿದ್ದಾಗ ಈ ಅಪಘಾತ ನಡೆದಿದೆ. ಕುಂಬಳೆ ಠಾಣಾ ಪೊಲೀಸರು ಮಹಜರು ನಡೆಸಿದ್ದಾರೆ. ರವಿಚಂದ್ರ ಪುತ್ತಿಗೆ ಗ್ರಾಮ ಪಂಚಾಯತ್ ಸದಸ್ಯ ಜನಾರ್ಧನರವರ ಸಹೋದರರಾಗಿದ್ದಾರೆ.

## ನೇತ್ರಾವತಿ ನದಿ ಬಳಿ ಕಂದಕಕ್ಕೆ ಉರುಳಿದ ಕಾರು- ಅದೃಷ್ಟವಶಾತ್ ಐವರು ಪಾರು

• ಉದಯವಾಹಿನಿ ಮಂಗಳೂರು

ತೊಕ್ಕೊಟ್ಟು ಬಳಿಯ ನೇತ್ರಾವತಿ ನದಿಯ ಬಳಿ ರಸ್ತೆಯಿಂದ 15 ಅಡಿ ಆಳದ ಕಂದಕಕ್ಕೆ ಕಾರು ಉರುಳಿ ಬಿದ್ದ ಘಟನೆ ನಡೆದಿದೆ.

ಅದೃಷ್ಟವಶಾತ್ ಕಾರಿನಲ್ಲಿದ್ದ ಐವರು ಪ್ರಾಣಪಾಯದಿಂದ ಪಾರಾಗಿದ್ದಾರೆ. ತಲಪಾಡಿಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಕಾರು ರಾಷ್ಟ್ರೀಯ ಹೆದ್ದಾರಿಯ ಕಲ್ವರ್ಟ್ ಬಳಿ ನಿಯಂತ್ರಣ ತಪ್ಪಿ ರಸ್ತೆ ಬದಿಯ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಈ ಅಪಘಾತ ಸಂಭವಿಸಿದೆ. ಅದೃಷ್ಟವಶಾತ್, ಐವರೂ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಘಟನೆ ಕುರಿತು ಮಂಗಳೂರು ದಕ್ಷಿಣ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ದೇವಸ್ಥಾನ ಜೀರ್ಣೋದ್ಧಾರಕ್ಕೆ ಧರ್ಮಸ್ಥಳ ಕ್ಷೇತ್ರದಿಂದ ನೆರವು

• ಉದಯವಾಹಿನಿ ಮುದ್ದೇಬಿಹಾಳ

ಧಾರ್ಮಿಕ ಕೇಂದ್ರಗಳೇ ಗ್ರಾಮ ಪಟ್ಟಣಗಳ ನಿಜವಾದ ಆಸ್ತಿ ಹೀಗಾಗಿ ನಮ್ಮ ಧಾರ್ಮಿಕ ಶ್ರದ್ಧಾ ಕೇಂದ್ರ ಚೊಕ್ಕಟವಾಗಿ ಇಟ್ಟುಕೊಳ್ಳಬೇಕು ಎಂದು ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಜಿಲ್ಲಾ ನಿರ್ದೇಶಕ ಸಂತೋಷ ಕುಮಾರ್ ಹೇಳಿದರು ಮಂಗಳವಾರ ಪಟ್ಟಣದ ವಿನಾಯಕ ನಗರದ ಶ್ರೀ ವಿನಾಯಕ ಹಾಗೂ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಜೀರ್ಣೋದ್ಧಾರಕ್ಕೆ ಸುಕ್ಷೇತ್ರ ಧರ್ಮಸ್ಥಳದಿಂದ 1 ಲಕ್ಷ ರೂ ಡಿಡಿ ವಿತರಣೆ ಮಾಡಿ ಮಾತನಾಡಿದರು.

ದೇವಸ್ಥಾನದ ಜೀರ್ಣೋದ್ಧಾರಕ್ಕೆ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗ್ಗಡೆ ಅವರಿಗೆ ಸಲ್ಲಿಸಿದ ಮನವಿಗೆ ಸ್ಪಂದಿಸಿ ಪ್ರಸಾದರೂಪದಲ್ಲಿ ಧನಸಹಾಯ ನೀಡಿದ್ದಾರೆ. ದೇವಾಲಯದ ಉಳಿವು ಮತ್ತು ಜೀರ್ಣೋದ್ಧಾರದಿಂದ ಧಾರ್ಮಿಕ ಶ್ರದ್ಧೆಗೆ ಸಹಕಾರಿಯಾಗಿದೆ. ಧರ್ಮಸ್ಥಳ ಸಂಘ ರಾಜ್ಯದೆಲ್ಲಡೆ


ಉದಯವಾಹಿನಿ ಚಿತ್ರ

ನಿರ್ಗತಿಕರಿಗೆ ತಿಂಗಳ ಮಾಶಾಸನ ವಾತ್ಸಲ್ಯ ಮನೆ, ಅತ್ಯಂತ ಕಡಿಮೆ ದರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ರಚನೆ, ವ್ಯಸನ ಮುಕ್ತ ಶಿಬಿರ ,ಹಾಲು ಉತ್ಪನ್ನ, ಶಾಲೆಗಳಿಗೆ ಪೀಠೋಪಕರಣ ಶಾಲೆಗಳಿಗೆ ಶಿಕ್ಷಕರ ಪೂರೈಕೆ, ದಿವ್ಯಾಂಗ ಚೇತನರಿಗೆ ಅಗತ್ಯ ಪರಿಕರಗಳನ್ನು ನೀಡುತ್ತಾ ಬಂದಿದೆ ಎಂದರು.

ಈ ವೇಳೆ ಜನಜಾಗೃತಿ ವೇದಿಕೆ ಸದಸ್ಯೆ ಸಂಗೀತ ನಾಡಗೌಡ,ದಿ. ಕರ್ನಾಟಕ ಕೋ ಬ್ಯಾಂಕ್ ನಿರ್ದೇಶಕ ಸತೀಶ್ ಓಸ್ವಾಲ್, ಚೇತನ ಕಲ್ಲುಂಡಿ, ಸುಮಾ ಪುತಾಣಿಕಮಠ ಮಾತನಾಡಿ ಧರ್ಮಸ್ಥಳ ಸಂಘದ ಜನಪರ ಕಾರ್ಯಗಳು ಶ್ಲಾಘನೀಯ ಮತ್ತು ಮಾದರಿಯಾಗಿವೆ ಎಂದರು.

ವಿನಾಯಕ ದೇವಾಲಯ ಸಮಿತಿಯ ವಿಶ್ವನಾಥ ನಾಗಠಾಣ ಸೋಹೇಲ್ ನಾಗಠಾಣ ಬಸಣ್ಣ ತಟ್ಟಿ ಅವರಿಗೆ ಸುಕ್ಷೇತ್ರ ಧರ್ಮಸ್ಥಳದ 1 ಲಕ್ಷ ರೂ ಡಿಡಿ ವಿತರಿಸಿದರು. ಈ ವೇಳೆ ಕೃಷಿ ಅಧಿಕಾರಿ ಅರವಿಂದ ಹೂಗಾರ, ವಿಜಯಪುರ ಜೆಓಸಿಸಿ ಜಿಲ್ಲಾಧ್ಯಕ್ಷ ಆನಂದಗೌಡ ಬಿರಾದಾರ , ಅನುರಾಧ ಪ್ಯಾಟಿಗೌಡರ, ಮಲ್ಲಣ್ಣ ಲಕ್ಷಟ್ಟಿ, ಬಸವಂತರಾಯ ದೇಶಪಾಂಡೆ, ಸಿ.ಎಸ್ ಗುಡ್ಡದ, ಡಾ.ವಿರೇಶ ಪಾಟೀಲ, ವಿನೋದ ನಾಗಠಾಣ, ಕಿರಣ್ ನಾಗಠಾಣ, ಪ್ರಮೋದ ನಾಗಠಾಣ, ಗಂಗಪ್ಪ ಹೆಬ್ಬಾಳ, ಕಾಂತು ಹೆಬ್ಬಾಳ, ಭಾಗ್ಯ ಹೆಬ್ಬಾಳ, ವಿದ್ಯಾ ಬಡಿಗೇರ, ಶೋಭಾ ಚಳಗೇರಿ, ಮಹಾದೇವಿ ಹಿರೇಮಠ, ಶೋಭಾ ನಾಗಠಾಣ, ಪಾರ್ವತಿ ಗಣಕುಮಾರಮಠ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಮಹಿಳಾ ಶೋಷಣೆ ನಡೆಯುತ್ತಿರುವುದು ಶೋಚನೀಯ

• ಉದಯವಾಹಿನಿ ಬಳ್ಳಾರಿ

ಅಡುಗೆ ಮನೆಯಿಂದ ಅಂತರಿಕ್ಷದವರೆಗೆ ಮಹಿಳೆಯರು ಸಾಧನೆ ಮಾಡಿದರೂ ಅವರ ಶೋಷಣೆ ನಡೆಯುತ್ತಲೇ ಇದೆ, ಹೆಣ್ಣು ಭ್ರೂಣ ಹತ್ಯೆ, ಅಪ್ರಾಪ್ತ ಬಾಲಕಿಯರ ಅತ್ಯಾಚಾರ, ವರದಕ್ಷಿಣೆ ಕಿರುಕುಳ ಈಗಲೂ ನಡೆಯುತ್ತಿರುವುದು ಶೋಚನೀಯವೆಂದು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಮಹಂತೇಶ್ ಅಭಿಪ್ರಾಯಪಟ್ಟರು.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಬಳ್ಳಾರಿ ತಾಲ್ಲೂಕು ಘಟಕವು ಮಹಿಮಾ ಸಮೂಹ ಸಂಸ್ಥೆ ಕಾಲೇಜಿನಲ್ಲಿ ನಿನ್ನೆ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಉದ್ಘಾಟಿಸಿ ಮಾತನಾಡುತ್ತಿದ್ದರು. ಸ್ತ್ರೀ ಪುರುಷರಲ್ಲಿ ಸಮಾನತೆ ಸಾಮರಸ್ಯವನ್ನು ಬೆಳೆಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆಂದರು. ದತ್ತಿ ಉಪನ್ಯಾಸ ನೀಡಿದ ನಂದಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಎ. ವೇಣುಗೋಪಾಲ್, ಮಹಿಳೆ ಅಬಲೆಯಲ್ಲ ಸಬಲೆ ಎಂಬುದನ್ನು ಅಕ್ಕಮಹಾದೇವಿ ಸಾಬೀತುಪಡಿಸಿದ್ದಾಳೆ. ಪ್ರತಿ ಮಹಿಳೆ ಧೈರ್ಯವಂತಳಾಗಬೇಕು ಯಾವುದೇ


ಉದಯವಾಹಿನಿ ಚಿತ್ರ

ಸಂದರ್ಭದಲ್ಲಿ ಧೃತಿಗೆಡಬಾರದು, ಕಷ್ಟಗಳನ್ನು ಮೆಟ್ಟಿ ನಿಂತಾಗ ಫಲ ಸಿಕ್ಕೇ ಸಿಗುತ್ತದೆಂದರು.

ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ನಿಷ್ಠಿ ರುದ್ರಪ್ಪ ತಮ್ಮ ಪ್ರಸ್ತಾವಿಕ ನುಡಿಯಲ್ಲಿ ದತ್ತಿ ದಾನ ಶ್ರೇಷ್ಠವಾದದ್ದು ಹಿರಿಯರನ್ನು ಸ್ಮರಿಸುವ ಕಾರ್ಯ ನಮ್ಮ ಪರಿಷತ್ತು ನಿರಂತರವಾಗಿ ಮಾಡುತ್ತಿದೆ. ನರ್ಸಿಂಗ್ ಅಭ್ಯಾಸವನ್ನು ಮಾಡುತ್ತಿರುವ ನೀವುಗಳೆಲ್ಲ ದೇವಮಾನವರಿದ್ದಂತೆ ರೋಗಿಗಳನ್ನು ಗುಣಪಡಿಸುವ ಕಾಯಕವನ್ನು ಮಾಡುವ ನೀವು ಪುಣ್ಯಶಾಲಿಗಳು. ಈ ವರ್ಷ ಡಿಸೆಂಬರ್‌ನಲ್ಲಿ 88ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳ ಬಳ್ಳಾರಿಯಲ್ಲಿ ನಾವು ನೀವೆಲ್ಲರೂ ಸೇರಿ ಸಮ್ಮೇಳನವನ್ನು ಯಶಸ್ವಿ ಮಾಡೋಣವೆಂದರು.

## ಉದ್ಯೋಗ ಖಾತ್ರಿ: ಕೂಲಿಕಾರ ಟ್ರ್ಯಾಕ್ಟರ್ ಪಲ್ಟಿ, ಹಲವರಿಗೆ ಗಂಭೀರ ಗಾಯ

• ಉದಯವಾಹಿನಿ ಕಾರಟಗಿ

ತಾಲ್ಲೂಕಿನ ಬೂದಗುಂಪ ಗ್ರಾಮ ಪಂಚಾಯಿತಿಯ ಬೂದಗುಂಪ ಗ್ರಾಮದ ಕೂಲಿಕಾರರು ಇರುವ ಟ್ರ್ಯಾಕ್ಟರ್ ಪಲ್ಟಿಯಾದ ಘಟನೆ ನಡೆದಿದೆ, ಬೂದಗುಂಪ ಗ್ರಾಮದ ಕೂಲಿಕಾರರು ಜೀರಾಳ ಕೆರೆಯ ಊಳು ಎತ್ತುವ ಕಾಮಗಾರಿಯ ಕೆಲಸಕ್ಕೆ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಮಾಡಲು ಹೋಗಿದ್ದರು.

ಕೆಲಸ ಮುಗಿಸಿಕೊಂಡು ಹಿಂತಿರುಗಿ ಬರುವಾಗ ಕಾರಟಗಿ ಪಟ್ಟಣದ ರೈಲ್ವೆ ಬ್ರಿಡ್ಜ್ ಹತ್ತಿರ ಇರುವ 31ನೇ ಉಪಕಾಲುವೆಯ ಬೂದಗುಂಪ ರಸ್ತೆಯ ಇಳಿಜಾರಿನಲ್ಲಿ ಕೂಲಿಕಾರರಿರುವ ಟ್ರ್ಯಾಕ್ಟರ್ ಏಕಾಏಕಿ ಪಲ್ಟಿಯಾಗಿದೆ ಪಲ್ಟಿಯ ರಭಸಕ್ಕೆ ಟ್ರ್ಯಾಕ್ಟರ್ ನಲ್ಲಿರುವ ಕೂಲಿಕಾರರು ರಸ್ತೆಯ ಮೇಲೆ ಬಿದ್ದು ಗಂಭೀರ ಗಾಯಗಳಾಗಿ ಆಕ್ರಂದನ ಮುಗಿಲು ಮುಟ್ಟಿತ್ತು. ಸ್ಥಳಕ್ಕೆ 108


ಉದಯವಾಹಿನಿ ಚಿತ್ರ

ವಾಹನ ಬಂದು ಗಾಯಾಳುಗಳನ್ನು ಕಾರಟಗಿ ಸಮುದಾಯ ಆಸ್ಪತ್ರೆಗೆ ಕರೆದೊಯ್ಯಲಾಯಿತು ಗಂಭೀರ ಗಾಯಗಳಾಗಿರುವುದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಗಂಗಾವತಿಯ ಸಮುದಾಯ ಆರೋಗ್ಯ ಆಸ್ಪತ್ರೆಗೆ ಗಾಯಾಳುಗಳನ್ನು ಸ್ಥಳಾಂತರಿಸಲಾಯಿತು.

06 ಜನ ಗಾಯಾಲುಗಳಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿರುವುದರಿಂದ ಹುಬ್ಬಳ್ಳಿಗೆ ಕಳಿಸಲಾಯಿತು, ಆಸ್ಪತ್ರೆಗೆ ಪಂಚಾಯಿತಿಯ ಅಧಿಕಾರಿಗಳು ಭೇಟಿ ನೀಡಿ ಗಾಯಾಳುಗಳಿಗೆ ಅಗತ್ಯ ಚಿಕಿತ್ಸೆ ಕೊಡಿಸಲು ಮುಂದಾಗಿದ್ದಾರೆ.

ಗಂಗಾವತಿ ಕನಕಗಿರಿ ಕಾರಟಗಿ ತಾಲೂಕಗಳ ತಾಲ್ಲೂಕ ಪಂಚಾಯತಿ ವ್ಯಾಪ್ತಿಯಲ್ಲಿ ಕೂಲಿಕಾರರನ್ನು ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸವನ್ನು ನೀಡುತ್ತಿದ್ದಾರೆ ಉದ್ಯೋಗ ಖಾತ್ರಿಯ ಕೆಲಸ ಮುಗಿಸಿಕೊಂಡು ಹೋಗಿ ಬರುವಾಗ ಈಗಾಗಲೇ ಈ ಹಿಂದೆ ಹಲವು ಅಪಘಾತಗಳ ಪ್ರಕರಣಗಳು ನಡೆದರೂ ಅಧಿಕಾರಿಗಳು ಎಚ್ಚೆತ್ತುಕೊಂಡಿಲ್ಲ ಕೂಲಿಕಾರರಿಗೆ ಪಂಚಾಯತ್ ವ್ಯಾಪ್ತಿಯಲ್ಲಿ ಕೆಲಸ ಕೊಡದೆ ಪಂಚಾಯಿತಿ ವ್ಯಾಪ್ತಿ ಮೀರಿ ಕೆಲಸವನ್ನು ನೀಡುವುದರಿಂದ ಇಂತಹ ಘಟನೆಗಳು ನಡೆಯುತ್ತಿವೆ ಈ ಕೂಡಲೇ ಜಿಲ್ಲಾಡಳಿತ ಉದ್ಯೋಗ ಖಾತ್ರಿಯ ಕೆಲಸವನ್ನು ಪಂಚಾಯಿತಿ ವ್ಯಾಪ್ತಿಯಲ್ಲಿ ನೀಡುವಂತೆ ಕಟ್ಟುನಿಟ್ಟಿನ ಆದೇಶ ನೀಡಬೇಕಾಗಿದೆ.

## ಈರುಳ್ಳಿ ಬೀಜೋತ್ಪಾದನೆ: ಉಪ ಆದಾಯಕ್ಕೆ ದಾರಿ

• ಉದಯವಾಹಿನಿ ಕಡೂರು

ಬಯಲುಸೀಮೆಯಲ್ಲಿ ಬಿಸಿಲು ದಿನೇ ದಿನೇ ಹೆಚ್ಚುತ್ತಿದೆ. ಒಂದೆಡೆ ನೀರು ಹಾಯಿಸಿ ತೋಟಗಳನ್ನುಳಿಸಲು ರೈತರು ಮಗ್ನರಾಗಿದ್ದರೆ ಮತ್ತೊಂದೆಡೆ ಈರುಳ್ಳಿ ಬೀಜೋತ್ಪಾದನೆಯಲ್ಲಿ ರೈತರು ತೊಡಗಿಸಿಕೊಂಡಿದ್ದಾರೆ. ಈರುಳ್ಳಿ ಕಡೂರು ಭಾಗದ ಕಸಬಾ,ಹಿರೇನಲ್ಲೂರು ಹೋಬಳಿಗಳಲ್ಲಿ ಪ್ರಮುಖ ವಾಣಿಜ್ಯ ಬೆಳೆ. ಕಡೂರಿನ ಹವಾಗುಣಕ್ಕೆ ಬಳ್ಳಾರಿ ರೆಡ್, ನಾಸಿಕ್ ಮತ್ತು ಪೂನಾ ರೆಡ್ ತಳಿಗಳು ಸೂಕ್ತವಾಗಿದೆ. ಸಾಮಾನ್ಯವಾಗಿ ಇಲ್ಲಿನ ರೈತರು ಖಾಸಗಿ ಕಂಪನಿಗಳ ಬೀಜಗಳನ್ನು ಬಿತ್ತಲು ಒಲವು ತೋರುವುದಿಲ್ಲ.

ಬೀಜದ ದುಬಾರಿ ಬೆಲೆ ಹಾಗೂ ಬೀಜದ ಮೊಳೆಯುವಿಕೆ ಪ್ರಮಾಣ ಕಡಿಮೆ ಎಂಬ ಕಾರಣಕ್ಕೆ ಖಾಸಗಿ ಕಂಪನಿಗಳ ಬೀಜ ಖರೀದಿಸುವುದಿಲ್ಲ. 250 ಗ್ರಾಂ ಬೀಜದ ಬೆಲೆ 300ರಿಂದ 600 ತನಕ ಇದೆ. ಒಂದು ಎಕರೆ ಪ್ರದೇಶಕ್ಕೆ ಸುಮಾರು 3ಕೆ.ಜಿ. ಬೀಜ ಬೇಕಾಗುತ್ತದೆ. ಬಿತ್ತನೆ ಬೀಜವೇ ಒಂದು


ಉದಯವಾಹಿನಿ ಚಿತ್ರ

ಕೆ.ಜಿಗೆ 1,500 – 12 ಸಾವಿರ ದಾಟುತ್ತದೆ. ಖಾಸಗಿ ಕಂಪನಿಗಳ ಬೀಜ ಬಿತ್ತಿದರೂ ಬೀಜ ಮೊಳೆಯುವಿಕೆಗೆ ಯಾವ ಖಾತರಿ ದೊರೆಯುವುದಿಲ್ಲ.

ಈ ಎಲ್ಲಾ ಕಾರಣಗಳಿಂದ ರೈತರು ತಾವೇ ಸ್ವಂತ ಬೀಜೋತ್ಪಾದನೆ ಮಾಡಲು ಮುಂದಾಗಿದ್ದಾರೆ. ಈರುಳ್ಳಿ ಕಟಾವು ಹಂಗಾಮಿನಲ್ಲಿ ಸಣ್ಣ ಸಣ್ಣ ಈರುಳ್ಳಿ ಗೆಡ್ಡೆಗಳನ್ನು ಪ್ರತ್ಯೇಕವಾಗಿ ತೆಗೆದಿಡುತ್ತಾರೆ. ಜೊತೆಗೆ ದಪ್ಪ ಗೆಡ್ಡೆಗಳನ್ನೂ ಆರಿಸಿ ಇಡುತ್ತಾರೆ. ಡಿಸೆಂಬರ್ ವೇಳೆಗೆ ಏಳೆಂಟು ಗುಂಟೆ ಪ್ರದೇಶದಲ್ಲಿ ಇವುಗಳನ್ನು ನಾಟಿ ಮಾಡುತ್ತಾರೆ. ಇವು ಸೊಂಪಾಗಿ ಬೆಳೆದು ಹೂವು ಬಿಡುತ್ತವೆ. ಈ ಹೂವುಗಳು ಬಲಿತು ಅದರಲ್ಲಿ ಬೀಜ ಸಂಗ್ರಹವಾಗುತ್ತದೆ. ಚೆನ್ನಾಗಿ ಒಣಗಿದ ಹೂವುಗಳನ್ನು ಜಾಗರೂಕತೆಯಿಂದ ಕೊಯ್ದು ಮಾಡಿ ಬಿಸಿಲಿಗೆ ಹಾಕಿ ಒಣಗಿಸಿ ಬೀಜ ಉದುರಿಸುತ್ತಾರೆ. ಈ ಬೀಜವನ್ನು ದೂಳು ಇಲ್ಲದಂತೆ ಶುಚಿಗೊಳಿಸುತ್ತಾರೆ. ಐದು ಗುಂಟೆ ಪ್ರದೇಶದಲ್ಲಿ ಸುಮಾರು 100-120 ಸೇರು ಬೀಜ ದೊರೆಯುತ್ತದೆ. ಸ್ಥಳೀಯವಾಗಿ ಉತ್ಪಾದಿಸಿದ ಬೀಜ ಒಂದು ಸೇರಿಗೆ ಕನಿಷ್ಠ 300-400 ಬೆಲೆಯಿದೆ ರೈತರು ತಮಗೆ ಅಗತ್ಯವಿದ್ದಷ್ಟನ್ನು ಇಟ್ಟುಕೊಂಡು ಉಳಿದದ್ದನ್ನು ಮಾರಾಟ ಮಾಡುತ್ತಾರೆ. ಬಿತ್ತನೆ ಬೀಜಕ್ಕೆ ಹಣ ಕೊಡುವುದನ್ನು ಉಳಿಸುವ ಜೊತೆ ಒಂದಿಷ್ಟು ಉಪ ಆದಾಯವನ್ನೂ ಗಳಿಸುತ್ತಾರೆ.

> ಮುಂಗಾರು ಮಳೆ ಬಿದ್ದ ನಂತರ ಬಿತ್ತನೆ ಮಾಡುವ ಈರುಳ್ಳಿ ಬೀಜಕ್ಕಾಗಿ ಮಾಡಿರುವ ಈರುಳ್ಳಿ ಹೊಲಗಳಲ್ಲಿ ಬಿಟ್ಟಿರುವ ಈರುಳ್ಳಿ ಹೂವು ಕಣ್ಮನ ಸೆಳೆಯುತ್ತಿವೆ.

ಸ್ಥಳೀಯವಾಗಿ ಉತ್ಪಾದಿಸಿದ ಈರುಳ್ಳಿ ಬೀಜದ ಮೊಳೆಯುವಿಕೆ ಪ್ರಮಾಣ ಶೇ 90ರಷ್ಟು ಇರುತ್ತದೆ ಎಂಬುದು ರೈತರ ಅನುಭವದ ಮಾತು. ಈ ಸ್ಥಳೀಯ ಈರುಳ್ಳಿ ಬೀಜ ಒಂದು ಎಕರೆಗೆ 3ರಿಂದ 4 ಸೇರು ಮಾತ್ರ ಬೇಕಾಗುತ್ತದೆ. ಖಾಸಗಿ ಕಂಪನಿಗಳ ಬೀಜಗಳಿಗಿಂತ ಗಣನೀಯ ಪ್ರಮಾಣದ ಹಣ ಉಳಿತಾಯವಾಗುತ್ತದೆ. ಈರುಳ್ಳಿ ಬೀಜದ ಬೆಲೆ ಕಡಿಮೆಯಿದ್ದರೆ ಈರುಳ್ಳಿಗೆ ಒಳ್ಳೆಯ ಬೆಲೆ ದೊರೆಯುತ್ತದೆ. ಬೀಜಕ್ಕೆ ಬೆಲೆ ಹೆಚ್ಚಾದರೆ ಈರುಳ್ಳಿ ಬೆಲೆ ಕಡಿಮೆಯಾಗುತ್ತದೆ ಎಂಬ ಅನುಭವದ ಮಾತು ಕಡೂರಿನ ರೈತ ಮೋಹನ್ ಅವರದು. ಕಳೆದ ಬಾರಿ ಎಂಟುಗುಂಟೆ ಪ್ರದೇಶದಲ್ಲಿ ಒಂದು ಕ್ವಿಂಟಾಲ್ ಈರುಳ್ಳಿ ಬೀಜ ಉತ್ಪಾದಿಸಿದ್ದರು. ಒಂದು ಸೇರು ಬೀಜಕ್ಕೆ 950 ದೊರೆತಿತ್ತು.

### ತಹಶೀಲ್ದಾರ್, ಪೊಲೀಸ್, ಕೆಬಿಜೆಎನ್ನೆಲ್ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ವಿಡಂಬನಾ ಶೈಲಿಯಲ್ಲಿ ಚಾಟಿ

# ಕೃಷ್ಣ ನದಿ ದಂಡೆಯ ಫಲವತ್ತು ಮಣ್ಣು ಸಾಗಾಟದ ಹಿಂದೆ ಪ್ರಭಾವಿಗಳ ಕೈ

• ಉದಯವಾಹಿನಿ ಮುದ್ದೇಬಿಹಾಳ

ಕೃಷ್ಣಾ ನದಿ ದಂಡೆಯಲ್ಲಿ ಫಲವತ್ತಾದ ಕಪ್ಪು ಎರೆ, ಮೆಕ್ಕಲು ಮಣ್ಣಿನ ಅಕ್ರಮ ಸಾಗಾಟ ತಡೆಯುವಲ್ಲಿ ವಿಫಲರಾಗಿರುವ ಅಧಿಕಾರಿಗಳ ನಡವಳಿಕೆ ಖಂಡಿಸಿ ಮೂರು ಮಂಗಗಳ ಫ್ಲೆಕ್ಸ್‌ನೊಂದಿಗೆ ಕಣ್ಣು, ಬಾಯಿ, ಕಿವಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ, ಯುವಜನ ಸೇನೆ ಸಂಘಟನೆ ಪದಾಧಿಕಾರಿಗಳು, ಸದಸ್ಯರು ಮಂಗಳವಾರ ಇಲ್ಲಿನ ತಾಲ್ಲೂಕು ಆಡಳಿತ ಸೌಧ ಆವರಣದಲ್ಲಿ ವಿನೂತನ ಪ್ರತಿಭಟನೆ ನಡೆಸಿ ತಹಶೀಲ್ದಾರ್, ಪೊಲೀಸ್, ಕೆಬಿಜೆಎನ್ನೆಲ್ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ವಿಡಂಬನಾ ಶೈಲಿಯಲ್ಲಿ ಚಾಟಿ ಬೀಸಿದರು.

ಈ ವೇಳೆ ಮಾತನಾಡಿದ ಕರವೇ ಅಧ್ಯಕ್ಷ, ತಂಗಡಗಿ ಗ್ರಾಪಂ ಮಾಜಿ ಅಧ್ಯಕ್ಷ ಸಂಗಯ್ಯ ಸಾರಂಗಮಠ ಅವರು ತಂಗಡಗಿಯಿಂದ ನಾರಾಯಣಪುರ ಡ್ಯಾಂ ಹಿಂಭಾಗದ ಅಯ್ಯನಗುಡಿ ಗ್ರಾಮದವರೆಗೂ ಕೃಷ್ಣಾ ನದಿ ದಂಡೆಯಲ್ಲಿರುವ ಫಲವತ್ತಾದ ಕಪ್ಪು ಮಣ್ಣನ್ನು ರೈತರ ಹೆಸರಿನಲ್ಲಿ ಕಳ್ಳಸಾಗಾಣಿಕೆ ಮಾಡಲಾಗುತ್ತಿದೆ.


ಉದಯವಾಹಿನಿ ಚಿತ್ರ

> ಮಣ್ಣುಮಾಫಿಯಾ ವಿರುದ್ಧ ಹೋರಾಟಕ್ಕೆ ಬೆಂಬಲ ಸೂಚಿಸಿದ್ದೇನೆ. ಸ್ವಯಂ ಘೋಷಿತ ಚಿಂತಕರು, ಕಲಾವಿದರು ಹೋರಾಟ ನಡೆಸಿ ಫಲವತ್ತಾದ ಕೃಷಿಗೆ ಉಪಯುಕ್ತ ಮಣ್ಣು ಎನ್ನುತ್ತಿದ್ದಾರೆ. ಊರ ಮುಂಭಾಗದಲ್ಲಿ ತೆಗ್ಗು ಮಾಡುವುದರಿಂದ ಸ್ಥಳೀಯರಿಗೆ, ದನಕರುಗಳಿಗೆ ತೊಂದರೆ ಆಗುತ್ತದೆ. ಮೊಸಳೆಗಳು ಬಂದು ವಾಸಸ್ಥಲವಾಗಿಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಹೊಳಿದಂಡಿ ರೈತರು ಜಮೀನು ಕಳೆದುಕೊಂಡು ತೊಂದರೆಗೀಡಾಗಿದ್ದು ಈ ರೀತಿ ಮಣ್ಣು ಸಾಗಿಸಿದರೆ ಅಂಥ ರೈತರ ಬಾಳು ಏನಾಗಬೇಕು. ಎಲ್ಲೆಂದರಲ್ಲಿ ತೆಗ್ಗು ತೋಡಿ ಮಣ್ಣು ಸಾಗಿಸಿ ಜೀವನ ದುರಂತವಾಗಿಸಿದ್ದಾರೆ. ಗ್ರಾಮಗಳ ಪರಿಸ್ಥಿತಿ ಅರಿವಿಲ್ಲದೆ ರೈತರ ಹೆಸರಿನಲ್ಲಿ ಹೋರಾಟ ಮಾಡಿದ್ದು ಖಂಡನೀಯ -ಶಿವಾನಂದ ಕನ್ನೊಳ್ಳಿ

ಇದರಿಂದ ಸರ್ಕಾರಕ್ಕೆ ರಾಜಸ್ವ ನಷ್ಟವಾಗುತ್ತಿರುವುದು ಮಾತ್ರವಲ್ಲದೆ ನದಿ ದಂಡೆಯಲ್ಲಿ ಆಳವಾದ ತಗ್ಗು ಸೃಷ್ಟಿಯಾಗಿ ಭವಿಷ್ಯದಲ್ಲಿ ಜನ, ಜಾನುವಾರುಗಳಿಗೆ ಅಪಾಯಕಾರಿಯಾಗಿ ಪರಿಣಮಿಸಲಿದೆ. ಅಕ್ರಮ ತಡೆಯುವಂತೆ ಮನವಿ ಸಲ್ಲಿಸಿದರೂ, ಲೋಕಾಯುಕ್ತರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿ ಹೋದರೂ ತಹಶೀಲ್ದಾರ್, ಪೊಲೀಸ್,

> ತಿಂಗಳ ಹಿಂದಿನಿಂದಲೂ ಈ ಕುರಿತು ಎಲ್ಲೆಡೆ ಚರ್ಚೆ ನಡೆಯುತ್ತಿದ್ದರೂ ಅನುಮತಿ ಇಲ್ಲದೆ ಪಲವತ್ತಾದ ಮಣ್ಣನ್ನು ಟ್ರಿಪ್‌ಗೆ 5000 ರೂನಂತೆ ಅಕ್ರಮವಾಗಿ ಸಾಗಿಸಲಾಗುತ್ತಿದೆ. ಈ ಬಗ್ಗೆ ಗಮನ ಸೆಳೆದರೆ ತಹಶೀಲ್ದಾರ್ ಅವರು ಇದು ತನಗೆ ಸಂಬಂಧಿಸಿದ್ದಲ್ಲ ಕೆಬಿಜೆಎನ್ನೆಲ್‌ಗೆ ಸಂಬಂಧಿಸಿದ್ದು ಎನ್ನುತ್ತಾರೆ. ಪೊಲೀಸರು ತಹಶೀಲ್ದಾರ್ ಕಂಪ್ಲೆಂಟ್ ಕೊಟ್ಟರೆ ಪ್ರಕರಣ ದಾಖಲಿಸಿಕೊಳ್ಳುವುದಾಗಿ ಹೇಳುತ್ತಾರೆ. ಕೆಬಿಜೆಎನ್ನೆಲ್‌ನವರು ತಮಗೆ ಸಂಬಂಧವೇ ಇಲ್ಲದಂತೆ ನಡೆದುಕೊಳ್ಳುತ್ತಿದ್ದಾರೆ. ಇದರ ಹಿಂದೆ ಪ್ರಭಾವಿಗಳ ಕೈ ಕೆಲಸ ಮಾಡುತ್ತಿದೆ. ಅಕ್ರಮ ತಡೆಗಟ್ಟಬೇಕಾದ ಪ್ರಮುಖ ಇಲಾಖೆಗಳ ಅಧಿಕಾರಿಗಳೇ ಕೈಚಲ್ಲಿ ಸುಮ್ಮನಾದರೆ ಅಕ್ರಮ ನಡೆಸುವವರಿಗೆ ಸಪೋರ್ಟ ಮಾಡಿದಂತಾಗೊಲ್ಲವೇ. ಸ್ಥಳಕ್ಕೆ ಭೇಟಿ ನೀಡಿ ಎಂದರೆ ತಹಶೀಲ್ದಾರ್, ಪಿಎಸ್ಐ ಅವರು ಸ್ಪಂಧಿಸಿಲ್ಲ. 20 ದಿನಗಳಾದರೂ ಹೋರಾಟಗಾರರಿಗೆ ಯಾವ ರೀತಿ ಸ್ಪಂಧಿಸಬೇಕೆನ್ನುವ ಮನೋಭಾವ ಇಲ್ಲದಿರುವುದು ಸಹಿಸಲಸಾಧ್ಯ -ಶಿವಾನಂದ ವಾಲಿ, ಯುವಜನ ಸೇನೆ ಸಂಘಟನೆ ರಾಜ್ಯಾಧ್ಯಕ್ಷ

ಕೆಬಿಜೆಎನ್ನೆಲ್ ಅಧಿಕಾರಿಗಳು ಕ್ರಮಕ್ಕೆ ಮುಂದಾಗದೆ ಮೌನಕ್ಕೆ ಶರಣಾಗಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರೆದಲ್ಲಿ ಕಾನೂನು ಹೋರಾಟದ ಜೊತೆಗೆ ಸರ್ಕಾರದ ಮಟ್ಟದಲ್ಲೂ ಮನವಿ ಸಲ್ಲಿಸಿ ಹೋರಾಟ ತೀವ್ರಗೊಳಿಸಬೇಕಾಗುತ್ತದೆ ಎಂದರು. ಇದೇ ವೇಳೆ ತಹಶೀಲ್ದಾರ್ ಕಚೇರಿಯ ಶಿರಸ್ತೆದಾರ ಎಂ.ಎ.ಬಾಗೇವಾಡಿ ಅವರು ಧರಣಿ ಸ್ಥಳಕ್ಕೆ ಆಗಮಿಸಿ ತಹಶೀಲ್ದಾರ್ ಅವರು ಕೆಬಿಜೆಎನ್ನೆಲ್ ಅಧಿಕಾರಿಗಳಿಗೆ ಪತ್ರ ಬರೆದು ನಿಯಮಾನುಸಾರ ಕ್ರಮ ಜರುಗಿಸುವಂತೆ ಕೋರಿ ಮಾ.17ರಂದು ಬರೆದ ಪತ್ರವನ್ನು ಹೋರಾಟಗಾರರಿಗೆ ಸಲ್ಲಿಸಿದರು. ಪ್ರಮುಖರಾದ ಪ್ರಕಾಶ ಚಲವಾದಿ ಸರೂರ, ಚಂದ್ರು ಹಡಪದ, ಅಜಯಕುಮಾರ ಕೋಟೆಖಾನ, ಕಾಶಿಮಸಾಬ ಗಂಗೂರ, ಬಾಬಾ ತಗ್ಗಿನಮನಿ, ಮಾಂತೇಶ ಚಲವಾದಿ, ಗಂಗು ಗಂಗನಗೌಡರ, ರಾಜು ಮಸಿಬಿನಾಳ, ಶಿವು ವನಕಿಹಾಳ, ಅಶೋಕ ನಿಡಗುಂದಿ, ಸಂಗಪ್ಪ ಪೊಲೀಸ್ ಪಾಟೀಲ, ಅಯ್ಯಪ್ಪ ತಂಗಡಗಿ, ಶಿವು ಮುಳವಾಡ ಇನ್ನಿತರರು ಪಾಲ್ಗೊಂಡಿದ್ದರು.

## ವಿದ್ಯೆ ಯಾರ ಸ್ವತ್ತಲ್ಲ

• ಉದಯವಾಹಿನಿ ಜೇವರ್ಗಿ

ವಿದ್ಯೆ ಯಾರು ಸ್ವತ್ತಲ್ಲ ಅದು ಕಠಿಣ ಶ್ರಮದಿಂದ ಪಡೆದರೆ ಒಬ್ಬ ಬಡ ವಿದ್ಯಾರ್ಥಿ ಜಿಲ್ಲಾಧಿಕಾರಿಯಾಗಿರಬಹುದು ಹಿಂದೆ ಗುರು ಇರಬೇಕು ಮುಂದೆ ಗುರಿ ಇದ್ದಾಗ ಮಾತ್ರ ಅದು ಯಶಸ್ವಿ ಸಾಧ್ಯ ಎಂದು ಸಾಹಿತಿಗಳು ಹಾಗೂ ಉಪನ್ಯಾಸಕರು ಅಶೋಕ ಚೌದ್ರಿ ಹೇಳಿದರು ತಾಲ್ಲೂಕಿನ ಬೀರನೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಂಭ್ರಮದಲ್ಲಿ ಭಾಗವಹಿಸಿ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರಾದ ಗುರಣ್ಣ ಸಾಹುಕಾರ ಎಸ್ ಡಿ ಎಮ್ ಸಿ ಅಧ್ಯಕ್ಷ ನಾಗರಾಜ ಸಾಹುಕಾರ ಮಾಜಿ ಅಧ್ಯಕ್ಷ ಶಿವಶರಣಪ್ಪ ಚಿಕ್ಕಮೇಟಿ ನಿವೃತ್ತಿ ಮುಖ್ಯ ಗುರುಗಳಾದ ಮಲ್ಲಣ್ಣ ಕುರುಕುಂದಿ ಗ್ರಾಮ ಪಂಚಾಯತ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಮರೆಪ್ಪ ಬೇಗಾರ್ ಗ್ರಾಮ ಪಂಚಾಯತ್ ಸದ್ಯಸರಾದ ಪ್ರಲ್ಹಾದರಾವ ಕುಲಕರ್ಣಿ ಗ್ರಾಮದ ಮುಖಂಡರಾದ ನಿಂಗಯ್ಯಗೌಡ ಭಾಗವಹಿಸಿದರು.


ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ನಿಮ್ಮ ಜೀವನದಲ್ಲಿ ಆಸಕ್ತಿದಾಯಕ ವಿಷಯಗಳು ಸಂಭವಿಸಲು ನೀವು ದೀರ್ಘಕಾಲದಿಂದ ಕಾಯುತ್ತಿದ್ದಲ್ಲಿ ನಿಮಗೆ ಈಗ ಸ್ವಲ್ಪವಾದರೂ ಪರಿಹಾರ ದೊರಕುವುದು ಖಚಿತ.

**ವೃಷಭ** ಸಾಮಾಜಿಕ ಜೀವನಕ್ಕಿಂತ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ.

**ಮಿಥುನ** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಕಳೆದ ದಿನಗಳನ್ನು ಹೋಲಿಸಿದರೆ ಇಂದು ಆರ್ಥಿಕ ಉತ್ತಮವಾಗಲಿದೆ ಮತ್ತು ನೀವು ಹೆಚ್ಚಿನ ಹಣವನ್ನು ಪಡೆಯುತ್ತೀರಿ.

**ಕರ್ಕಾಟಕ** ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಆಲ್ಕೋಹಾಲ್ ಸಿಗರೇಟ್ ಮುಂತಾದವುಗಳಿಗೆ ಹಣವನ್ನು ಖರ್ಚು ಮಾಡಬಾರದು, ಎಂದು ನಿಮಗೆ ನನ್ನ ಸಲಹೆ ನೀಡಲಾಗಿದೆ.

**ಸಿಂಹ** ಹಳೆಯ ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ. ಪ್ರೀತಿಪಾತ್ರರಲ್ಲದೇ ನಿಮ್ಮ ಸಮಯ ಕೊಲ್ಲುವುದು ಕಷ್ಟ. ನೀವು ಕೆಲಸದಲ್ಲಿ ಅಭಿನಂದನೆಗಳನ್ನು ಪಡೆಯಬಹುದು. ಧಾರ್ಮಿಕ ಕಾರ್ಯಗಳಿಗೆ ಅತ್ಯುತ್ತಮ ದಿನ.

**ಕನ್ಯಾ** ವಿಜಯೋತ್ಸವವು ನಿಮಗೆ ಪ್ರಚಂಡ ಸಂತೋಷವನ್ನು ನೀಡುತ್ತದೆ. ನಿಮ್ಮ ಸಂತೋಷವನ್ನು ಅನುಭವಿಸಲು ನೀವಿದನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು. ಆರ್ಥಿಕ ಭಾಗವು ಬಲಗೊಳ್ಳುವ ಪೂರ್ಣ ಸಾಧ್ಯತೆ ಇದೆ.

**ತುಲಾ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ.

**ವೃಶ್ಚಿಕ** ನಿಮ್ಮ ಪೋಷಕರನ್ನು ನಿರ್ಲಕ್ಷಿಸುವುದು ನಿಮ್ಮ ಭವಿಷ್ಯವನ್ನು ಕೆಡಿಸಬಹುದು. ಉತ್ತಮ ಸಮಯಗಳು ತುಂಬಾ ಕಾಲ ಇರುವುದಿಲ್ಲ. ಮನುಷ್ಯನ ಕಾರ್ಯಗಳು ಶಬ್ದದ ಅಲೆಗಳಿದ್ದ ಹಾಗೆ.

**ಧನಸ್ಸು** ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ಈ ರಾಶಿಚಕ್ರದ ಉದ್ಯಮಿಗಳು, ಇಂದು ನಿಮ್ಮ ಬಳಿ ಹಣವನ್ನು ಕೇಳುತ್ತಾರೆ ಮತ್ತು ನಂತರ ಮರುಪಾವತಿ ಮಾಡದೇ ಇರುವಂತಹ ನಿಮ್ಮ ಮನೆಯ ಸದಸ್ಯರಿಂದ ದೂರವಿರಬೇಕು.

**ಮಕರ** ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ವಿವಾಹಿತ ಜನರು ಇಂದು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ಕುಂಭ** ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು.

**ಮೀನ** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನಿಮ್ಮ ಹೂಡಿಕೆಗಳು ಬಗ್ಗೆ ನಿಮ್ಮ ಭವಿಷ್ಯದ ಗುರಿಗಳ ಬಗ್ಗೆ ರಹಸ್ಯಮಯವಾಗಿರಿ.

## ವೇಶ್ಯಾವಾಟಿಕೆ: ಇಬ್ಬರ ರಕ್ಷಣೆ

• **ಉದಯವಾಹಿನಿ ದಾವಣಗೆರೆ**

ವೇಶ್ಯಾವಾಟಿಕೆ ನಡೆಸುತ್ತಿದ್ದ ಲಾಡ್ಜ್ ಮೇಲೆ ದಾಳಿ ನಡೆಸಿದ ಕೆಟಿಜೆ ನಗರ ಪೊಲೀಸರು ಇಬ್ಬರು ಮಹಿಳೆಯರನ್ನು ರಕ್ಷಿಸಿದ್ದು, ಮೂವರು ಪುರುಷರನ್ನು ಬಂಧಿಸಿದ್ದಾರೆ.

ನಗರದ ಹದಡಿ ರಸ್ತೆಯಲ್ಲಿ ಇರುವ ಸೂರ್ಯ ಲಾಡ್ಜ್ ನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದದ್ದು ಬೆಳಕಿಗೆ ಬಂದಿದೆ. ವೇಶ್ಯಾವಾಟಿಕೆ ನಡೆಸುತ್ತಿದ್ದ ಖಚಿತ ವರ್ತಮಾನದ ಮೇರೆಗೆ ಕೆಟಿಜೆ ನಗರ ಸಿಪಿಐ ಸುನೀಲ್ ಕುಮಾರ್ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿದ್ದಾರೆ. ಈ ವೇಳೆ ಇಬ್ಬರು ಮಹಿಳೆಯರು ಹಾಗೂ ಮೂವರು ಪುರುಷರು ಇದ್ದದ್ದು ಕಂಡು ಬಂದಿದೆ. ಲಾಡ್ಜ್ ನಡೆಸುತ್ತಿದ್ದ ನಾಗರಾಜ್ ಎಂಬಾತನು ನಾಪತ್ತೆಯಾಗಿದ್ದಾನೆ. ಆತ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಕೆಟಿಜೆ ನಗರ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇರುವ ಲಾಡ್ಜ್ ಇದಾಗಿದೆ. ದಾವಣಗೆರೆ ಮಹಿಳಾ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

## ಆರೋಗ್ಯ ಇಲಾಖೆಯ ಕಾರ್ಯಕ್ರಮಗಳ ಕುರಿತು ಒಂದು ದಿನದ ಕಾರ್ಯಾಗಾರ

• **ಉದಯವಾಹಿನಿ ಚಿತ್ರದುರ್ಗ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಇದೇ ಮಾರ್ಚ್ 19ರಂದು ಬೆಳಿಗ್ಗೆ 11.15ಕ್ಕೆ ಚಿತ್ರದುರ್ಗ ನಗರದ ಐಶ್ವರ್ಯ ನವೀನ್ ಹೋಟೆಲ್ ನಲ್ಲಿ ಜಿಲ್ಲಾಮಟ್ಟದ ಪತ್ರಿಕಾ ಮತ್ತು ವಿದ್ಯುನ್ಮಾನ ಮಾಧ್ಯಮ ಪ್ರತಿನಿಧಿಗಳಿಗೆ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳ ಕುರಿತು ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿದೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ.ಪಿ.ರೇಣುಪ್ರಸಾದ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾಧ್ಯಕ್ಷ ಬಿ.ದಿನೇಶ್ ಗೌಡಗೆರೆ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಡಿ.ಎಂ. ಅಭಿನವ ಸೇರಿದಂತೆ ಆರೋಗ್ಯ ಇಲಾಖೆಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಬಸ್ ನಿಲ್ದಾಣಕ್ಕೆ ಅಧಿಕಾರಿ ಭೇಟಿ ಮೂಲಭೂತ ಸೌಕರ್ಯ ಒದಗಿಸುವ ಭರವಸೆ

• **ಉದಯವಾಹಿನಿ ವಡಗೇರಾ**

ತಾಲ್ಲೂಕು ಕೇಂದ್ರದಲ್ಲಿರುವ ಬಸ್ ನಿಲ್ದಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ರಾಜ್ಯ ರೈತ ಸಂಘ ಹಸಿರು ಸೇನೆ ವಾಸುದೇವ್ ಮೇಟಿ ಬಣದ ತಾಲ್ಲೂಕು ಅಧ್ಯಕ್ಷ ವಿದ್ಯಾಧರ್ ಜಾಕಾ ನೇತೃತ್ವದಲ್ಲಿ ಒತ್ತಾಯಿಸಿದ್ದರ. ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆಯ ಎಇಇ ಅಶೋಕ್‌ರವರು ವಡಗೇರಾ ಬಸ್ ನಿಲ್ದಾಣಕ್ಕೆ ಮಂಗಳವಾರ ಮಧ್ಯಾಹ್ನ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದ ಅವರು ಕೂಡಲೇ ಕುಡಿಯುವ ನೀರಿನ ವ್ಯವಸ್ಥೆಯ ಜೊತೆಗೆ ಸ್ವಚ್ಛತೆಗೆ ಆದ್ಯತೆ ನೀಡಿ ಮೂಲಭೂತ ಸೌಕರ್ಯಗಳನ್ನು ಒಂದು ವಾರದ ಒಳಗಾಗಿ ಒದಗಿಸಿಕೊಡುವ ಭರವಸೆ ನೀಡಿದರು. ಈ ಸಮಯದಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ವಿದ್ಯಾಧರ್ ಜಾಕಾ ಮಾತನಾಡಿ ಪ್ರಯಾಣಿಕರಿಗೆ ಅವಶ್ಯಕತೆ ಇರುವ ಮೂಲಭೂತ ಸೌಕರ್ಯಗಳನ್ನು ಕೂಡಲೇ ಒದಗಿಸಬೇಕು ಒಂದು ವೇಳೆ ವಿಳಂಬ ಮಾಡಿದಲ್ಲಿ ರೈತ ಸಂಘದ ವತಿಯಿಂದ ಉಗ್ರ ಹೋರಾಟ ಮಾಡುವುದಾಗಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷ ವಿದ್ಯಾಧರ್ ಜಾಕ , ಶರಣು ಜಡಿ , ವೆಂಕಟೇಶ್ ಇಟಗಿ, ಸಾರಿಗೆ ಸಂಸ್ಥೆಯ ಸಿಬ್ಬಂದಿ ರಮೇಶ್ ಹಾಗೂ ಇನ್ನಿತರರು ಇದ್ದರು.


ಉದಯವಾಹಿನಿ ಚಿತ್ರ

### ವಿವಿಧ ಜಿಲ್ಲೆಗಳಿಂದ ಬಲಗೈ ಹೊಲೆಯ ಸಂಬಂಧಿ ಉಪಜಾತಿಗಳ ಪ್ರತಿನಿಧಿಗಳು ಭಾಗವಹಿಸಿ ಅಧ್ಯಕ್ಷರಿಗೆ ಮನವಿ

# 23ರಂದು ಒಳ ಮೀಸಲಾತಿ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ

• **ಉದಯವಾಹಿನಿ ಬೀದರ್**

ಈ ತಿಂಗಳ 23ರಂದು ಭಾನುವಾರ ಬೆಳಿಗ್ಗೆ 11.30 ಗಂಟೆಗೆ ರಾಜ್ಯ ರಾಜ್ಯಧಾನಿ ಬೆಂಗಳೂರಿನ ಕಂಟನ್‌ಮೆಂಟ್ ರೈಲ್ವೆ ಸ್ಟೇಷನ್ ಬಳಿ ಇರುವ ವಸಂತನಗರ ಬಡಾವಣೆಯಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಒಳ ಮೀಸಲಾತಿ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಬಲಗೈ ಹೊಲೆಯ ಸಂಬಂಧಿತ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾ ಅಧ್ಯಕ್ಷ ಮಾರೂತಿ ಬೌದ್ದೆ ತಿಳಿಸಿದರು.

ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಘೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಈ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಒಳ ಮೀಸಲಾತಿ ಏಕ ಸದಸ್ಯತ್ವ ವಿಚಾರಣಾ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ನಾಗಮೋಹನದಾಸರು ಭಾಗವಹಿಸಿ ಮನವಿ ಪತ್ರ ಸ್ವೀಕರಿಸಲು ಒಪ್ಪಿರುತ್ತಾರೆ.

ಮತ್ತು ರಾಜ್ಯದ ವಿವಿಧ ಜಿಲ್ಲೆಗಳಿಂದ ಬಲಗೈ ಹೊಲೆಯ ಸಂಬಂಧಿ ಉಪಜಾತಿಗಳ ಪ್ರತಿನಿಧಿಗಳು ಭಾಗವಹಿಸಿ ಆಯೋಗದ ಅಧ್ಯಕ್ಷರಿಗೆ ಮನವಿ ಪತ್ರ ಸಲ್ಲಿಸಲಿದ್ದಾರೆ. ಇದರಲ್ಲಿ ಕುಲಬಾಂಧವರು ವಿಚಾರವಂತರು, ಗಣ್ಯರು, ವಕೀಲರು, ರಾಜಕಾರಣಿಗಳು, ವಿದ್ಯಾರ್ಥಿಗಳು, ಸಮಾಜದ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದವರು ತಿಳಿಸಿದರು.

ಮಾದಿಗ ಸಮುದಾಯದ ಸಂಘಟನೆಗಳು ಮತ್ತು ಮುಖಂಡರುಗಳು ಸದಾಶಿವ ವರದಿ ಆಧಾರದ ಮೇಲೆ ತಕ್ಷಣವೇ ಜಾರಿಗೆ ತರಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ.

ಆದರೆ ಬಲಗೈ ಸಮುದಾಯದ ಮುಖಂಡರು ಮತ್ತು ಸಂಘಟನೆಗಳು ಸದಾಶಿವ ಆಯೋಗದ ವರದಿ ಆಧಾರದ ಮೇಲೆ ಒಳ ಮೀಸಲಾತಿ ಜಾರಿ ತರುವುದು ಬೇಡ. ಏಕೆಂದರೆ ಈ ವರದಿಯಲ್ಲಿರುವ ದತ್ತಾಂಶ ಅಂಕಿ ಅಂಶಗಳು ತಪ್ಪು ಮಾಹಿತಿಯಿಂದ ಕೂಡಿದ್ದು ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ, ಎಂಬ ಉಪಜಾತಿಗಳ ಶೀರುನಾಮೆಯಡಿ ದಕ್ಷಿಣ ಕರ್ನಾಟಕ, ಮಧ್ಯ ಕರ್ನಾಟಕ ಉತ್ತರ ಕರ್ನಾಟಕ ಮತ್ತು ಕರಾವಳಿ ಕರ್ನಾಟಕದ ಭಾಗಗಳಲ್ಲಿ ಪರಸ್ಪರ ಏರುಪೇರು ಆಗಿದೆಯೆಂದು ಮತ್ತು ಈ ಆಯೋಗದಲ್ಲಿ ಉಲ್ಲೇಖಿಸಿರುವ 101 ಉಪಜಾತಿಗಳು ಈಗ 184ಕ್ಕೆ ಏರಿರುವುರಿಂದ ಮತ್ತೊಮ್ಮೆ ವೈಜ್ಞಾನಿಕ ವರದಿ ಉಪಜಾತಿಗಳೊಂದಿಗೆ ಸ್ಪಷ್ಟವಾಗಿ ನಮೂದಿಸಿ ಜಾರಿಗೊಳಿಸಬೇಕಾಗಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಉಪಾಧ್ಯಕ್ಷ ಮಹಾಲಿಂಗ ಬೆಲ್ದಾಳ, ಗಂಗಮ್ಮ ಫುಲೆ, ಜಿಲ್ಲಾ ಸಹ ಕಾರ್ಯದರ್ಶಿ ರಾಜಪ್ಪ ಗುನ್ನಳ್ಳಿಕರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ವಿನಯ ಮಾಳಗೆ, ಖಜಾಂಚಿ ದಶರಥ ಗುರು, ಯುವ ಮುಖಂಡರಾದ ಸುಂದರ್, ಶ್ರೀಧರ ಸೋಮನೋರ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.


ಉದಯವಾಹಿನಿ ಚಿತ್ರ

> ದೇಶದ ಪ.ಜಾ.ಗಳಲ್ಲಿನ ಉಪಜಾತಿಗಳಿಗೆ ಒಳಮೀಸಲಾತಿ ಜಾರಿ ಮಾಡಲು ಆಯಾ ರಾಜ್ಯ ಸರಕಾರಗಳು ಅಧಿಕಾರ ಹೊಂದಿವೆ ಎಂದು ಅಗಸ್ಟ 01, 2024 ರಂದು ಸುಪ್ರಿಂ ಕೋರ್ಟಿನ ಏಳು ನ್ಯಾಯಾಧೀಶರನ್ನೊಳಗೊಂಡು ಸಂವಿಧಾನ ಪೀಠ ತೀರ್ಪು ನಿಡುತ್ತಿದ್ದಂತೆ ಇಡಿ ಭಾರತದಾದ್ಯಂತ ರಾಜಕೀಯ ಸಂಚಲನ ಉಂಟಾಗಿದೆ ಉತ್ತರ ಭಾರತದ ಪ್ರಮುಖ ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶಗಳಲ್ಲಿ ಒಳ ಮೀಸಲಾತಿ ವಿವಾದ ವ್ಯಕ್ತವಾಗಿದೆ. ತೆಲಂಗಾಣ, ಕರ್ನಾಟಕ ಸರಕಾರಗಳು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಏಕಸದಸ್ಯ ಆಯೋಗವನ್ನು ನೇಮಿಸಿ ವರದಿಯನ್ನು ಆಹ್ವಾನಿಸಿದೆ. ಕರ್ನಾಟಕದಲ್ಲಿ ಒಳಮೀಸಲಾತಿ ಸಂಬಂಧ ಸುಪ್ರಿಂ ಕೋರ್ಟ್ ತೀರ್ಪನ್ನು ಎಡಗೈ-ಬಲಗೈ (ಹೊಲೆಯ-ಮಾದಿಗ) ಸಮುದಾಯಗಳು ಸ್ವಾಗತಿಸಿವೆ
> -ವಿಠಲದಾಸ ಪ್ಯಾಗೆ, ಸಮಿತಿ ಉಪಾಧ್ಯಕ್ಷ

**ಯಾವ ಸಮುದಾಯಕ್ಕೂ ಅನ್ಯಾಯವಾಗಬಾರದು**

ಸಮಿತಿಯ ಗೌರವಾಧ್ಯಕ್ಷರಾದ ಡಾ.ಕಾಶಿನಾಥ ಚಲವಾ ಮಾತನಾಡಿ, ಹಾಲಿ ಸಿದ್ಧರಾಮಯ್ಯನವರ ನೇತೃತ್ವದ ಸರಕಾರ ನ್ಯಾಯಮೂರ್ತಿ ನಾಗಮೋಹನದಾಸ್ ಅಧ್ಯಕ್ಷತೆಯಲ್ಲಿ ಒಳಮೀಸಲಾತಿ ಆಯೋಗವನ್ನು ನೇಮಿಸಿದೆ. ಹಾಗಾಗಿ ಈ ಹಿಂದಿನ ಬಿಜೆಪಿ ಸರ್ಕಾರವನ್ನು ಅವೈಜ್ಞಾನಿಕ ಒಳಮೀಸಲಾತಿಯನ್ನು ಹಂಚಿಕೆ ಮಾಡಿರುವುದು ಅಸಮರ್ಪಕವಾಗಿದೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿರುವ ಬಲಗೈ ಹೊಲೆಯ ಸಂಬಂಧಿ ಉಪಜಾತಿಗಳು ಬಹು ದೊಡ್ಡ ಸಂಖ್ಯೆಯಲ್ಲಿದೆ. ಒಟ್ಟಾರೆ ಬಲಗೈ ಸಮುದಾಯವು 60 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿದೆ. ಈ ಹಿನ್ನೆಲೆಯಲ್ಲಿ ಒಳ ಮೀಸಲಾತಿ ಹಂಚಿಕೆಯಲ್ಲಿ ಯಾವ ಸಮುದಾಯಕ್ಕೂ ಅನ್ಯಾಯವಾಗದಿರಲೆಂದು ನಮ್ಮ ಸಮಿತಿ ಒತ್ತಾಯಿಸುತ್ತದೆ ಎಂದರು.

## ಶಿಕ್ಷಿತ ಸಮಾಜದಿಂದ ಮಾತ್ರ ಪ್ರಗತಿ ಸಾಧ್ಯ: ಗುತ್ತೇದಾರ

• **ಉದಯವಾಹಿನಿ ಕಲಬುರಗಿ**

ಶಿಕ್ಷಿತ ಸಮಾಜದಿಂದ ಮಾತ್ರ ಪ್ರಗತಿ ಸಾಧ್ಯ ಆದ್ದರಿಂದ ವಿದ್ಯಾರ್ಥಿಗಳು, ಪೋಷಕರು ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಜೆ.ಪಿ.ಎನ್.ಪ್ರತಿಷ್ಠಾನವೂ ಶಿಕ್ಷಣಕ್ಕೆ ಪ್ರೋತ್ಸಾಹಿಸುತ್ತಿದ್ದು, ಸದುಪಯೋಗ ಪಡೆಸಿಕೊಂಡು ಜೀವನದಲ್ಲಿ ಉನ್ನತ ಸಾಧನೆ ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ್ ಹೇಳಿದರು.

ನಗರದ ರಾಮಮಂದಿರ ವೃತ್ತದ ಸಾಯಿ ಮಂದಿರ ಸಮೀಪದ ಖಾಸಗಿ ಹೋಟೇಲ್‌ನಲ್ಲಿ ಜೆ.ಪಿ. ನಾರಾಯಣಸ್ವಾಮಿ ಪ್ರತಿಷ್ಠಾನದಿಂದ ಆಯೋಜಿಸಿದ್ದ ಈಡಿಗ ಸಮಾಜದ ಪದವಿ, ಸ್ನಾತ ಕೋತ್ತರ ಪದವಿ, ಬಿ.ಇಡಿ ಸೇರಿ ವಿವಿಧ ಪದವಿಯಲ್ಲಿ ಅಧ್ಯಯನ ನಿರತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಈಡಿಗ ಸಮಾಜದಲ್ಲಿ ಕಡು ಬಡತನದಲ್ಲಿ ಇರುವ ಪ್ರತಿಭಾವಂತರಿಗೆ ವಿದ್ಯಾರ್ಥಿ ವೇತನ ನೀಡುವ ಪುಣ್ಯದ ಕಾರ್ಯಗಳನ್ನು ಜೆಪಿಎನ್‌ಪಿ ಮಾಡುತ್ತಿದೆ. ಈ ಮಹತ್ಕಾರ್ಯಕ್ಕೆ ಎಲ್ಲರೂ ಕೈ ಜೋಡಿಸಬೇಕು. ಪರಸ್ಪರ ಸಹಕಾರ, ಶ್ರದ್ದೆಯಿಂದ ಕೆಲಸ ಮಾಡಿದರೆ ಸಮಾಜದ ಪ್ರಗತಿ ಸಾಧ್ಯ ಎಂದರು.

ಜೆ.ಪಿ.ಎನ್.ಪ್ರತಿಷ್ಠಾನದ ಅಧ್ಯಕ್ಷ ಎಚ್.ಎಲ್.ಶಿವಾನಂದ ಮಾತನಾಡಿ, ಮಕ್ಕಳಲ್ಲಿ ಜ್ಞಾನ ಬಿತ್ತುವ ಕೆಲಸವನ್ನು ಪ್ರತಿಯೊಬ್ಬರೂ ಮಾಡಬೇಕು. ಬಡತನದ ಕಾರಣಕ್ಕೆ ಸಮಾಜದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು.

ಪ್ರತಿಭಾವಂತರಿಗೆ ಸದಾ ಪ್ರೋತ್ಸಾಹ ದೊರೆಯಬೇಕು. ಆ ನಿಟ್ಟಿನಲ್ಲಿ ಪ್ರತಿಷ್ಠಾನವೂ ಶಿಕ್ಷಣದ ಜತೆಗೆ ಆರೋಗ್ಯ ಸೇರಿ ವಿವಿಧ ಸೇವಾ ಕಾರ್ಯಗಳನ್ನು ಪ್ರತಿಷ್ಠಾನ ಹಮ್ಮಿಕೊಳ್ಳುತ್ತಿದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

> ವಿದ್ಯಾರ್ಥಿ ಜೀವನವೂ ಅಮೂಲ್ಯವಾಗಿದ್ದು, ಶ್ರಮವಹಿಸಿ ಅಧ್ಯಯನಶೀಲರಾಗಿ ಮುನ್ನಡೆಯಬೇಕು. ಉನ್ನತ ಸ್ಥಾನಗಳನ್ನು ಹೊಂದುವ ಮೂಲಕ ಹೆತ್ತವರ ಮತ್ತು ಹುಟ್ಟಿದ ಸಮಾಜದ ಕೀರ್ತಿಯನ್ನು ತರಬೇಕು. ಕೊಟ್ಟಿರುವ ವಿದ್ಯಾರ್ಥಿ ವೇತನದ ಹಣವನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕು
> -ಲತಾ ಸುಧಾಕರ
> ಪ್ರತಿಷ್ಠಾನದ ಮಹಾಪೋಷಕಿ

## ಸುಳ್ಳು ಜಾತಿ ಪ್ರಮಾಣ ಪತ್ರ ವ್ಯಕ್ತಿಗಳಿಗೆ ಕ್ರಿಮಿನಲ್ ಜಾತಿ ನಿಂದನೆ ಪ್ರಕರಣ ದಾಖಲಿಸಿ

• **ಉದಯವಾಹಿನಿ ಜೇವರ್ಗಿ**

ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದ ವ್ಯಕ್ತಿಗಳಿಗೆ ಕ್ರಿಮಿನಲ್ ಹಾಗೂ ಜಾತಿ ನಿಂದನೆ ಪ್ರಕರಣ ದಾಖಲಿಸಬೇಕೆಂದು ತಾಲ್ಲೂಕ ಅಖಿಲ ಕರ್ನಾಟಕ ವಾಲ್ಮೀಕಿ ಮಹಾ ಸಭಾ ವತಿಯಿಂದ ಪ್ರತಿಭಟನೆ ಮಾಡಲಾಯಿತು. ಪ್ರತಿಭಟನೆ ಉದ್ದೇಶ ಮಾತನಾಡಿದ ಸಮಾಜ ತಾಲೂಕ ಅಧ್ಯಕ್ಷ ಸುರೇಶ್ ಹವಲ್ದಾರ್ ಮಾತನಾಡುತ್ತಾ ಈಗಾಗಲೇ ಕೋರ್ಟ್‌ನಿಂದ ಸುಳ್ಳು ತಳವಾರ್ ಜಾತಿ ಪ್ರಮಾಣ ರದ್ದುಪಡಿಸಿದೆ ಸರ್ಟಿಫಿಕೇಟ್ ತೆಗೆದುಕೊಂಡವರ ಮೇಲೆ ಕ್ರಿಮಿನಲ್ ಪ್ರಕರಣ ಮತ್ತು ಜಾತಿ ನಿಂದನೆ ಪ್ರಕರಣ ದಾಖಲಿಸಬೇಕೆಂದು ನಾವು ಆಗ್ರಹಿಸಿದ್ದೇವೆ ಈಗಾಗಲೇ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದ ತಾಲ್ಲೂಕಿನ ಕಟ್ಟಿಸಂಗವಿ ಗ್ರಾಮದ ದೇವಕಿ ಗಂಡ ಭೀಮರಾಯ ಗ್ರಾಮ ಪಂಚಾಯತ್ ಸದಸ್ಯತ್ವ ರದ್ದು ಪಡಿಸಬೇಕು ಹಾಗೂ ಆಂದೋಲ ಗ್ರಾಮದ ಮಲ್ಲಪ್ಪ ತಂದೆ ಸಾಯಿಬಣ್ಣ ವಿ ವಿ ಎಸ್ ಸೊಸೈಟಿ ಸಮಿತಿ ಸದಸ್ಯರಾದವರನ್ನು ರದ್ದು ಮಾಡಬೇಕು ಮಾಡಬೇಕು ಇವರು ಕೋಲಿ ಕಬ್ಬಿಲಿಗಾ ಜಾತಿಯವರಿದ್ದು ಇವರು ನಾಯ್ಕಡ್ ತಳವಾರ್ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ ಇದು ಕಾನೂನು ಬಾಹಿರ ಎಂದು ಹೇಳಿದರು.


ಉದಯವಾಹಿನಿ ಚಿತ್ರ

## ಶಾಸಕ ಭರತ್ ರೆಡ್ಡಿ ಕಚೇರಿಗೆ ಬಾಂಬ್ ಬೆದರಿಕೆ ಹಾಕಿದ ಯುವಕ ವಶಕ್ಕೆ

• **ಉದಯವಾಹಿನಿ ಬಳ್ಳಾರಿ**

ನಗರದ ಶಾಸಕ ನಾರಾ ಭರತ್ ರೆಡ್ಡಿ ಅವರ ಇಲ್ಲಿನ ಗಾಂಧಿ ನಗರದ ಕಚೇರಿಗೆ ''ಬಾಂಬ್ ಇನ್ ಯುವರ್ ಆಫೀಸ್'' ಎಂದು ಸ್ವತಃ ಶಾಸಕರ ಮೊಬೈಲ್‌ಗೆ ವಾಟ್ಸ್ ಆ್ಯಪ್ ಮೆಸೇಜ್ ಮಾಡಿದ ನಗರದ ಅಂದ್ರಾಳ್ ಯುವಕ ಸಂತೋಷ್ ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಅಧಿವೇಶನದಲ್ಲಿ ಪಾಲ್ಗೊಂಡಿರುವ ಶಾಸಕ ಭರತ್ ರೆಡ್ಡಿ ಬೆಂಗಳೂರಿನಲ್ಲಿ ಇದ್ದು ಅವರ ಮೊಬೈಲ್‌ಗೆ ನಿನ್ನೆ ತಡರಾತ್ರಿ ಪಾನಮತ್ತನಾಗಿದ್ದ ಸಂತೋಷ್, ಮ್ಯೇಸೆಜ್ ಮಾಡಿದ್ದಾನೆ.

ಮೆಸೇಜ್ ಬಂದ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಭರತ್. ಕೂಡಲೇ ಗಾಂಧಿನಗರ ಪೊಲೀಸರ ಯುವಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಿವೃತ್ತ ಶಿಕ್ಷಕಿ ಅವರ ಪುತ್ರ ಈತ. ಬಿಬಿಎ ವಿದ್ಯಾಭ್ಯಾಸ ಮಾಡಿದ್ದು. ಕೆಲಸ ಇಲ್ಲದೇ ಖಾಲಿ ಇದ್ದಾನೆ. ಬಲ ಮೂಲಗಳ ಪ್ರಕಾರ ಈತ ಬಾಂಬ್ ಇಟ್ಟಿರುವುದಾಗಿ ಅಷ್ಟೇ ಮೆಸೇಜ್ ಮಾಡಿಲ್ಲ. ವಿವರವಾದ ವಿಷಯವೊಮನದನ್ನು ಬರೆದು ಹಾಕಿದ್ದಾನಂತೆ. ಈತ ಎನ್.ಎಸ್.ಯು.ಐ ಕಾರ್ಯಕರ್ತ. ಭರತ್ ರೆಡ್ಡಿ ಅವರ ಅಪ್ಪಟ ಅಭಿಮಾನಿಯೂ ಹೌದಂತೆ. ಈತ ಬರೆದ ವಿವರದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಕಂಪೇರ್ ಮಾಡಿ. ಅವರು ಜಿಲ್ಲೆಯ ಹಕವಡೆ ಉದ್ಯೋಗ ಮೇಳಮಾಡಿ ಅನೇಕ ಯುವಕರಿಗೆ ಉದ್ಯೋಗ ದೊರೆಯುವಂತೆ ಮಾಡಿದ್ದಾರೆ. ಆದರೆ ನೀವು ನಗರದಲ್ಲಿ ಬರೀ ಬ್ಯಾನರ್‌ಗಳನ್ನು ಹಾಕಿ ಮೆರೆಯುತ್ತಿದ್ದೀರಿ. ಯುವಕರಿಗೆ ಉದ್ಯೋಗ ದೊರೆಯುವಂತೆ ಏನಾದರೂ ಕೆಲಸ ಮಾಡಿ ಎಂದು ಬರೆದಿದ್ದಾನಂತೆ.


ಉದಯವಾಹಿನಿ ಚಿತ್ರ

### ಪಕ್ಷಿಗಳ ಹಸಿವು, ದಾಹ ತಣಿಸಲು ಗಿಡಮರಗಳಲ್ಲಿ ವ್ಯವಸ್ಥೆ ಮಾಡಿದ ಜಿ.ಪಂ ಸಿಇಒ

# ಜಿಲ್ಲಾ ಪಂಚಾಯಿತಿ ಆವರಣದಲ್ಲಿ ಪಕ್ಷಿ ಕಾಳಜಿ

• **ಉದಯವಾಹಿನಿ ಚಿತ್ರದುರ್ಗ**

ಬಿಸಿಲ ಧಗೆಗೆ ಪ್ರಾಣಿ-ಪಕ್ಷಿಗಳು ಬಾಯಾರಿ ಬಳಲುತ್ತಿರುತ್ತವೆ. ಮಡಿಕೆ-ಕುಡಿಕೆಯಲ್ಲಿ ನೀರಿಡಿ. ಪ್ರಾಣಿ, ಪಕ್ಷಿಗಳ ದಾಹ ನೀಗಿಸಿ ಎಂಬ ಸಂದೇಶಗಳು ಬೇಸಿಗೆ ಸಮಯದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಕಣ್ಣಿಗೆ ಬೀಳುತ್ತವೆ. ಆದರೆ ಇದನ್ನು ಅಕ್ಷರಶಃ ಕಾರ್ಯಗತಗೊಳಿಸುವ ಮೂಲಕ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಪಕ್ಷಿ ಪ್ರೇಮ ಮೆರೆದಿದ್ದಾರೆ.

ಕೋಟೆನಾಡು ಚಿತ್ರದುರ್ಗದಲ್ಲಿ ಈ ಬಾರಿ ಬಿಸಿ ಲಿನ ತಾಪಮಾನ ದಿನೇ ದಿನೇ ಏರಿಕೆಯಾಗುತ್ತಿದೆ. ಸಾಮಾನ್ಯವಾಗಿ ಏಪ್ರಿಲ್, ಮೇ ತಿಂಗಳಿನಲ್ಲಿ ಕಂಡುಬರುತ್ತಿದ್ದ ಬಿರು ಬೇಸಿಗೆ, ಈ ಬಾರಿ ಮಾರ್ಚ್ ತಿಂಗಳಿನಲ್ಲಿಯೇ ತನ್ನ ಪ್ರತಾಪ ತೋರಲು ಆರಂಭಿಸಿದೆ. ಈ ಹಿನ್ನಲೆಯಲ್ಲಿ ಪಕ್ಷಿಗಳ ಹಸಿವು ನೀಗಿಸುವ ಹಾಗೂ ದಾಹ ತಣಿಸುವ ಪ್ರಯತ್ನವೊಂದು ಚಿತ್ರದುರ್ಗ ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಆವರಣದಲ್ಲಿ ನಡೆದಿದೆ.

ಬೇಸಿಗೆಯಲ್ಲಿನ ತಾಪಮಾನ ನಿಧಾನವಾಗಿ ಏರಿಕೆಯಾಗುತ್ತಿದೆ. ಪರಿಣಾಮ ನೀರಿನ ಸೆಲೆಗಳು ಬತ್ತಲಾರಂಭಿಸಿವೆ. ಬೇಸಿಗೆಯಲ್ಲಿ ಸಾಮಾನ್ಯವಾಗಿ ಜನರೊಂದಿಗೆ ಪ್ರಾಣಿ, ಪಕ್ಷಿಗಳು ಸಹ ಬಿಸಿಲಿನ ತಾಪಕ್ಕೆ ಸಿಲುಕಿ ಕಂಗಲಾಗುವುದು ಸಹಜ. ಹೀಗಾಗಿ ಪ್ರಾಣಿ-ಪಕ್ಷಿಗಳು ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗುವುದು ಅಸಾಮಾನ್ಯವೇನಲ್ಲ. ಚಿತ್ರದುರ್ಗ ಜಿಲ್ಲಾ ಪಂಚಾಯತ್ ಆವರಣದಲ್ಲಿರುವ ಗಿಡ-ಮರಗಳಿಗೆ ಮತ್ತು ಕಾರ್ಯಾಲಯದ ಮಹಡಿ ಮೇಲೆ ತಮ್ಮ ಸ್ವಂತ ಹಣದಲ್ಲಿ ಪ್ಲಾಸ್ಟಿಕ್ ಬೌಲ್‌ಗಳನ್ನು ನೇತು ಹಾಕಿ, ಒಂದರಲ್ಲಿ ನೀರು, ಇನ್ನೊಂದರಲ್ಲಿ ವಿವಿಧ ಬಗೆಯ ಧಾನ್ಯ, ಕಾಳುಗಳನ್ನು ಹಾಕಿದ್ದಾರೆ.

ಇದರಿಂದಾಗಿ ಪಕ್ಷಿಗಳು ಬಂದು ಆಹಾರ ತಿಂದು, ನೀರನ್ನು ಕುಡಿದು, ಹಸಿವು ಹಾಗೂ ದಣಿವು ನೀಗಿಸಿಕೊಳ್ಳುತ್ತಿದ್ದು, ಇದರಿಂದಾಗಿ ಜಿಲ್ಲಾ ಪಂಚಾಯಿತಿ ಆವರಣ ಪಕ್ಷಿಗಳ ಚಿಲಿಪಿಲಿ, ಕಲರವದಿಂದ ಕೂಡಿದೆ.



ಉದಯವಾಹಿನಿ ಚಿತ್ರ



> ಬೇಸಿಗೆಯಲ್ಲಿ ಜನಸಾಮಾನ್ಯರಿಗೂ ಸಹ ಕುಡಿಯುವ ನೀರಿನ ಬವಣೆ ಸಾಮಾನ್ಯ. ಇಂತಹ ಸಂದರ್ಭದಲ್ಲಿ ಪಕ್ಷಿ ಸಂಕುಲಗಳ ಪಾಡು ಹೇಳತೀರದು. ಜನರ ದುರಾಸೆಗೆ ಅನೇಕ ಪ್ರಾಣಿ ಪಕ್ಷಿ ಸಂಕುಲಗಳು ನಾಶವಾಗುತ್ತಿವೆ. ಇಂತಹ ಸಮಯದಲ್ಲಿ ಪ್ರಾಣಿ, ಪಕ್ಷಿಗಳ ಸಂಕುಲವನ್ನು ಉಳಿಸಿ, ಬೆಳೆಸಬೇಕಾದ್ದು ಮಾನವೀಯ ಧರ್ಮವಾಗಿದೆ. ಹೀಗಾಗಿಯೇ ಜಿ.ಪಂ. ಆವರಣದಲ್ಲಿ ಪಕ್ಷಿಗಳ ಹಸಿವು ಹಾಗೂ ನೀರಿನ ದಾಹ ನೀಗಿಸಲು ಗಿಡಮರಗಳಲ್ಲಿ ಪ್ಲಾಸ್ಟಿಕ್ ಬೌಲ್‌ಗಳನ್ನು ನೇತುಹಾಕಿಸಿದ್ದೇನೆ. ಪಕ್ಷಿಗಳು ಇದರಿಂದ ತಮ್ಮ ದಾಹ ನೀಗಿಸುವುದನ್ನು ಕಂಡಾಗ ಖುಷಿಯಾಗುತ್ತದೆ. ಇದೇ ರೀತಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಇಓಗಳು ಮತ್ತು ಪಿಡಿಒಗಳು ತಮ್ಮ ವೈಯಕ್ತಿಕ ಹಣದಲ್ಲಿ ಪಕ್ಷಿಗಳ ನೀರಿನ ದಾಹ ನೀಗಿಸಲು ಮುಂದಾಗಬೇಕು. ತಮ್ಮ ಪಂಚಾಯತಿ ವ್ಯಾಪ್ತಿ ಸುತ್ತಮುತ್ತಲಿರುವ ಗಿಡ ಮರ, ಮಹಡಿಗಳ ಮೇಲೆ ಪಕ್ಷಿಗಳಿಗೆ ಒಂದಿಷ್ಟು ನೀರು ಮತ್ತು ಆಹಾರವಿನ್ನಿಡುವ ಕಾರ್ಯ ಮಾಡುವಂತೆ ಇದೇ ಸಂದರ್ಭದಲ್ಲಿ ಮನವಿ ಮಾಡುತ್ತೇನೆ -ಎಸ್.ಜೆ.ಸೋಮಶೇಖರ್, ಜಿಲ್ಲಾ ಪಂಚಾಯಿತಿ ಸಿಇಒ

**ಜಿ.ಪಂ ಸಿಇಒ ಮಾನವೀಯತೆ**

ಮನುಷ್ಯರಿಗೆ ನೀರಡಿಕೆಯಾದರೆ ಎಲ್ಲಿಂದಾದರೂ ನೀರು ಪಡೆದು ಕುಡಿಯುತ್ತೇವೆ. ಆದರೆ ಮೂಕ ಪ್ರಾಣಿ-ಪಕ್ಷಿಗಳಿಗೆ ಎಲ್ಲಿ ನೀರು ಸಿಗುತ್ತದೆಯೋ ಎಂದು ಹುಡುಕಿಕೊಂಡು ಅಲೆದಾಡಬೇಕು. ಬೇಸಿಗೆಯ ಬೇಗೆಯಲ್ಲಿ ಪಕ್ಷಿಗಳು ಆಹಾರ, ನೀರಿಗಾಗಿ ಅವುಗಳು ಪಡುವ ವೇದನೆ ಗಮನಿಸಿದ ಜಿ.ಪಂ ಸಿಇಒ ಮಾನವೀಯತೆ ಮೆರೆದಿದ್ದಾರೆ.

## ಗೃಹ ಬಳಕೆಯ ಗ್ಯಾಸ್ ಅಕ್ರಮ ಬಳಕೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಹುಣಸಗಿ**

ಗೃಹಬಳಕೆಯ ಗ್ಯಾಸ್ ಸಿಲಿಂಡರ್‌ಗಳು ವಾಣಿಜ್ಯ ಉದ್ದೇಶಕ್ಕಾಗಿ ಯಾರು ಬಳಸುವಂತ್ತಿಲ್ಲ ಒಂದು ವೇಳೆ ಅಕ್ರಮವಾಗಿ ಬಳಸುವುದನ್ನು ಕಂಡು ಬಂದರೆ ತಕ್ಷಣ ಜಪ್ತಿ ಮಾಡಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹುಣಸಗಿ ಪಟ್ಟಣದ ಗ್ರಾಮ ಆಡಳಿತ ಅಧಿಕಾರಿಗಳಾದ ಹಸನ್ ಡಿ. ಎಮ್ ಹೇಳಿದರು. ಮಾತನಾಡಿದ ಅವರು, ಮಾನ್ಯ ಉಪ ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಯಾದಗಿರಿ ಮತ್ತು ಮಾನ್ಯ ತಹಶೀಲ್ದಾರರು ಹುಣಸಗಿ ರವರ ನಿರ್ದೇಶನದ ಮೇರೆಗೆ ಇಂದು ಪಟ್ಟಣದ ವಿವಿಧ ಹೋಟೆಲ್, ಖಾನಾವಳಿ, ಡಾಭಾ, ರೆಸ್ಟೋರೆಂಟ್, ಟೀ ಪಾಯಿಂಟ್, ಫಾಸ್ಟ್ ಫುಡ್ ಪಾಯಿಂಟ್, ಬೇಕರಿ, ಗ್ಯಾಸ್ ವೆಲ್ಡಿಂಗ್ ಶಾಪ್‌ಗಳ ಮೇಲೆ ಪಿ. ಎ. ಒ. ಹುಣಸಗಿ ಹಾಗೂ ಇಂಡೇನ್ ಗ್ಯಾಸ್ ಏಜೆನ್ಸಿಯವರೊಂದಿಗೆ ಜಂಟಿಯಾಗಿ ದಾಳಿ ಮಾಡಿ ಅಕ್ರಮವಾಗಿ ವಾಣಿಜ್ಯ ಉದ್ದೇಶಕ್ಕಾಗಿ ಬಳಸುತ್ತಿದ್ದ ಒಟ್ಟು 46 ಗೃಹ ಬಳಕೆಯ ಎಲ್. ಪಿ. ಜಿ. ಗ್ಯಾಸ್ ಸಿಲಿಂಡರ್‌ಗಳನ್ನು ಜಪ್ತಿ ಮಾಡಲಾಯಿತು. ಹುಣಸಗಿ ತಾಲ್ಲೂಕಿನ ಆಹಾರ ನಿರೀಕ್ಷಕರಾದ ಸಿ.ಎಸ್ ರಾಜು, ಆಹಾರ ಇಲಾಖೆ ಸಿಬ್ಬಂದಿಗಳು ಹಾಗೂ ಇತರರು ಇದ್ದರು.

## ಪರೀಕ್ಷೆಯ ಭಯವೇ ವಿದ್ಯಾರ್ಥಿಗಳ ನಾಪತ್ತೆಗೆ ಕಾರಣ ಎಂದ ಪೊಲೀಸರು

• **ಉದಯವಾಹಿನಿ ಮಂಗಳೂರು**

ಪ್ರತ್ಯೇಕ ಪ್ರಕರಣಗಳಲ್ಲಿ ಮಂಗಳೂರಿನ ಓರ್ವ ಬಾಲಕ ಹಾಗೂ ಮತ್ತೋರ್ವ ಬಾಲಕಿಯ ನಾಪತ್ತೆಗೆ ಪರೀಕ್ಷೆಯ ಭಯವೇ ಕಾರಣ ಎಂದು ಪೊಲೀಸರು ಹೇಳಿದ್ದಾರೆ. ಕಾವೂರು ಪೊಲೀಸ್ ಠಾಣೆ ವ್ಯಾಪ್ತಿಯ 17 ವರ್ಷದ ಬಾಲಕನೋರ್ವ ಮಾ.12ರಂದು ಕಾಣೆಯಾಗಿ, ಮಾ.15ರಂದು ಪತ್ತೆಯಾಗಿದ್ದ. ಆತ ಗೋವಾ, ಹುಬ್ಬಳ್ಳಿ ಮುಂತಾದ ಕಡೆ ಸುತ್ತಾಡಿದ್ದ. ಪರೀಕ್ಷೆಯ ಭಯದಿಂದ ಆತ ಮನೆ ಬಿಟ್ಟು ಹೋಗಿರುವುದಾಗಿ ತಿಳಿದುಬಂದಿದೆ ಎಂದು ಅವರು ತಿಳಿಸಿದ್ದಾರೆ.

ಇನ್ನು ಮತ್ತೊಂದು ಪ್ರಕರಣದಲ್ಲಿ ಪಣಂಬೂರು ಠಾಣೆ ವ್ಯಾಪ್ತಿಯ ಬಾಲಕಿಯೋರ್ವಳು ಕಾಣೆಯಾಗಿ ಬಳಿಕ ಪತ್ತೆಯಾಗಿದ್ದಳು. ಆಕೆ ಕೂಡ ಪರೀಕ್ಷೆಯ ಭಯದಿಂದ ಮನೆ ಬಿಟ್ಟು ಹೋಗಿರುವುದಾಗಿ ಗೊತ್ತಾಗಿದೆ ಎಂದಿದ್ದಾರೆ. ಕರಾವಳಿಯಲ್ಲಿ ಸಂಚಲನ ಮೂಡಿಸಿದ್ದ ಬಂಟ್ವಾಳದ ದಿಗಂತ್ ನಾಪತ್ತೆ ಪ್ರಕರಣಕ್ಕೆ ಸಂಬಂಧಿ ಸಿದಂತೆ ದಿಗಂತ್ ಕೂಡ ಮನೆ ಬಿಟ್ಟು ಹೋಗಿದ್ದು ಪರೀಕ್ಷೆಯ ಭಯದಿಂದಲೇ ಎಂಬುದು ಆತ ಪತ್ತೆಯಾದ ಬಳಿಕ ತಿಳಿದು ಬಂದಿತ್ತು. 1ರಿಂದ 9ನೇ ತರಗತಿಯವರೆಗೆ ಸಿಸಿಇ ಪದ್ಧತಿ ಇರುವುದರಿಂದ ಯಾವ ವಿದ್ಯಾರ್ಥಿಯೂ ಅನುತ್ತೀರ್ಣ ಆಗುವ ಸಾಧ್ಯತೆ ಇಲ್ಲ. ಒಂದು ವೇಳೆ ಅನುತ್ತೀರ್ಣವಾದರೆ ಅಥವಾ ಕಡಿಮೆ ಅಂಕ ಬಂದರೆ ಮರು ಪರೀಕ್ಷೆ ಬರೆಯಬಹುದು.

ಹೆತ್ತವರು ಕೂಡ ಮಕ್ಕಳ ಮೇಲೆ ಅತಿಯಾದ ಒತ್ತಡ ಹಾಕುವುದು ಸರಿಯಲ್ಲ. 1ರಿಂದ 9ನೇ ತರಗತಿ ಮಾತ್ರವಲ್ಲದೆ, ಯಾವುದೇ ತರಗತಿಯ ವಿದ್ಯಾರ್ಥಿಗಳೂ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಬೇಕು.

ಆತಂಕ ಬೇಡ. ಅನುತ್ತೀರ್ಣವಾದರೆ ಹಾಗೂ ಕಡಿಮೆ ಅಂಕ ಬಂದರೆ ಭವಿಷ್ಯ ಮುಗಿಯುವುದಿಲ್ಲ. ಅವಕಾಶಗಳು ಅಪಾರವಾಗಿವೆ ಎಂದು ದ.ಕ. ಜಿಲ್ಲಾ ಡಿಡಿಪಿಐ ಗೋವಿಂದ್

## ಯೋಗಿನಾರೇಯಣ ವೃತ್ತಕ್ಕೆ ಚಾಲನೆ

• **ಉದಯವಾಹಿನಿ ಹೊಸಪೇಟೆ**

ಬಲಿಜ ಸಂಘದಿಂದ.ಕಾಲಜ್ಞಾನಿ.ಯತಿಗಳಾದ ಶ್ರೀ ಶ್ರೀ ಯೋಗಿ ನಾರೇಯಣ ಗುರುಗಳ 289 ನೆಯ ಜಯಂತಿ ಅಂಗವಾಗಿ ಕಾಲಜ್ಞಾನಿ ಶ್ರೀ ಯೋಗಿ ನಾರೇಯಣ ವೃತ್ತಕ್ಕೆ ಚಾಲನೆ ನೀಡಲಾಯಿತು.

ಬಳ್ಳಾರಿ ಯಿಂದ ಹೊಸಪೇಟೆ ಪ್ರವೇಶವಾಗುವ ಮಾರ್ಗದ. ಕಾಲುವೆ ಪಕ್ಕದ ಆಲದ ಮರದ ಬೈಪಾಸ್ ರಸ್ತೆಯ ಹಾಗೂ ಎಂಪಿ ಪ್ರಕಾಶ್ ನಗರದಿಂದ ಬರುವ ಡಾಕ್ಟರ್ ವಿಷ್ಣುವರ್ಧನ ರಸ್ತೆಗೆ ಅಂಟಿಕೊಂಡಿರುವ ವೃತ್ತಕ್ಕೆ ಶ್ರೀ ಕಾಲಜ್ಞಾನಿ ಯೋಗಿ ನಾರೇಯಣ ಸರ್ಕಲ್ ಎಂದು ನಾಮಕರಣ ಮಾಡಿ ನಗರಸಭೆ ಸದಸ್ಯ ದ್ವಾರಕೀಶ್‌ರವರು ಉಪಸ್ಥಿತಿಯಲ್ಲಿ ಘೋಷಣೆ ಕೂಗಿ ಜೈ ಕಾರ ಹಾಕಿ ಸಂಭ್ರಮಿಸಿದರು .


ಉದಯವಾಹಿನಿ ಚಿತ್ರ

## ಇಫ್ತಾರ್ ಕೂಟದಿಂದ ಭಾವೈಕ್ಯತೆಯ ಸಂದೇಶ

• **ಉದಯವಾಹಿನಿ ಅಥಣಿ**

ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರು ಪಟ್ಟಣದ ಹೊರವಲಯದಲ್ಲಿರುವ ನೂರಾಣಿ ಫಂಕ್ಷನ್ ಹಾಲ್‌ನಲ್ಲಿ ಪವಿತ್ರ ರಂಜಾನ್ ತಿಂಗಳಲ್ಲಿ ಮುಸ್ಲಿಂ ಬಾಂಧವರಿಗಾಗಿ ಇಫ್ತಾರ್ ಕೂಟ ಆಯೋಜಿಸಿ ಭಾವೈಕ್ಯತೆ ಸಂದೇಶ ಸಾರಿದರು.

ಈ ವೇಳೆ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರು ಮಾತನಾಡಿ ಅಥಣಿ ಈ ಪುಣ್ಯ ಭೂಮಿಯಲ್ಲಿ ಹಿಂದೂ ಮುಸ್ಲಿಂ ಎಂಬ ಭೇದಭಾವವಿಲ್ಲದೆ. ಸೌಹಾರ್ದತೆಯಿಂದ ಸಹೋದರತೆಯಿಂದ ಭಾವೈಕ್ಯತೆಯಿಂದ ನಾವೆಲ್ಲರೂ ಜೀವನ ಸಾಗಿಸುತ್ತಿದ್ದು. ಈ ಪವಿತ್ರ ಭೂಮಿಯಲ್ಲಿ ಮುಂದೆಯೂ ಕೂಡಾ ನಾವೆಲ್ಲರೂ ಒಂದೇ ಎನ್ನುವ ರೀತಿಯಲ್ಲಿ ಪರಸ್ಪರರ ಹಬ್ಬ ಹರಿದಿನಗಳಲ್ಲಿ ಭಾಗಿಯಾಗುವ ಮೂಲಕ ನಾವೆಲ್ಲರೂ ಭಾರತೀಯರು ಒಂದೇ ಎಂಬ ಸಂದೇಶ ಸಾರೋಣ. ನನ್ನ ಮೇಲೆ ಪ್ರೀತಿ ಮತ್ತು ಗೌರವ ಇಟ್ಟು ನಮ್ಮ ಆತಿಥ್ಯವನ್ನು ಸ್ವೀಕರಿಸಿ ಇಫ್ತಾರ್ ಕೂಟಕ್ಕೆ ಆಗಮಿಸಿರುವ ಎಲ್ಲಾ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯಗಳನ್ನು ಕೋರುವೆ. ಯಾವಾಗಲೂ ಕೂಡ ಹಿಂದೂ ಮುಸ್ಲಿಂ ಎಂಬ ಭೇದ ಭಾವ ಬಿಟ್ಟು ಭಾವೈಕ್ಯತೆಯಿಂದ ಸಾಗಬೇಕು ಅಣ್ಣ ತಮ್ಮಂದಿರ ಹಾಗೆ ಎಲ್ಲರೂ ಒಗ್ಗಟ್ಟಿನಿಂದ ಹೋಗಬೇಕು ಎಂದ ಅವರು ಈ ಪವಿತ್ರ ರಂಜಾನ್ ಹಬ್ಬವು ಮನುಷ್ಯನ ಮನಸ್ಸು ಸ್ವಚ್ಛಗೊಳಿಸುವ ಆರಾಧನೆ.

ಮನುಷ್ಯನನ್ನು ಕೆಡುಕುಗಳಿಂದ ಒಳಿತಿನೆಡೆಗೆ ಆಹ್ವಾನಿಸುವ ಮತ್ತು ಒಳಿತಿನೊಂದಿಗೆ ಮುನ್ನಡೆಸುವ ಹಬ್ಬವಾಗಿದೆ. ಅದಕ್ಕಾಗಿ ಎಲ್ಲರೂ ಸನ್ಮಾರ್ಗದಲ್ಲಿ ಸಾಗೋಣ ಎಂದರು.


ಉದಯವಾಹಿನಿ ಚಿತ್ರ

### ಭೂಮಿಗೆ ಸುರಕ್ಷಿತವಾಗಿ ಮರಳುತ್ತಿರುವ ಸುನೀತಾ ವಿಲಿಯಮ್ಸ್ | ಸುನೀತಾ ವಿಲಿಯಮ್ಸ್ ಸುರಕ್ಷಿತವಾಗಿ ಮರಳಲಿ ಎಂದ ಮೋದಿ

# ಅಂತರಿಕ್ಷ ದೇವಿ ಸುನೀತಾ ವಿಲಿಯಮ್ಸ್‌ಗೆ ಪ್ರಧಾನಿ ಮೋದಿ ಪತ್ರ

**ಹೊಸದಿಲ್ಲಿ:** ಭಾರತೀಯ ಮೂಲದ ಅಮೆರಿಕನ್ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಅವರ ಸುರಕ್ಷಿತ ಮರಳುವಿಕೆಗೆ ಶುಭ ಹಾರೈಸಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪತ್ರ ಬರೆದಿದ್ದಾರೆ. ಸುನೀತಾ ವಿಲಿಯಮ್ಸ್ ಅವರನ್ನು ಭೂಮಿಗೆ ಕರೆತರುತ್ತಿರುವ ಕಾರ್ಯಾಚರಣೆ ಸಫಲವಾಗಲಿ ಎಂದು ಹಾರೈಸಿರುವ ಪ್ರಧಾನಿ ಮೋದಿ, ಸುನೀತಾ ವಿಲಿಯಮ್ಸ್ ಸಮಸ್ತ ಭಾರತೀಯರ ಹೃದಯಕ್ಕೆ ಹತ್ತಿರವಾಗಿದ್ದಾರೆ ಎಂದು ಹೇಳಿದ್ದಾರೆ.

ಪ್ರಧಾನಿ ಮೋದಿ ಅವರು ಕಳೆದ ಮಾರ್ಚ್ 1ರಂದೇ ಈ ಪತ್ರ ಬರೆದಿದ್ದು, ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಈ ಪತ್ರವನ್ನು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಹಂಚಿಕೊಂಡಿದ್ದಾರೆ. ಸುನೀತಾ ವಿಲಿಯಮ್ಸ್ ಅವರ ಸುರಕ್ಷಿತ ಮರಳುವಿಕೆಗೆ ಇಡೀ ಜಗತ್ತು ಕಾತರದಿಂದ ಕಾಯುತ್ತಿದೆ. ಅದೇ ರೀತಿ ಭಾರತದ 140 ಕೋಟಿ ಜನ ಕೂಡ ಈ ಧೀರ ಗಗನಯಾತ್ರಿಯ ಸುರಕ್ಷಿತ ಆಗಮನಕ್ಕಾಗಿ ಪ್ರಾರ್ಥಿಸುತ್ತಿದೆ. ಸುನೀತಾ ವಿಲಿಯಮ್ಸ್ ಭಾರತೀಯರ ಹೃದಯದಲ್ಲಿ ಮನೆ ಮಾಡಿದ್ದಾರೆ.. ಎಂದು ಪ್ರಧಾನಿ ಮೋದಿ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಪತ್ರದಲ್ಲಿ ತಮ್ಮ ಅಮೆರಿಕ ಭೇಟಿಯ ಸಂದರ್ಭದಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗಿನ ಮಾತುಕತೆ ವೇಳೆ,



■ ಸುನೀತಾ ವಿಲಿಯಮ್ಸ್ ಬಾಹ್ಯಾಕಾಶ ಸಾಧನೆ ಕೊಂಡಾಡಿದ ಪ್ರಧಾನಿ ಮೋದಿ

ಸುನೀತಾ ವಿಲಿಯಮ್ಸ್ ಅವರನ್ನು ಮರಳಿ ಭೂಮಿಗೆ ಕರೆತರುವ ಕಾರ್ಯಾಚರಣೆ ಬಗ್ಗೆ ಚರ್ಚಿಸಿದ್ದಾಗಿಯೂ ಪ್ರಧಾನಿ ಮೋದಿ ಉಲ್ಲೇಖಿಸಿದ್ದಾರೆ. ಅದೇ ರೀತಿ, ಹೊಸದಿಲ್ಲಿಯಲ್ಲಿ ನಾಸಾದ ಮಾಜಿ ಗಗನಯಾತ್ರಿ ಮೈಕ್ ಮಸ್ಸಿಮಿನೊ ಅವರನ್ನು ಭೇಟಿಯಾದಾಗ,

> **ಕಳೆದ 10 ತಿಂಗಳಿನಿಂದ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿರುವ ಭಾರತೀಯ ಮೂಲದ ಅಮೆರಿಕನ್ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಸುರಕ್ಷಿತವಾಗಿ ಭೂಮಿಗೆ ಕರೆತರುವ ಕಾರ್ಯಾಚರಣೆಗೆ ಚಾಲನೆ ನೀಡಲಾಗಿದೆ. ಈ ಮಧ್ಯೆ ಸುನೀತಾ ವಿಲಿಯಮ್ಸ್ ಅವರ ಸುರಕ್ಷಿತ ಮರಳುವಿಕೆಗೆ ಶುಭ ಹಾರೈಸಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಸಾ ಗಗನಯಾತ್ರಿಗೆ ಪತ್ರ ಬರೆದಿದ್ದಾರೆ. ಸುನೀತಾ ವಿಲಿಯಮ್ಸ್ ಸಮಸ್ತ ಭಾರತೀಯರ ಹೃದಯದಲ್ಲಿದ್ದಾರೆ**
>
> **-ನರೇಂದ್ರ ಮೋದಿ, ಪ್ರಧಾನಿ**

ಸುನಿತಾ ವಿಲಿಯಮ್ಸ್ ಅವರ ಯೋಗಕ್ಷೇಮದ ಬಗ್ಗೆ ಮಾಹಿತಿ ಪಡೆದಿದ್ದಾಗಿಯೂ ಪ್ರಧಾನಿ ಮೋದಿ ತಿಳಿಸಿದ್ದಾರೆ. ನಿಮ್ಮ ಬಗ್ಗೆ ಮತ್ತು ನಿಮ್ಮ ಕೆಲಸದ ಬಗ್ಗೆ ಸಮಸ್ತ ಭಾರತೀಯರಿಗೆ ಹೆಮ್ಮೆ ಇದೆ. ಇತ್ತೀಚಿನ ಬೆಳವಣಿಗೆಗಳು ನಿಮ್ಮ ಸ್ಫೂರ್ತಿದಾಯಕ ಧೈರ್ಯ ಮತ್ತು ಪರಿಶ್ರಮವನ್ನು ಜಗತ್ತಿಗೆ ತೋರಿಸಿವೆ. ನೀವು ಭೂಮಿಗೆ ಸುರಕ್ಷಿತವಾಗಿ ಮರಳಲಿ ಎಂದು ಹಾರೈಸುತ್ತಿರುವ ಸಮಸ್ತ ಭಾರತೀಯರ ಪ್ರತಿನಿಧಿಯಾಗಿ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ನೀವು ಭೂಮಿಯಿಂದ ನೂರಾರು ಮೈಲಿ ದೂರದಲ್ಲಿದ್ದರೂ, ನೀವು ನಮ್ಮ ಹೃದಯಕ್ಕೆ ಹತ್ತಿರವಾಗಿದ್ದೀರಿ. ನಿಮ್ಮ ಸಾಧನೆಗಳು ಪ್ರತಿಯೊಬ್ಬ ಭಾರತೀಯ ಹೆಮ್ಮೆಪಡುವಂತೆ ಮಾಡಿವೆ. ನೀವು ಭೂಮಿಗೆ ಮರಳಿದ ಮೇಲೆ ಭಾರತಕ್ಕೆ ನಿಮ್ಮ ಸಂಭಾವ್ಯ ಭೇಟಿಗಾಗಿ ನಾವು ಕಾತರದಿಂದ ಕಾಯುತ್ತಿದ್ದೇವೆ ಎಂದು ಪ್ರಧಾನಿ ಮೋದಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಇದೇ ವೇಳೆ ಸುನೀತಾ ವಿಲಿಯಮ್ಸ್ ಅವರ ತಾಯಿ ಬೋನಿ ಪಾಂಡ್ಯ ಮತ್ತು ಪತಿ ಮೈಕೆಲ್ ವಿಲಿಯಮ್ಸ್ ಅವರಿಗೆ ಶುಭಾಶಯ ಕೋರಿರುವ ಪ್ರಧಾನಿ ಮೋದಿ, ಮಗಳ ಆಗಮನಕ್ಕಾಗಿ ಆ ತಾಯಿ ಮಾಡುತ್ತಿರುವ ಪ್ರಾರ್ಥನೆಯಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ ಎಂದು ಭಾವುಕರಾಗಿ ಹೇಳಿದ್ದಾರೆ.

ಸುನೀತಾ ವಿಲಿಯಮ್ಸ್ ಅವರ ತಂದೆ ದೀಪಕ್ ಭಾಯ್ ಅವರು ಭಾರತದ ಗುಜರಾತ್ ಮೂಲದವರಾಗಿದ್ದು, 2020ರಲ್ಲಿ ಅಸುನೀಗಿದ್ದಾರೆ. 2016ರಲ್ಲಿ ಪ್ರಧಾನಿ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಸುನೀತಾ ವಿಲಿಯಮ್ಸ್ ಮತ್ತು ಅವರ ತಂದೆ ದೀಪಕ್ ಭಾಯ್ ಅವರನ್ನು ಭೇಟಿಯಾಗಿದ್ದರು.

## ಅಮೆರಿಕ ಮೊದಲು ನೀತಿಯನ್ನು ತಪ್ಪಾಗಿ ಅರ್ಥೈಸಬಾರದು; ಗಬ್ಬಾರ್ಡ್



**ನವದೆಹಲಿ:** ಡೊನಾಲ್ಡ್ ಟ್ರಂಪ್ ಅವರ ಅಮೆರಿಕ ಮೊದಲು ನೀತಿಯನ್ನು ಅಮೆರಿಕ ಮಾತ್ರ ಎಂದು ತಪ್ಪಾಗಿ ಅರ್ಥೈಸಬಾರದು ಎಂದು ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕ ತುಳಸಿ ಗಬ್ಬಾರ್ಡ್ ಹೇಳಿದ್ದಾರೆ. ರೈಸಿನಾ ಸಂವಾದದಲ್ಲಿ ಮಾತನಾಡಿದ ಅವರು, ಭಾರತ-ಯುಎಸ್ ಸಂಬಂಧವನ್ನು ವಿಸ್ತರಿಸುವಲ್ಲಿ ದೊಡ್ಡ ಅವಕಾಶ ಇದೆ, ಪ್ರಧಾನಿ ನರೇಂದ್ರ ಮೋದಿ, ಅಧ್ಯಕ್ಷ ಟ್ರಂಪ್ ಕಳೆದ ತಿಂಗಳು ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಸಭೆಯಲ್ಲಿ ಒಟ್ಟಾರೆ ದ್ವಿಪಕ್ಷೀಯ ಸಂಬಂಧಗಳನ್ನು ಹೆಚ್ಚಿಸುವ ದೃಷ್ಟಿಕೋನವನ್ನು ಮಂಡಿಸಿದರು. ಟ್ರಂಪ್ ಅವರ ಅಮೆರಿಕ ಮೊದಲು ನೀತಿಯಂತೆಯೇ, ಪ್ರಧಾನಿ ಮೋದಿ ಭಾರತ ಮೊದಲು ವಿಧಾನಕ್ಕೆ ಬದ್ಧರಾಗಿದ್ದಾರೆ ಎಂದು ಗಬ್ಬಾರ್ಡ್ ಹೇಳಿದರು. ಅಮೆರಿಕ ಮೊದಲು ಎಂದರೆ ಅಮೆರಿಕ ಮಾತ್ರ ಎಂದು ತಪ್ಪಾಗಿ ಅರ್ಥೈಸಿಕೊಳ್ಳಬಾರದು ಎಂದು ಅವರು ಹೇಳಿದರು. ನಮ್ಮ ಎರಡೂ ದೇಶಗಳ ನಡುವಿನ ಈ ಪಾಲುದಾರಿಕೆ ಮತ್ತು ಸ್ನೇಹವು ಬೆಳೆಯುತ್ತಲೇ ಇರುತ್ತದೆ ಎಂದು ನನಗೆ ವಿಶ್ವಾಸವಿದೆ ಎಂದು ಅವರು ಹೇಳಿದರು.

ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಮೋದಿ-ಟ್ರಂಪ್ ಭೇಟಿಯನ್ನು ಇಬ್ಬರು ಹಳೆಯ ಸ್ನೇಹಿತರ ಮರುಸಂಪರ್ಕ ಎಂದು ಗಬ್ಬಾರ್ಡ್ ಬಣ್ಣಿಸಿದರು. ಭೌಗೋಳಿಕ ರಾಜಕೀಯ ಪ್ರಕ್ಷುಬ್ಧತೆಯ ಬಗ್ಗೆ ಮಾತನಾಡಿದ ಗಬ್ಬಾರ್ಡ್, ಅಧ್ಯಕ್ಷ ಟ್ರಂಪ್ ಶಾಂತಿ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಬದ್ಧರಾಗಿದ್ದಾರೆ ಎಂದು ಹೇಳಿದರು. ಟ್ರಂಪ್ ಅಚಲ ಸ್ವಭಾವದವರು ಎನ್ನುವುದನ್ನು ಅವರು ಇದೇ ಸಂದರ್ಭದಲ್ಲಿ ಉಲ್ಲೇಖಿಸಿದರು.

# ಅಮೆರಿಕ ಬಿಟ್ಟು ವಿದೇಶ ಪ್ರಯಾಣ ಬೇಡ

### ಎಚ್-1 ಬಿ, ಎಫ್-1 ವೀಸಾ ಹೊಂದಿರುವವರಿಗೆ ಅನಗತ್ಯ ತೊಂದರೆಗೆ ಸಿಲುಕದಂತೆ ಸಲಹೆ

**ಅಮೆರಿಕ:** ಅಮೆರಿಕಕ್ಕೆ ಪ್ರವೇಶವಾಗದಂತೆ ನಿಷೇಧಿಸಿರುವ ದೇಶಗಳ ಪಟ್ಟಿಯಲ್ಲಿ ಭಾರತ ಇಲ್ಲವಾದ್ರೂ, ಈ ಆತಂಕ ಮಾತ್ರ ಬೂದಿ ಮುಚ್ಚಿದ ಕೆಂಡದಂತಿದೆ. ಹೌದು ಇದಕ್ಕೆ ಪುಷ್ಟಿ ನೀಡುವಂತೆ, ಅಮೆರಿಕದ ವಲಸೆ ವಕೀಲರು ತಮ್ಮ ಕ್ಲೈಂಟ್ ಗಳಿಗೆ ಅನಗತ್ಯ ವಿದೇಶ ಪ್ರವಾಸ ಮಾಡದಂತೆ ಎಚ್ಚರಿಸುತ್ತಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಒಂದು ವೇಳೆ ಅಮೆರಿಕಾದಿಂದ ಹೊರಗೆ ಹೋದರೆ ವಾಪಸ್ ಬರುವುದು ಕಷ್ಟವಾಗಬಹುದು ಎಂದು ವಕೀಲರು ಅಭಿಪ್ರಾಯ ಪಟ್ಟಿದ್ದಾರೆ.

ಎಚ್-1 ಬಿ ವೀಸಾ ಹೊಂದಿರುವ ಭಾರತೀಯರು, ಅವರ ಸಂಬಂಧಿಕರು, ಅಂತರರಾಷ್ಟ್ರೀಯ ವಿದ್ಯಾರ್ಥಿಗಳು ಹಾಗೂ ಗ್ರೀನ್ ಕಾರ್ಡ್ ಹೊಂದಿರುವವರು ಅಮೆರಿಕ ಬಿಟ್ಟು ವಿದೇಶ ಪ್ರವಾಸ ಮಾಡದಂತೆ ಸಲಹೆ ನೀಡುತ್ತಿದ್ದಾರೆ. ಅಮೆರಿಕಾದ ಪ್ರಯಾಣ ನಿಷೇಧ ಪಟ್ಟಿಯಲ್ಲಿ ಭಾರತವನ್ನು ಸೇರಿಸಿಲ್ಲ. ಆದರೂ ಆತಂಕ ಹಾಗೆಯೇ ಇದೆ. ವೀಸಾ ಸ್ಟಾಂಪಿಂಗ್‌ನಲ್ಲಿ ವಿಳಂಬ, ತೀವ್ರ ತಪಾಸಣೆ, ವಿಮಾನ ನಿಲ್ದಾಣದಲ್ಲಿ ತಡೆ ಮುಂತಾದ ಕಾರಣಗಳಿಂದಾಗಿ ವಕೀಲರು ಈ ಸಲಹೆ ನೀಡುತ್ತಿದ್ದಾರೆ.

ವಿಶೇಷವಾಗಿ ಎಚ್-1 ಬಿ ವೀಸಾ ಮತ್ತು ಎಫ್-1 ವೀಸಾ ನವೀಕರಣ ಮಾಡುವವರು ಎಚ್ಚರದಿಂದ ಇರಬೇಕು ಎಂದು ಸಲಹೆ ನೀಡುತ್ತಿದ್ದಾರೆ. ಪ್ರಯಾಣ ಅನಿವಾರ್ಯವಾದರೆ, ಉದ್ಯೋಗದಾತರು ಮನೆಯಿಂದಲೇ ಕೆಲಸ ಮಾಡುವಂತಹ ಪರ್ಯಾಯ ಮಾರ್ಗ ಸಿದ್ಧವಾಗಿಟ್ಟುಕೊಳ್ಳಲು ಸೂಚಿಸಲಾಗಿದೆ.

ಸಿಯಾಟಲ್‌ನ ವಲಸೆ ವಕೀಲರಾದ ಕೃಪಾ ಉಪಾಧ್ಯಾಯ ಅವರ ಪ್ರಕಾರ, ಇದು ಕೇಳಲು ಕಷ್ಟ ಆಗಬಹುದು. ಆದರೆ ವಿದೇಶಿಯರು (ವಿಶೇಷವಾಗಿ ಎಚ್-1ಬಿ ಅಥವಾ ಎಫ್-1 ವೀಸಾಗಳನ್ನು ನವೀಕರಿಸಬೇಕಾದವರು) ಸದ್ಯಕ್ಕೆ ಅಮೆರಿಕಾವನ್ನು ತೊರೆಯುವ ಬಗ್ಗೆ ಎರಡು ಬಾರಿ ಯೋಚಿಸಬೇಕು ಎಂದು ಹೇಳಿದ್ದಾರೆ. ಆದರೆ ಈಗ, ವೀಸಾ ಅವಧಿ ಮುಗಿದ 12 ತಿಂಗಳ ಒಳಗೆ ಅದೇ ವೀಸಾ ವಿಭಾಗದಲ್ಲಿ ನವೀಕರಣಕ್ಕೆ ಅರ್ಜಿ ಸಲ್ಲಿಸಿದರೆ ಮಾತ್ರ ಡ್ರಾಪ್‌ಬಾಕ್ಸ್ ಸೌಲಭ್ಯ ಲಭ್ಯವಿರುತ್ತದೆ. ಅಂದರೆ,





#### ನಿಯಮಗಳ ಬದಲಾವಣೆ

**ವೀಸಾ ಹೊಂದಿರುವವರು ಪರ್ಯಾಯ ಯೋಜನೆಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ಅಮೆರಿಕ ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್ , ಇಂಟರ್‌ವ್ಯೂ ರಹಿತ ವೀಸಾ (ಡ್ರಾಪ್‌ಬಾಕ್ಸ್ ಅಪಾಯಿಂಟ್‌ಮೆಂಟ್) ಪಡೆಯುವ ಅರ್ಹತೆಯ ನಿಯಮಗಳನ್ನು ಬದಲಾಯಿಸಿದೆ. ಈ ಹಿಂದೆ, ಯಾವುದೇ ವೀಸಾ ವಿಭಾಗದಲ್ಲಿ (ಬಿ ವೀಸಾವನ್ನು ಹೊರತುಪಡಿಸಿ) ವೀಸಾ ಪಡೆದವರು, ವೀಸಾ ಅವಧಿ ಮುಗಿದ 48 ತಿಂಗಳ ಒಳಗೆ ಮತ್ತೆ ಅರ್ಜಿ ಸಲ್ಲಿಸಿದರೆ ಇಂಟರ್‌ವ್ಯೂ ಇಲ್ಲದೆಯೆ ವೀಸಾಗೆ ಅರ್ಹರಾಗಿದ್ದರು.**

ನೀವು ಎಫ್-1 ವೀಸಾ ಹೊಂದಿರುವ ಅಂತರರಾಷ್ಟ್ರೀಯ ವಿದ್ಯಾರ್ಥಿಯಾಗಿದ್ದು, ಈಗ ಎಚ್-1ಬಿ ವೀಸಾಗೆ ಅರ್ಜಿ ಸಲ್ಲಿಸಲು ಬಯಸಿದರೆ, ನೀವು ಇಂಟರ್‌ವ್ಯೂ ಸ್ಲಾಟ್‌ಗಾಗಿ ಕಾಯಬೇಕು.

ಒಂದು ವೇಳೆ ನೀವು ಎಚ್-1ಬಿ ವೀಸಾ ಹೊಂದಿದ್ದು, ವಿಸ್ತರಣೆಗೆ ಅರ್ಜಿ ಸಲ್ಲಿಸಲು ಬಯಸಿದರೆ, ಆದರೆ ನಿಮ್ಮ ಹಿಂದಿನ

#### ವೀಸಾ ಸಿಗಲು ವಿಳಂಬ

**ಎನ್‌ಪಿರ್ಘುಡ್ ಲಾ ಗ್ರೂಪ್‌ನ ವ್ಯವಸ್ಥಾಪಕ ವಕೀಲರಾದ ಸ್ನೇಹಲ್ ಬಾತ್ರಾ ಅವರು, ವೀಸಾ ಅಪಾಯಿಂಟ್‌ಮೆಂಟ್‌ಸಿಗದೆ ಉಂಟಾಗುವ ಅನಗತ್ಯ ವಿಳಂಬ ಮಾತ್ರ ಸಮಸ್ಯೆಯಲ್ಲ. ಹೆಚ್ಚುವರಿ ಪರಿಶೀಲನೆ ಮತ್ತು ಭದ್ರತಾ ತಪಾಸಣೆಯಿಂದಾಗಿ ವ್ಯಕ್ತಿಗಳು ಯಾವುದೇ ಸ್ಪಷ್ಟ ಕಾರಣವಿಲ್ಲದೆ ಆಡಳಿತ ವಿಷಯಕ್ಕೆ ಸಿಲುಕಿಕೊಳ್ಳುತ್ತಿದ್ದಾರೆ. ಈ ಹಿಂದೆ ಅನೇಕ ಬಾರಿ ವೀಸಾ ಅನುಮೋದನೆಗೊಂಡಿದ್ದರೂ ಈ ಭಾರಿ ಹೀಗಾಗುತ್ತಿದೆ. ಈ ಹಿಂದಿನ ಟ್ರಂಪ್ ಆಡಳಿತದ ಅವಧಿಯಲ್ಲಿ ಇದ್ದಂತಹ 'ತೀವ್ರ ತಪಾಸಣೆ' ಮತ್ತೆ ಜಾರಿಯಾಗಿದೆ ಎಂದು ಹೇಳಿದ್ದಾರೆ.**

ವೀಸಾ 12 ತಿಂಗಳಿಗಿಂತ ಮೊದಲು ನೀಡಲ್ಪಟ್ಟಿದ್ದರೆ, ನೀವು ಇಂಟರ್‌ವ್ಯೂಗಾಗಿ ಕಾಯಬೇಕು ಎಂದು ಉಪಾಧ್ಯಾಯ ಹೇಳಿದ್ದಾರೆ.

ಯುಎಸ್ ಸಿಟಿಜನ್‌ಶಿಪ್ ಅಂಡ್ ಇಮಿಗ್ರೇಷನ್ ಸರ್ವಿಸಸ್ ಎಚ್-1ಬಿ ವೀಸಾ ಕೊಟ್ಟರೂ, ಕಾನ್ಸುಲರ್ ಅಧಿಕಾರಿಗೆ ವೀಸಾವನ್ನು ನಿರಾಕರಿಸುವ ಮತ್ತು ಮರು-ಪರಿಶೀಲನೆಗಾಗಿ ಅರ್ಜಿಯನ್ನು USCISಗೆ ಪುನಃ ಕಳಿಸುವ ಹಕ್ಕಿದೆ. ಉಪಾಧ್ಯಾಯ ಅವರು, ಇಂತಹ ಪರಿಸ್ಥಿತಿಯಲ್ಲಿ, ದೇಶದ ಹೊರಗಿರುವ ಉದ್ಯೋಗಿಗಳು ಅಮೆರಿಕಕ್ಕೆ ಮರಳಲು ಸಾಧ್ಯವಾಗದೆ ತಿಂಗಳುಗಟ್ಟಲೆ ಸಿಲುಕಿಕೊಳ್ಳುತ್ತಾರೆ ಎಂದು ಎಚ್ಚರಿಕೆ ಹೇಳಿದ್ದಾರೆ. ರಾಜೀವ್ ಎಸ್. ಖನ್ನಾ ಅವರ ಪ್ರಕಾರ, ಪ್ರಯಾಣ ಅನಿವಾರ್ಯವಾದರೆ, ವೀಸಾ ಅರ್ಜಿದಾರರು ಮತ್ತು ಅವರ ಉದ್ಯೋಗದಾತರು ವೀಸಾ ಸ್ಟಾಂಪಿಂಗ್ ವಿಳಂಬವಾದಲ್ಲಿ ಮನೆಯಿಂದಲೇ ಕೆಲಸ ಮಾಡುವಂತಹ ಪರ್ಯಾಯ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

## 24 ದಲಿತರ ಹತ್ಯೆಗೈದವರಲ್ಲಿ ಬದುಕಿರುವ ಮೂವರಿಗೆ ಗಲ್ಲು

**ಮೈನ್‌ಪುರಿ:** ಉತ್ತರ ಪ್ರದೇಶದ ಮೈನ್‌ಪುರಿ ಜಿಲ್ಲೆಯ ದಿಹುಲಿ ಗ್ರಾಮದಲ್ಲಿ 44 ವರ್ಷಗಳ ಹಿಂದೆ ನಡೆದಿದ್ದ 24 ದಲಿತರ ಹತ್ಯಾಕಾಂಡದಲ್ಲಿ ಡಕಾಯಿತರ ತಂಡದ ಮೂವರನ್ನು ಅಪರಾಧಿಗಳು ಎಂದು ಘೋಷಿಸಿದ ಸ್ಥಳೀಯ ನ್ಯಾಯಾಲಯ, ಗಲ್ಲು ಶಿಕ್ಷೆಯನ್ನು ಮಂಗಳವಾರ ಪ್ರಕಟಿಸಿದೆ.

ಕಪ್ತಾನ್ ಸಿಂಗ್, ರಾಮ್ ಪಾಲ್, ರಾಮ್ ಸೇವಕ್ ಎಂಬುವವರು ದಿಹುಲಿ ದಲಿತ್ ಹತ್ಯಾಕಾಂಡದ ಅಪರಾಧಿಗಳಾಗಿದ್ದು, ಇವರಿಗೆ ಗಲ್ಲು ಶಿಕ್ಷೆ ವಿಧಿಸಲಾಗಿದೆ ಎಂದು ವಿಶೇಷ ನ್ಯಾಯಾಧೀಶೆ ಇಂದಿರಾ ಸಿಂಗ್ ಘೋಷಿಸಿದರು ಎಂದು ಸರ್ಕಾರಿ ಅಭಿ ಯೋಜಕ ಪುಷ್ಪೇಂದ್ರ ಸಿಂಗ್ ಚವ್ಹಾಣ್ ತಿಳಿಸಿದ್ದಾರೆ. 1981ರ ನ. 18ರಂದು ನಡೆದ ಈ ಹತ್ಯಾಕಾಂಡದಲ್ಲಿ ಸಂತೋಷ್ ಸಿಂಗ್ ಎಂಬ ಡಕಾಯಿತರ ಗುಂಪಿನ ನಾಯಕನ ಆಜ್ಞೆಯಂತೆ ರಾಧೇ ಶ್ಯಾಮ್ ಎಂಬಾತ ದಿಹುಲಿ ಗ್ರಾಮದ ದಲಿತ ಸಮುದಾಯದ ಮೇಲೆ ದಾಳಿ ಮಾಡಿದ್ದ. ಗುಂಡಿನ ದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿ 24 ಜನ ಮೃತಪಟ್ಟಿದ್ದರು. ನಂತರ ಅವರ ಬಳಿ ಇದ್ದ ವಸ್ತುಗಳನ್ನು ದೋಚಿದ್ದರು. ಈ ಕುರಿತು ಜಸರಾಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣದ ದಾಖಲಾಗಿತ್ತು. ತನಿಖೆ ಕೈಗೊಂಡ ಪೊಲೀಸರು ಡಕಾಯಿತರ ತಂಡದ ಮುಖಂಡ ಸಂತೋಷ್ ಮತ್ತು ರಾಧೇ ಒಳಗೊಂಡು 17 ಜನರ ವಿರುದ್ಧ ದೋಷಾರೋಪ ಸಲ್ಲಿಸಿದ್ದರು. ವಿಚಾರಣೆ ಹಂತದಲ್ಲಿ 17 ಆರೋಪಿಗಳಲ್ಲಿ ಸಂತೋಷ್ ಮತ್ತು ರಾಧೇ ಸೇರಿ 13 ಜನ ಮೃತಪಟ್ಟಿದ್ದಾರೆ. ಬದುಕುಳಿದಿರುವ ನಾಲ್ವರಲ್ಲಿ 40 ವರ್ಷಗಳ ಬಳಿಕವೂ ಒಬ್ಬ ನಾಪತ್ತೆಯಾಗಿದ್ದಾನೆ. ಉಳಿದ ಮೂವರು ವಿಚಾರಣೆ ಎದುರಿಸಿದ್ದರು.

ಬದುಕುಳಿದ ಮೂವರನ್ನು ಅಪರಾಧಿಗಳು ಎಂದು ಮಾರ್ಚ್ 12ರಂದು ನ್ಯಾಯಾಲಯ ಘೋಷಿಸಿತ್ತು. ಶಿಕ್ಷೆಯ ಪ್ರಮಾಣವನ್ನು ಮಂಗಳವಾರ ಪ್ರಕಟಿಸಿದೆ. ಈ ಘಟನೆ ನಡೆದ ನಂತರ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಗ್ರಾಮಕ್ಕೆ ಭೇಟಿ ನೀಡಿ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿದ್ದರು. ವಿರೋಧ ಪಕ್ಷದ ನಾಯಕರಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಅವರು ಹತ್ಯಾಕಾಂಡ ಖಂಡಿಸಿ ದಿಹುಲಿಯಿಂದ ಫಿರೋಝಾಬಾದ್‌ನ ಸಾದುಪುರ್‌ವರೆಗೆ ಪಾದಯಾತ್ರೆ ಕೈಗೊಂಡಿದ್ದರು.

## 80 ಕೋಟಿ ರೂ.ಚಿನ್ನದ ಗಟ್ಟಿ, 1 ಕೋಟಿಗೂ ಹೆಚ್ಚು ನಗದು ವಶ



**ಅಹಮದಾಬಾದ್:** ಗುಜರಾತ್ ಎಟಿಎಸ್, ಕಂದಾಯ ಗುಪ್ತಚರ ನಿರ್ದೇಶನಾಲಯ ನಗರದ ಪಾಲ್ಡಿ ಪ್ರದೇಶದಲ್ಲಿ ಸ್ಟಾಕ್ ಮಾರ್ಕೆಟ್ ಆಪರೇಟರ್ ಒಬ್ಬರ ಖಾಲಿ ಫ್ಲಾಟ್ ಮೇಲೆ ಜಂಟಿ ಕಾರ್ಯಾಚರಣೆ ನಡೆಸಿದ್ದು ಈ ವೇಳೆ ಫ್ಲಾಟ್‌ನಲ್ಲಿದ್ದ ಚಿನ್ನದ ಗಟ್ಟಿಗಳನ್ನು ನೋಡಿ ಅಧಿಕಾರಿಗಳೇ ಶಾಕ್ ಆಗಿದ್ದಾರೆ. ಡಿಆರ್‌ಐ ಮತ್ತು ಎಟಿಎಸ್ ಅಧಿಕಾರಿಗಳು ಚಿನ್ನದ ಗಟ್ಟಿಗಳನ್ನು ತೂಕ ಮಾಡಿದ್ದಾರೆ. ಸುಮಾರು 90 ಕೆಜಿ ಇದ್ದು ಪ್ರಸ್ತುತ ಮಾರುಕಟ್ಟೆ ಬೆಲೆಯನ್ನು ಆಧರಿಸಿ ಇದರ ಮೌಲ್ಯ 80 ಕೋಟಿ ರೂಗಳಿಗಿಂತ ಹೆಚ್ಚಿರಬಹುದು ಎಂದು ಅವರು ಹೇಳಿದ್ದಾರೆ. ಗುಜರಾತ್‌ಗೆ ಅಪಾರ ಪ್ರಮಾಣದ ಚಿನ್ನವನ್ನು ಕಳ್ಳಸಾಗಣೆ ಮಾಡಿ ಪಾಲ್ಡಿಯ ಆವಿಷ್ಕಾರ್ ಅಪಾರ್ಟ್‌ಮೆಂಟ್‌ನಲ್ಲಿರುವ ಮುಚ್ಚಿದ ಫ್ಲಾಟ್‌ನಲ್ಲಿ ಅಡಗಿಸಿಡಲಾಗಿದೆ ಎಂದು ಎಟಿಎಸ್ ಅಧಿಕಾರಿಗಳಿಗೆ ಗುಪ್ತಚರ ಮಾಹಿತಿ ಬಂದಿದೆ ಎಂದು ಮೂಲಗಳು ತಿಳಿಸಿವೆ. ಮಾಹಿತಿ ಪಡೆದ ನಂತರ, ತನಿಖಾ ಸಂಸ್ಥೆಗಳು ಮತ್ತು ಪೊಲೀಸರು ಮುಚ್ಚಿದ ಫ್ಲಾಟ್‌ನಲ್ಲಿ ಈ ದಾಳಿ ನಡೆಸಿದರು. ಮಂಗಳವಾರ ಮಧ್ಯಾಹ್ನ ಪಾಲ್ಡಿಯಲ್ಲಿರುವ ಸ್ಟಾಕ್ ಮಾರ್ಕೆಟ್ ಆಪರೇಟರ್‌ನ ಆವಿಷ್ಕಾರ್ ಅಪಾರ್ಟ್‌ಮೆಂಟ್‌ನ 104ನೇ ಫ್ಲಾಟ್ ಮೇಲೆ ಸುಮಾರು 25 ಅಧಿಕಾರಿಗಳು ದಾಳಿ ನಡೆಸಿದರು. ಈ ಫ್ಲಾಟ್‌ನ ಮಾಲೀಕರು ಮಹೇಂದ್ರ ಶಾ ಮತ್ತು ಮೇಘ್ ಶಾ ಎಂದು ತಿಳಿದುಬಂದಿದೆ. ಇಬ್ಬರೂ ಷೇರು ಮಾರುಕಟ್ಟೆ ನಿರ್ವಾಹಕರು. ಅಧಿಕಾರಿಗಳು ಫ್ಲಾಟ್‌ನಲ್ಲಿ ಬೀಗ ಹಾಕಿದ ಪೆಟ್ಟಿಗೆಯನ್ನು ಕಂಡಿದ್ದರು.

ಅದನ್ನು ತೆರೆದಾಗ, ಅಪಾರ ಪ್ರಮಾಣದ ಚಿನ್ನ ಪತ್ತೆಯಾಗಿದ್ದು, ಅದನ್ನು ಕ್ಯಾಮೆರಾ ಕಣ್ಗಾವಲಿನಲ್ಲಿ ಸೀಲ್ ಮಾಡಲಾಗಿದೆ. ಪ್ರಸ್ತುತ, ಷೇರು ಮಾರುಕಟ್ಟೆ ದಲ್ಲಾಳಿಯನ್ನು ಪ್ರಶ್ನಿಸಲಾಗುತ್ತಿದೆ ಮತ್ತು ಇಷ್ಟೊಂದು ದೊಡ್ಡ ಪ್ರಮಾಣದ ಚಿನ್ನ ಎಲ್ಲಿಂದ ಬಂತು ಎಂಬುದನ್ನು ಕಂಡುಹಿಡಿಯಲು ಪ್ರಯತ್ನಗಳು ನಡೆಯುತ್ತಿವೆ ದಾಳಿಯ ಸಮಯದಲ್ಲಿ, ನೋಟುಗಳನ್ನು ಎಣಿಸುವ ಎರಡು ಯಂತ್ರಗಳು, ಚಿನ್ನವನ್ನು ತೂಕ ಮಾಡುವ ವಿದ್ಯುತ್ ಮಾಪಕಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ. ತನಿಖೆಯಲ್ಲಿ ಚಿನ್ನದ ಬಿಸ್ಕತ್ತುಗಳು ಪತ್ತೆಯಾಗಿದ್ದು, ಅವುಗಳ ಒಟ್ಟು ತೂಕ 90-100 ಕೆಜಿ ಎಂದು ಹೇಳಲಾಗಿದೆ. ಇದಲ್ಲದೆ, ಕೆಲವು ಆಭರಣಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ.

### ಒತ್ತೆಯಾಳುಗಳನ್ನು ಹಮಾಸ್ ತಕ್ಷಣವೇ ಬಿಡುಗಡೆ ಮಾಡಬೇಕು

# ಮತ್ತೆ ಗಾಜಾ ಮೇಲೆ ವೈಮಾನಿಕ ದಾಳಿ ಆರಂಭಿಸಿದ ಇಸ್ರೇಲ್

**ಡೀರ್ ಅಲ್-ಬಲಾಹ್:** ಮುಂಜಾನೆ ಗಾಜಾ ಪಟ್ಟಿಯಾದ್ಯಂತ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ. ಕದನ ವಿರಾಮ ನಂತರ ನಡೆದಿರುವ ಈ ಹಠಾತ್ ದಾಳಿಯಲ್ಲಿ ಹಮಾಸ್ ಉಗ್ರರನ್ನು ಹೊಡೆದುರುಳಸಲಾಗಿದೆ ಎಂದು ಹೇಳಿಕೊಂಡಿದೆ ಇದನ್ನು ಪ್ಯಾಲೇಸ್ಟಿನಿಯನ್ ಅಧಿಕಾರಿಗಳು ದೃಢಪಡಿಸಿದ್ದು ಸುಮಾರು 200 ಜನರು ಸಾವನ್ನಪ್ಪಿದ್ದಾರೆ ಎಂದು ವರದಿ ಮಾಡಿದ್ದಾರೆ. ಇಸೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಕದನ ವಿರಾಮವನ್ನು ವಿಸ್ತರಿಸುವ ಮಾತುಕತೆಯಲ್ಲಿ ಪ್ರಗತಿಯ ಕೊರತೆಯಾಗಿದೆ ಎಂದಿದ್ದಾರೆ ಕಾರ್ಯಾಚರಣೆಯು ಮುಕ್ತವಾಗಿದೆ ಮತ್ತು ವಿಸ್ತರಿಸುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ. ಇಸ್ರೇಲ್, ಇಂದಿನಿಂದ, ಹೆಚ್ಚುತ್ತಿರುವ ಮಿಲಿಟರಿ ಬಲದೊಂದಿಗೆ ಹಮಾಸ್ ವಿರುದ್ಧ ಕಾರ್ಯನಿರ್ವಹಿಸುತ್ತದೆ ಎಂದು ನೆತನ್ಯಾಹು ಅವರ ಕಚೇರಿ ಹೇಳಿದೆ. ಹಠಾತ್ ದಾಳಿಯು ಮುಸ್ಲಿಂರ ರಂಜಾನ್ ಶಾಂತತೆಯ ಅವಧಿಯನ್ನು ಛಿದ್ರಗೊಳಿಸಿತು. ವಿನಾಶ ಉಂಟುಮಾಡಿದ 17 ತಿಂಗಳ ಯುದ್ಧ ಮರಳುವ ನಿರೀಕ್ಷೆಯನ್ನು ಹೆಚ್ಚಿಸಿದೆ ಎಂದು ಮಾತುಗಳು ಕೇಳಿಬಂದಿದೆ. ಇನ್ನು ಇಸ್ರೇಲಿ ಒತ್ತೆಯಾಳುಗಳ ಭವಿಷ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಈಜಿಪ್ಟ್ ಕತಾರ್ ಜೊತೆಗೆ ಮಧ್ಯಸ್ಥಿಕೆ ಪ್ರಯತ್ನಗಳನ್ನು ಮುನ್ನಡೆಸುತ್ತಿರುವ ಅಮೆರಿಕ ರಾಯಭಾರಿ ಸ್ಟೀವ್ ವಿಟ್ಕಾಫ್, ಒತ್ತೆಯಾಳುಗಳನ್ನು ಹಮಾಸ್ ತಕ್ಷಣವೇ ಬಿಡುಗಡೆ ಮಾಡಬೇಕು ಅಥವಾ ತೀವ್ರ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಕಾರ್ಯಾಚರಣೆ ಬಗ್ಗೆ ಅನಾಮಧೇಯತೆಯ ಸ್ಥಿತಿಯಲ್ಲಿ ಮಾತನಾಡುವ ಇಸ್ರೇಲಿ ಅಧಿಕಾರಿಯೊಬ್ಬರು, ಹಮಾಸ್‌ನ ಮಿಲಿಟರಿ, ನಾಯಕರು ಮತ್ತು ಮೂಲ ಸೌಕರ್ಯವನ್ನು ಹೊಡೆದುರುಳಿಸಲು ವಾಯು ದಾಳಿಯನ್ನು ಮೀರಿ ಕಾರ್ಯಾಚರಣೆಯನ್ನು ವಿಸ್ತರಿಸಲು ಇಸ್ರೇಲ್ ಯೋಜಿಸುತ್ತಿದೆ ಎಂದು ಹೇಳಿದರು. ಹಮಾಸ್ ಪುನರ್‌ನಿರ್ಮಾಣ ಮಾಡಲು, ಹೊಸ ದಾಳಿಗಳನ್ನು ಯೋಜಿಸಲು ಪ್ರಯತ್ನಿಸುತ್ತಿದೆ ಎಂದು ಅಧಿಕಾರಿ ಆರೋಪಿಸಿದರು.



**ಕದನ ವಿರಾಮ ಸ್ಥಗಿತ**

ಕದನ ವಿರಾಮ ಜಾರಿಯಾದ ನಂತರ ಇತ್ತೀಚಿನ ವಾರಗಳಲ್ಲಿ ಹಮಾಸ್ ಉಗ್ರಗಾಮಿಗಳು ಮತ್ತು ಭದ್ರತಾ ಪಡೆಗಳು ತ್ವರಿತವಾಗಿ ಬೀದಿಗೆ ಮರಳಿದವು. ಒತ್ತೆಯಾಳುಗಳನ್ನು ಬಿಡುಗಡೆ ಮಾಡದಿದ್ದರೆ ಗಾಜಾದಲ್ಲಿ ನರಕದ ಬಾಗಿಲು ತೆರೆಯುತ್ತದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ ಹೇಳಿದ್ದಾರೆ. ನಮ್ಮ ಎಲ್ಲಾ ಒತ್ತೆಯಾಳುಗಳು ಮನೆಗೆ ಬರುವವರೆಗೂ ನಾವು ಹೋರಾಟವನ್ನು ನಿಲ್ಲಿಸುವುದಿಲ್ಲ ಮತ್ತು ನಾವು ಎಲ್ಲಾ ಯುದ್ಧದ ಗುರಿಗಳನ್ನು ಸಾಧಿಸುತ್ತೇವೆ ಎಂದು ಅವರು ಹೇಳಿದರು. ಗಾಜಾದಾದ್ಯಂತ ಸ್ಫೋಟಗಳು ಕೇಳಿಬರುತ್ತಿವೆ. ವಿವಿಧ ಪ್ರದೇಶಗಳನ್ನು ಏಕಕಾಲದಲ್ಲಿ ಗುರಿಯಾಗಿಸಲಾಗುತ್ತಿರುವುದರಿಂದ ಅದರ ಪ್ರತಿದಾಳಿ, ರಕ್ಷಣಾ ಪ್ರಯತ್ನಗಳನ್ನು ಕೈಗೊಳ್ಳಲು ಕಷ್ಟಕರ ಸಮಯವನ್ನು ಎದುರಿಸುತ್ತಿದ್ದಾರೆ ಎಂದು ಪ್ಯಾಲೆಸ್ತೇನ್ ಪ್ರದೇಶದ ನಾಗರಿಕ ರಕ್ಷಣಾ ಸಂಸ್ಥೆ ಹೇಳಿದೆ.

#### ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ

**ಮೊದಲ ಹಂತದಲ್ಲಿ ಸುಮಾರು 2,000 ಪ್ಯಾಲೇ ಸ್ಟಿನಿಯನ್ ಕೈದಿಗಳಿಗೆ ಬದಲಾಗಿ ಹಮಾಸ್ 40 ಕ್ಕೂ ಹೆಚ್ಚು ಇಸ್ರೇಲಿ ಇತ್ತೆಯಾಳುಗಳನ್ನು ಬಿಡುಗಡೆ ಮಾಡಿತು. ಆದರೆ ಆ ಕದನ ವಿರಾಮವು ಎರಡು ವಾರ ಗಳ ಹಿಂದೆ ಕೊನೆಗೊಂಡಾಗಿನಿಂದ, ಸುಮಾರು 60 ಉಳಿದ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಮತ್ತು ಯುದ್ಧವನ್ನು ಸಂಪೂರ್ಣವಾಗಿ ಕೊನೆಗೊಳಿಸುವ ಗುರಿಯನ್ನು ಹೊಂದಿರುವ ಎರಡನೇ ಹಂತದೊಂದಿಗೆ ಮುಂದುವರಿಯುವ ಮಾರ್ಗವನ್ನು ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ.**

ನೆತನ್ಯಾಹು ಪದೇ ಪದೇ ಯುದ್ಧವನ್ನು ಪುನರಾರಂಭಿಸುವುದಾಗಿ ಬೆದರಿಕೆ ಹಾಕಿದ್ದಾರೆ, ಈ ತಿಂಗಳ ಆರಂಭದಲ್ಲಿ ಹಮಾಸ್ ಮೇಲೆ ಒತ್ತಡ ಹೇರಲು ಮುತ್ತಿಗೆ ಹಾಕಿದ ಪ್ರದೇಶಕ್ಕೆ ಎಲ್ಲಾ ಆಹಾರ ಮತ್ತು ಸಹಾಯ ವಿತರಣೆಗಳ ಪ್ರವೇಶವನ್ನು ಕಡಿತಗೊಳಿಸಿದರು.

ನಮ್ಮ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಹಮಾಸ್ ಪದೇ ಪದೇ ನಿರಾಕರಿಸಿದ ನಂತರ ಮತ್ತು ಯುಎಸ್ ಅಧ್ಯಕ್ಷೀಯ ರಾಯಭಾರಿ ಸ್ಟೀವ್ ವಿಟ್ಕಾಫ್, ಮಧ್ಯವರ್ತಿಗಳಿಂದ ಪಡೆದ ಎಲ್ಲಾ ಕೊಡುಗೆಗಳನ್ನು ತಿರಸ್ಕರಿಸಿದ ನಂತರ ಇದು ಸಂಭವಿಸುತ್ತದೆ ಎಂದು ನೆತನ್ಯಾಹು ಅವರ ಕಚೇರಿ ಮುಂಜಾನೆ ತಿಳಿಸಿದೆ.

ಹಮಾಸ್ ಅಧಿಕಾರಿ ತಾಹರ್ ನುನು ಇಸ್ರೇಲ್ ದಾಳಿಯನ್ನು ಟೀಕಿಸಿದ್ದಾರೆ.

## ಶಾಂತಿ ಕಾಪಾಡಿಕೊಳ್ಳುವಂತೆ ನಾಗರಿಕರಿಗೆ ಮನವಿ

**ನಾಗುರ:** ಔರಂಗಜೇಬ್ ಅವರ ಸಮಾಧಿ ವಿಚಾರದಿಂದಾಗಿ ಮಹಾರಾಷ್ಟ್ರದ ನಾಗುರ ಉದ್ವಿಗ್ನಗೊಂಡಿದೆ. ಸ್ಥಳದಲ್ಲಿ ಕರ್ಫ್ಯೂ ವಿಧಿಸಲಾಗಿದ್ದು, ಮುಖ್ಯಮಂತ್ರಿ ಫಡ್ನವಿಸ್ ಅವರು ಶಾಂತಿ ಕಾಪಾಡಿಕೊಳ್ಳುವಂತೆ ಮನವಿ ಮಾಡಿಕೊಂಡಿದ್ದಾರೆ.

ಹಿಂಸಾಚಾರದ ಸಮಯದಲ್ಲಿ ಪೊಲೀಸರ ಮೇಲೆ ಕಲ್ಲುಗಳನ್ನು ಎಸೆಯಲಾಗಿದೆ, ಹಲವಾರು ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ. ಮೊಘಲ್ ಚಕ್ರವರ್ತಿ ಔರಂಗಜೇಬ್ ಅವರ ಸಮಾಧಿಯನ್ನು ಮಹಾರಾಷ್ಟ್ರದಿಂದ ಸ್ಥಳಾಂತರಿಸುವ ವಿಚಾರದ ನಂತರ ಹಿಂಸಾಚಾರ ಭುಗಿಲೆದ್ದ ನಂತರ ನಾಗುರದ ಹಲವಾರು ಪ್ರದೇಶಗಳಲ್ಲಿ ಕರ್ಫ್ಯೂ ವಿಧಿಸಲಾಗಿದೆ. 17 ನೇ ಶತಮಾನದ ಚಕ್ರವರ್ತಿಯ ಸಮಾಧಿ ಈಗ ಛತ್ರಪತಿ ಸಂಭಾಜಿನಗರ ಜಿಲ್ಲೆ ಎಂದು ಕರೆಯಲ್ಪಡುವ ಔರಂಗಾಬಾದ್ ನಲ್ಲಿದೆ.ನಾಗುರ ಪೊಲೀಸ್ ಆಯುಕ್ತ ರವೀಂದರ್ ಕುಮಾರ್ ಸಿಂಘಾಲ್ ಅವರು ಭಾರತೀಯ ನಾಗರಿಕ್ ಸುರಕ್ಷಾ ಸಂಹಿತೆಯ ಸೆಕ್ಷನ್ 163 ರ ಅಡಿಯಲ್ಲಿ ನೋಟಿಸ್ ನೀಡಿದ್ದಾರೆ. ಕೊಟ್ವಾಲಿ, ಗಣೇಶಪೇಠ್, ತಹಸೀಲ್, ಲಕಾಡಗಂಜ್, ಪಚೌಲಿ, ಶಾಂತಿನಗರ, ಸಕ್ತರ್ದಾರಾ, ನಂದನವನ್, ಇಮಾಮ್ವಾಡಾ, ಯಶೋಧರನಗರ ಮತ್ತು ಕಪಿಲ ನಗರ ಪೊಲೀಸ್ ಠಾಣೆ ಪ್ರದೇಶಗಳಿಗೆ ಕರ್ಫ್ಯೂ ಅನ್ವಯಿಸುತ್ತದೆ ಎಂದು ಅದು ಹೇಳಿದೆ.

ಮುಂದಿನ ಸೂಚನೆ ಬರುವವರೆಗೆ ನಿರ್ಬಂಧಗಳು ಜಾರಿಯಲ್ಲಿರುತ್ತವೆ. ಪೊಲೀಸ್ ಆಯುಕ್ತರ ಸೂಚನೆಯ ಪ್ರಕಾರ, ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಬೆಂಬಲಿಗರು ನಾಗುರದ ಮಹಲ್ ಪ್ರದೇಶದ ಶಿವಾಜಿ ಮಹಾರಾಜ್ ಪ್ರತಿಮೆಯ ಬಳಿ ಜಮಾಯಿಸಿ ಔರಂಗಜೇಬ್ ಸಮಾಧಿಯನ್ನು ಮಹಾರಾಷ್ಟ್ರದಿಂದ ತೆಗೆದುಹಾಕುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಅವರು ಘೋಷಣೆಗಳನ್ನು ಕೂಗಿದರು ಮತ್ತು ಫೋಟೋವನ್ನು ಸುಟ್ಟುಹಾಕಿದರು. ಈ ಸಂದರ್ಭದಲ್ಲಿ ಹಸಿರು ಬಟ್ಟೆಯನ್ನು ಸುಡುವುದು ವದಂತಿಗಳನ್ನು ಹುಟ್ಟುಹಾಕಿತು, ಏಕೆಂದರೆ ಅದರ ಮೇಲೆ ಪವಿತ್ರ ಶ್ಲೋಕಗಳನ್ನು ಬರೆಯಲಾಗಿದೆ ಎಂದು ಹಲವರು ಹೇಳುತ್ತಾರೆ. ಇದು ಈ ಪ್ರದೇಶದಲ್ಲಿ ಉದ್ವಿಗ್ನತೆಗೆ ಕಾರಣವಾಯಿತು.



**ಒಂದು ನಿರ್ದಿಷ್ಟ ಸಮುದಾಯದ ಸುಮಾರು 80 ರಿಂದ 100 ಜನರು ಹಿಂಸಾತ್ಮಕವಾಗಿ ಮಾರ್ಪಟ್ಟರು ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ. ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಲಾಗಿದ್ದು, ಹಲವಾರು ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ. ಪೊಲೀಸರು ಲಾಠಿಚಾರ್ಜ್ ಮತ್ತು ಅಶ್ರುವಾಯು ರೂಪದಲ್ಲಿ ಸೌಮ್ಯ ಬಲವನ್ನು ಬಳಸಿದರು.**

ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಘಟನೆಯಲ್ಲಿ ನಾಲ್ವರು ಗಾಯಗೊಂಡಿದ್ದಾರೆ ಎಂದು ಪಿಟಿಐ ವರದಿ ಮಾಡಿದೆ. ಒಂದು ಡಜನ್ ಗೂ ಹೆಚ್ಚು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ. ಕೇಂದ್ರ ಸಚಿವ ಮತ್ತು ಮೂರು ಬಾರಿ ನಾಗುರ ಸಂಸದ ನಿತಿನ್ ಗಡ್ಕರಿ ಅವರು ಶಾಂತಿಗಾಗಿ ಮನವಿ ಮಾಡಿದ್ದಾರೆ ಮತ್ತು ವದಂತಿಗಳನ್ನು ನಂಬದಂತೆ ಜನರನ್ನು ಕೋರಿದ್ದಾರೆ.

ತಪ್ಪುಗಳನ್ನು ಮಾಡಿದ ಅಥವಾ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ.

## ಮಿನಿ ನ್ಯೂಸ್

### ಸುದೀಕ್ಷಾ ಮೃತಪಟ್ಟಿದ್ದಾಳೆಂದು ಘೋಷಿಸುವಂತೆ ಪೋಷಕರ ಮನವಿ

**ನ್ಯೂಯಾರ್ಕ್:** ನಾಪತ್ತೆಯಾಗಿರುವ 20 ವರ್ಷದ ಭಾರತೀಯ ವಿದ್ಯಾರ್ಥಿನಿ ಸುದೀಕ್ಷಾ ಕೋನಂಕಿ ಮೃತಪಟ್ಟಿದ್ದಾಳೆ ಎಂದು ಘೋಷಿಸುವಂತೆ ಆಕೆಯ ಕುಟುಂಬಸ್ಥರು ಡೊಮಿನಿಕನ್ ರಿಪಬ್ಲಿಕ್ ಪೊಲೀಸರಿಗೆ ಮನವಿ ಮಾಡಿದ್ದಾರೆ. ಭಾರತದ ಪ್ರಜೆ ಮತ್ತು ಯುನೈಟೆಡ್ ಸ್ಟೇಟ್ಸ್‌ನ ಖಾಯಂ ನಿವಾಸಿಯಾಗಿರುವ ಕೊನಾಂಕಿ ಕೊನೆಯ ಬಾರಿಗೆ ಮಾರ್ಚ್ 6 ರಂದು ಪುಂಟಾ ಕಾನಾ ಪಟ್ಟಣದ ರಿಯು ರಿಪಬ್ಲಿಕ್ ರೆಸಾರ್ಟ್‌ನಿಂದ ನಾಪತ್ತೆಯಾಗಿದ್ದರು. ಯುಎಸ್ ಫೆಡರಲ್ ಕಾನೂನು ಜಾರಿ ಸಂಸ್ಥೆಗಳು ಕೆರಿಬಿಯನ್ ದೇಶದ ಅಧಿಕಾರಿಗಳೊಂದಿಗೆ ಅವರ ಕಣ್ಮರೆ ತನಿಖೆಯಲ್ಲಿ ಕೆಲಸ ಮಾಡುತ್ತಿವೆ. ವ್ಯಾಪಕ ಹುಡುಕಾಟದ ಹೊರತಾಗಿಯೂ, ಆಕೆಯ ಶವ ಪತ್ತೆಯಾಗಿಲ್ಲ. ಡೊಮಿನಿಕನ್ ರಿಪಬ್ಲಿಕ್ ರಾಷ್ಟ್ರೀಯ ಪೊಲೀಸ್ ವಕ್ತಾರ ಡಿಯಾಗೋ ಪೆರಾ ಮಾತನಾಡಿ, ಕೊನಾಂಕಿ ಅವರ ಕುಟುಂಬವು ಸಾವಿನ ಘೋಷಣೆಯನ್ನು ಕೋರಿ ಏಜೆನ್ಸಿಗೆ ಪತ್ರವನ್ನು ಕಳುಹಿಸಿದೆ ಎಂದು ತಿಳಿಸಿದ್ದಾರೆ.

### ಮಣಿಪುರದಲ್ಲಿ 3 ಕೋಟಿ ಮೌಲ್ಯದ ಬ್ರೌನ್‌ಶುಗರ್ ವಶ

**ಇಂಫಾಲ್:** ಮಣಿಪುರದ ಚಂದೇಲ್ ಜಿಲ್ಲೆಯಲ್ಲಿ 3.29 ಕೋಟಿ ಮೌಲ್ಯದ ಬ್ರೌನ್ ಶುಗರ್ ವಶಪಡಿಸಿಕೊಳ್ಳಲಾಗಿದ್ದು, 23 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ. ಕಳೆದ ಮೂರು ದಿನಗಳಿಂದ 137 ಬ್ರೌನ್ ಶುಗರ್ ಸಾಬೂನು ಪ್ರಕರಣಗಳನ್ನು ವಶಪಡಿಸಿಕೊಂಡ ನಂತರ ಅಸ್ಸಾಂ ರೈಫಲ್ಸ್ ತಂಡವು ಜಿಲ್ಲೆಯ ಕುಲ್ಬಾಂಗ್ ಗ್ರಾಮದಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಿತು, ವ್ಯಕ್ತಿಯನ್ನು ಬಂಧಿಸಿದೆ ಎಂದು ಅದು ಹೇಳಿದೆ. ಆತನಿಂದ ಎರಡು ಮೊಬೈಲ್ ಫೋನ್ ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಸ್ಸಾಂ ರೈಫಲ್ಸ್ ಹೇಳಿಕೆ ತಿಳಿಸಿದೆ. ತೆಂಗೌಪಾಲ್ ಜಿಲ್ಲೆಯವನಾದ ವ್ಯಕ್ತಿಯನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### ಜನಿಸಿದ ಹೆಣ್ಣು ಮಗುವನ್ನು ನೀರಿಗೆಸೆದ ಕರುಣೆಯಿಲ್ಲದ ತಾಯಿ

**ಜೈಪುರ:** ರಾಜಸ್ಥಾನದ ಜುಂಜುನುನಲ್ಲಿ ಗಂಡು ಮಗುವಿಗೆ ಜನ್ಮ ನೀಡಲು ಸಾಧ್ಯವಾಗದ ಕಾರಣ ಮಹಿಳೆಯೊಬ್ಬಳು ತನ್ನ 17 ದಿನದ ಹೆಣ್ಣು ಮಗುವನ್ನು ನೀರಿನ ಟ್ಯಾಂಕ್‌ಗೆ ಎಸೆದು ಕೊಂದಿದ್ದಾಳೆ.

ಪೊಲೀಸರ ಪ್ರಕಾರ, ಮಹಿಳೆ ತನಗೆ ಗಂಡು ಮಗು ಬೇಕು ಎಂದು ಹೇಳಿದಳು. ಆದರೆ ಅಂತಿಮವಾಗಿ ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಇದರಿಂದಾಗಿ ಅವಳು ಮಗುವನ್ನು ನೀರಿನ ಟ್ಯಾಂಕ್‌ಗೆ ಎಸೆದು ಮುಚ್ಚಳವನ್ನು ಮುಚ್ಚಿದ್ದಾರೆ. ಹೆಣ್ಣು ಮಗುವನ್ನು ನೀರಿನ ಟ್ಯಾಂಕ್ ಗೆ ಎಸೆದ ಮಹಿಳೆಯನ್ನು ಇಲ್ಲಿನ ಶ್ರೀ ರಾಮ್ ಕಾಲೋನಿಯ ಆಚ್ಚಿ ದೇವಿ (22) ಎಂದು ಗುರುತಿಸಲಾಗಿದೆ. ಈಕೆ ತನ್ನ 17 ದಿನದ ಹೆಣ್ಣು ಮಗುವನ್ನು ನೀರಿನ ಟ್ಯಾಂಕ್‌ಗೆ ಎಸೆದಿದ್ದಾಳೆ ಎಂದು ಕೊಟ್ವಾಲಿ ಸ್ಟೇಷನ್ ಹೌಸ್ ಆಫೀಸರ್ (ಎಸ್ ಎಚ್‌ಒ) ನಾರಾಯಣ್ ಸಿಂಗ್ ತಿಳಿಸಿದ್ದಾರೆ. ಮಗುವನ್ನು ನೀರಿಗೆ ಎಸೆದು ಟ್ಯಾಂಕ್‌ನ ಮುಚ್ಚಳ ಮುಚ್ಚಿದ ಪರಿಣಾಮವಾಗಿ ಮಗು ಸಾವನ್ನಪ್ಪಿದೆ ಎಂದು ಅವರು ಹೇಳಿದರು. ಘಟನೆಯ ಬಗ್ಗೆ ಮಹಿಳೆ ತನ್ನ ಪರಿಚಯಸ್ಥರೊಬ್ಬರಿಗೆ ಮಾಹಿತಿ ನೀಡಿದ್ದು, ನಂತರ ಮಹಿಳೆಯ ಪತಿ ದೂರು ದಾಖಲಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ. ದೂರಿನ ಆಧಾರದ ಮೇಲೆ ಆಕೆಯ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದ್ದು, ಆಕೆಯನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು. ಮಹಿಳೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.

### ಔರಂಗಜೇಬನನ್ನು ಹೊಗಳುವವರು ದೇಶದ್ರೋಹಿಗಳು ; ಏಕನಾಥ್ ಶಿಂಧೆ

**ಥಾಣೆ:** ಔರಂಗಜೇಬನನ್ನು ಈಗಲೂ ಹೊಗಳುತ್ತಿರುವವರು ದೇಶದ್ರೋಹಿ ಗಳು ಎಂದು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಹೇಳಿದ್ದಾರೆ. ಮತ್ತೊಂದೆಡೆ, ಮರಾಠಾ ರಾಜ ಛತ್ರಪತಿ ಶಿವಾಜಿ ಮಹಾರಾಜ್ ಶೌರ್ಯ, ತ್ಯಾಗ ಮತ್ತು ಹಿಂದುತ್ವದ ಸ್ಫೂರ್ತಿಗಾಗಿ ನಿಂತ ದೈವಿಕ ಶಕ್ತಿ ಎಂದು ಶಿಂಧೆ ಶಿವ ಜಯಂತಿ ಸಂದರ್ಭದಲ್ಲಿ ಹೇಳಿದರು. ಮರಾಠಾ ರಾಜನ ಪರಂಪರೆ, ಅವರ ಧೈರ್ಯ, ನಾಯಕತ್ವವನ್ನು ಗೌರವಿಸಲು ಸ್ಥಾಪಿಸಲಾದ ಥಾಣೆ ಜಿಲ್ಲೆಯ ಡೊಂಬಿವಿಲಿ ಪ್ರದೇಶದ ಘರ್ಡಾ ಚೌಕ್‌ನಲ್ಲಿ ಶಿವಾಜಿ ಮಹಾರಾಜ್ ಅವರ ಅಶ್ವಾರೋಹಿ ಪ್ರತಿಮೆಯನ್ನು ಅನಾವರಣಗೊಳಿಸಿದ ಸಂದರ್ಭದಲ್ಲಿ ಶಿವಸೇನೆ ಮುಖ್ಯಸ್ಥರು ಮಾತನಾಡುತ್ತಿದ್ದರು. ರಾಜ್ಯದ ಛತ್ರಪತಿ ಸಂಭಾಜಿನಗರ ಜಿಲ್ಲೆಯಲ್ಲಿರುವ ಔರಂಗಜೇಬ್ ಸಮಾಧಿಯನ್ನು ತೆಗೆದುಹಾಕುವಂತೆ ಕೆಲವು ಬಲಪಂಥೀಯ ಸಂಘಟನೆಗಳು ಒತ್ತಾಯಿಸುತ್ತಿರುವ ಮಧ್ಯೆ ಅವರ ಹೇಳಿಕೆ ಬಂದಿದೆ. ವಿಶೇಷವೆಂದರೆ, ಔರಂಗಜೇಬ್ ಸಮಾಧಿಯನ್ನು ತೆಗೆದುಹಾಕುವಂತೆ ಬಲಪಂಥೀಯ ಸಂಘಟನೆಯೊಂದು ನಡೆಸಿದ ಪ್ರತಿಭಟನೆಯ ಸಂದರ್ಭದಲ್ಲಿ ಒಂದು ಸಮುದಾಯದ ಪವಿತ್ರ ಪುಸ್ತಕವನ್ನು ಸುಟ್ಟುಹಾಕಲಾಗಿದೆ ಎಂಬ ವದಂತಿಗಳ ನಂತರ ನಾಗುರದಲ್ಲಿ ಹಿಂಸಾಚಾರ ಭುಗಿಲೆದ್ದಿದೆ.

### ಉಕ್ಕು, ಅಲ್ಯೂಮಿನಿಯಂ ಸುಂಕ ಇಳಿಕೆ ಇಲ್ಲ: ಡೊನಾಲ್ಡ್ ಟ್ರಂಪ್

**ವಾಷಿಂಗ್ಟನ್:** ಉಕ್ಕು ಮತ್ತು ಅಲ್ಯೂಮಿನಿಯಂ ಮೇಲಿನ ಸುಂಕದಲ್ಲಿ ವಿನಾಯಿತಿ ನೀಡುವ ಯಾವುದೇ ಯೋಚನೆಯನ್ನು ಹೊಂದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಮುಖ ಪಾಲುದಾರರಿಂದ ವ್ಯಾಪಾರ ವಹಿವಾಟಿನಲ್ಲಿ ಪ್ರತಿರೋಧ ಎದುರಾಗುವ ಸಾಧ್ಯತೆ ಇದ್ದರೂ ಉಕ್ಕು ಹಾಗೂ ಅಲ್ಯೂಮಿನಿಯಂ ಮೇಲಿನ ಆಮದು ಸುಂಕವನ್ನು ಇಳಿಸದೇ ಇರಲು ನಿರ್ಧರಿಸಲಾಗಿದೆ ಎಂದರು. ಏ.2 ನಮ್ಮ ದೇಶಕ್ಕೆ ವಿಮೋಚನಾ ದಿನವಾಗಿದೆ. ಈಗಾಗಲೇ ನಮ್ಮ ದೇಶಕ್ಕೆ ಶತಕೋಟಿಗಟ್ಟಲೆ ಡಾಲರ್‌ನಷ್ಟು ಆರ್ಥಿಕ ಸಂಪತ್ತು ಹರಿದುಬಂದಿದೆ. ಏ.2ರಿಂದ ಇನ್ನೂ ದೊಡ್ಡ ಪ್ರಮಾಣದಲ್ಲಿ ಹಣ ಹರಿದುಬರಲಿದೆ' ಎಂದು ಹೇಳಿದರು.



# ಪುಸ್ತಕ ರೂಪದಲ್ಲಿ ಪುನೀತ್ ರಾಜ್‌ಕುಮಾರ್ ಜೀವನಗಾಥೆ

**'ಅಪ್ಪು ಜೀವನ ಚರಿತ್ರೆ ಬರೆದ ಅಶ್ವಿನಿ**

ನಟ ಪುನೀತ್ ರಾಜ್‌ಕುಮಾರ್ ಅವರ ಜೀವನ ಚರಿತ್ರೆ ಪುಸ್ತಕ ರೂಪದಲ್ಲಿ ಬರಲಿದೆ. 'ಅಪ್ಪು' ಹೆಸರಿನಲ್ಲೇ ಪುಸ್ತಕ ಬಿಡುಗಡೆಯಾಗಲಿದೆ. ಪುಸ್ತಕದ ಮುಖಪುಟ ರಿಲೀಸ್ ಮಾಡಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಘೋಷಿಸಿದ್ದಾರೆ.

ಅಭಿಮಾನಿಗಳಿಗೆ ಕನೆಕ್ಟ್ ಆಗಿರೋ ಹೆಸರು ಅಪ್ಪು. ಹಾಗಾಗಿ ಪುನೀತ್ ಬಯೋಗ್ರಫಿಗೆ 'ಅಪ್ಪು' ಎಂದೇ ಹೆಸರಿಡಲಾಗಿದೆ. ಪುನೀತ್ ಪತ್ನಿ ಅಶ್ವಿನಿ ಮತ್ತು ಪ್ರಕೃತಿ ಬನವಾಸಿ ಜೊತೆಯಾಗಿ ಸೇರಿ ಈ ಪುಸ್ತಕ ಬರೆದಿದ್ದಾರೆ. ಇದಕ್ಕಾಗಿ 2 ವರ್ಷಗಳ ಕಾಲ ಶ್ರಮಿಸಿದ್ದಾರೆ. ಸದ್ಯ ಬುಕ್‌ನ ಕವರ್ ಪೇಜ್ ಹೇಗಿದೆ ಎಂಬುದನ್ನು ಪುನೀತ್ ಜನ್ಮದಿನದಂದು ಅಶ್ವಿನಿ ರಿವೀಲ್ ಮಾಡಿದ್ದಾರೆ. ಪುಸ್ತಕದ ಮುಖಪುಟ ರಿವೀಲ್ ಮಾಡುವಾಗ ಅಶ್ವಿನಿ ಜೊತೆ ಅಪ್ಪು ಪುತ್ರಿಯರು ಕೂಡ ಪೋಸ್ ನೀಡಿದ್ದಾರೆ. ಸದ್ಯ ಅಪ್ಪು ಬಯೋಗ್ರಫಿ ಬರಲಿರುವ ಸುದ್ದಿ ಕೇಳಿ ಅಭಿಮಾನಿಗಳು ಥ್ರಿಲ್ ಆಗಿದ್ದಾರೆ. ಅದರಲ್ಲೂ ಅಶ್ವಿನಿ ಅವರೇ ಬರೆದಿದ್ದಾರೆ ಎಂದು ತಿಳಿದು ಪುಸ್ತಕದ ರಿಲೀಸ್‌ಗಾಗಿ ಎದುರು ನೋಡ್ತಿದ್ದಾರೆ. ಅಂದಹಾಗೆ, ಇನ್ನಷ್ಟೇ 'ಅಪ್ಪು' ಬಯೋಗ್ರಫಿ ರಿಲೀಸ್ ದಿನಾಂಕ ತಿಳಿಯಬೇಕಿದೆ.



# ಸ್ಟಾರ್ ನಟನಿಗೆ ಪುರಿ ಜಗನ್ನಾಥ್ ಆಕ್ಷನ್ ಕಟ್



ತೆಲುಗು ನಿರ್ದೇಶಕ ಪುರಿ ಜಗನ್ನಾಥ್ ಇತ್ತೀಚೆಗೆ ನಿರ್ದೇಶಿಸಿದ ಸಿನಿಮಾಗಳು ಥಿಯೇಟರ್‌ನಲ್ಲಿ ಮಕಾಡೆ ಮಲಗಿವೆ. ಹೀಗಿದ್ದರೂ ಸ್ಟಾರ್ ನಟನಿಗೆ ನಿರ್ದೇಶನ ಮಾಡುವ ಅವಕಾಶವನ್ನು ಪುರಿ ಜಗನ್ನಾಥ್ ಗಿಟ್ಟಿಸಿಕೊಂಡಿದ್ದಾರೆ.ಒಂದು ಕಾಲದಲ್ಲಿ ಸಾಕಷ್ಟು ಹಿಟ್ ಸಿನಿಮಾಗಳನ್ನು ಕೊಟ್ಟಿರುವ ನಿರ್ದೇಶಕ. ಪುನೀತ್ ನಟನೆಯ 'ಅಪ್ಪು' ಸಿನಿಮಾಗೂ ನಿರ್ದೇಶನ ಮಾಡಿ ಸೈ ಎನಿಸಿಕೊಂಡಿದ್ದರು. ಇಷ್ಟೇಲ್ಲಾ ಟ್ಯಾಲೆಂಟೆಡ್ ನಿರ್ದೇಶಕನಾಗಿದ್ದರೂ ಅವರಿಗೆ ಅದೃಷ್ಟ ಕೈ ಕೊಟ್ಟಿದೆ. ಲೈಗರ್, ಡಬಲ್ ಇಸ್ಮಾರ್ಟ್ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಸೋತಿದೆ. ಹೀಗಿದ್ದರೂ ಅವರೊಂದಿಗೆ ಕೆಲಸ ಮಾಡಲು ಸ್ಟಾರ್ ನಟ ವಿಜಯ್ ಸೇತುಪತಿ ಮುಂದಾಗಿದ್ದಾರೆ. ಸ್ಟಾರ್ ನಟರು ಪುರಿ ಜಗನ್ನಾಥ್ ಜೊತೆ ಕೆಲಸ ಮಾಡಲು ಹಿಂದೇಟು ಹಾಕ್ತಿದ್ದಾರೆ. ಹೀಗಿರುವಾಗ ವಿಜಯ್ ಸೇತುಪತಿ ಅವರು ಪುರಿ ಜಗನ್ನಾಥ್ ಬರೆದ ಕಥೆಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ವಿಜಯ್ ಮ್ಯಾನರಿಸಂ, ಆಟಿಟ್ಯೂಡ್‌ಗೆ ತಕ್ಕಂತೆ ಸಿನಿಮಾ ಕಥೆ ಸಿದ್ಧವಾಗಿದ್ದು, ಈ ಬಾರಿ ಗೆಲ್ಲುವ ಭರವಸೆಯಲ್ಲಿದ್ದಾರೆ ನಿರ್ದೇಶಕ. ಸಾಲು ಸಾಲು ಸಿನಿಮಾ ಸೋಲಿನಿಂದ ಬಳಲಿರುವ ಪುರಿ ಜಗನ್ನಾಥ್ ಕೆರಿಯರ್‌ಗೆ ವಿಜಯ್ ಸಿನಿಮಾ ಸಕ್ಸಸ್ ಕೊಡುತ್ತಾ ಎಂದು ಕಾಯಬೇಕಿದೆ.

## ಬ್ರೇಕಪ್ ಬೆನ್ನಲ್ಲೇ ತಮನ್ನಾ ಆಕ್ಟೀವ್

**ಬಾಲಿವುಡ್‌ನಲ್ಲಿ ಬಿಗ್ ಚಾನ್ಸ್**



ನಟಿ ತಮನ್ನಾ ಭಾಟಿಯಾ ಇತ್ತೀಚೆಗೆ ವಿಜಯ್ ವರ್ಮಾ ಜೊತೆ ಬ್ರೇಕಪ್ ಆದ ಬೆನ್ನಲ್ಲೇ ಸಿನಿಮಾದಲ್ಲಿ ಮತ್ತೆ ಆಕ್ಟೀವ್ ಆಗಿದ್ದಾರೆ. ಸಿನಿಮಾದತ್ತ ನಟಿ ಫೋಕಸ್ ಮಾಡ್ತಿದ್ದಾರೆ. ಬಾಲಿವುಡ್‌ನಲ್ಲಿ ಬಿಗ್ ಪ್ರಾಜೆಕ್ಟ್‌ವೊಂದನ್ನು ತಮ್ಮದಾಗಿಸಿಕೊಂಡಿದ್ದಾರೆ. ಸದಾ ಹೊಸ ಬಗೆಯ ಪಾತ್ರದಲ್ಲಿ ಮಿಂಚೋ ತಮನ್ನಾಗೆ ಈಗ ಬಂಪರ್ ಆಫರ್‌ವೊಂದು ಸಿಕ್ಕಿದೆ. ಬಾಲಿವುಡ್ ನಟರಾದ ಅಜಯ್ ದೇವಗನ್ ಹಾಗೂ ಸಂಜಯ್ ದತ್ ಜೊತೆ ನಟಿಸುವ ಅವಕಾಶ ತಮನ್ನಾಗೆ ಅರಸಿ ಬಂದಿದೆ. 'ಮಿಷನ್ ಮಂಗಲ್' ಡೈರೆಕ್ಟರ್ ಜಗನ್ ಶಕ್ತಿ ನಿರ್ದೇಶನದ 'ರೇಂಜರ್' ಚಿತ್ರಕ್ಕೆ ಅವರು ಆಯ್ಕೆಯಾಗಿದ್ದಾರೆ. ಇನ್ನೂ ಅಜಯ್ ದೇವಗನ್‌ಗೆ ವಿಲನ್ ಆಗಿ 'ಕೆಜಿಎಫ್ 2' ಖ್ಯಾತಿಯ ಸಂಜಯ್ ದತ್ ಅಬ್ಬರಿಸಲಿದ್ದಾರೆ. ತಮನ್ನಾ ನಾಯಕಿಯಾಗಿ ಲೀಡ್ ರೋಲ್‌ನಲ್ಲಿ ಕಾಣಿಸಿಕೊಳ್ತಿದ್ದಾರೆ. ಏಪ್ರಿಲ್ ಮೊದಲ ವಾರದಲ್ಲಿ ಶೂಟಿಂಗ್ ಶುರುವಾಗಲಿದೆ. ಚಿತ್ರೀಕರಣಕ್ಕೆ ಸ್ಟಾರ್ ನಟರೊಂದಿಗೆ ತಮನ್ನಾ ಕೂಡ ಭಾಗಿಯಾಗ್ತಿದ್ದಾರೆ. ಇನ್ನೂ 2026ರಲ್ಲಿ ಸಿನಿಮಾ ರಿಲೀಸ್ ಮಾಡುವ ಪ್ಲ್ಯಾನ್ ಚಿತ್ರತಂಡಕ್ಕಿದೆ. ಇನ್ನೂ ಒಡೆಲಾ 2, ವೇದ ಸೇರಿದಂತೆ ಹಲವು ಸಿನಿಮಾಗಳು ನಟಿಯ ಕೈಯಲ್ಲಿವೆ. ತೆಲುಗು ಹಾಗೂ ಬಾಲಿವುಡ್ ನಟಿ ಸಕ್ರಿಯರಾಗಿದ್ದಾರೆ.

## 'ಪುಷ್ಪ 2' ನಿರ್ದೇಶಕನ ಜೊತೆ ಶಾರುಖ್ ಸಿನಿಮಾ



ಪುಷ್ಪ, ಪುಷ್ಪ 2 ಸಿನಿಮಾಗಳ ಸಕ್ಸಸ್ ಬಳಿಕ ಬಾಲಿವುಡ್‌ನ ಸ್ಟಾರ್ ನಟನಿಗೆ ನಿರ್ದೇಶನ ಮಾಡಲು ಸುಕುಮಾರ್ ಸಜ್ಜಾಗಿದ್ದಾರೆ. ಬಾಲಿವುಡ್‌ನ ಟಾಪ್ ನಟರಲ್ಲಿ ಒಬ್ಬರಾಗಿರುವ ಶಾರುಖ್ ಖಾನ್‌ಗೆ ಸುಕುಮಾರ್ ಡೈರೆಕ್ಷನ್ ಮಾಡಲಿದ್ದಾರೆ ಎನ್ನಲಾದ ಸುದ್ದಿಯೊಂದು ಚರ್ಚೆಗೆ ಗ್ರಾಸವಾಗಿದೆ. ಗ್ರಾಮೀಣ ಭಾಗದ ರಾಜಕೀಯ ಕುರಿತಾದ ಕಥೆಯನ್ನು ಶಾರುಖ್ ಮೂಲಕ ತೋರಿಸಲು ಸುಕುಮಾರ್ ತಯಾರಿ ಮಾಡಿಕೊಳ್ತಿದ್ದಾರೆ ಎನ್ನಲಾಗಿದೆ. ಕಿಂಗ್ ಖಾನ್ ಶಾರುಖ್ ಕೂಡ ಕಥೆ ಇಷ್ಟವಾಗಿ ನಿರ್ದೇಶಕನಿಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಇಬ್ಬರ ಕಡೆಯಿಂದ ಅಧಿಕೃತ ಅಪ್‌ಡೇಟ್ ಸಿಗುವವರೆಗೂ ಕಾದುನೋಡಬೇಕಿದೆ.ಇನ್ನೂ ಮಗಳು ಸುಹಾನಾರನ್ನು ಅದ್ಧೂರಿಯಾಗಿ ಲಾಂಚ್ ಮಾಡಬೇಕೆಂದಿದ್ದಾರೆ. ಅದಕ್ಕಾಗಿ 'ಕಿಂಗ್' ಸಿನಿಮಾದಲ್ಲಿ ಮಗಳೊಂದಿಗೆ ಶಾರುಖ್ ಕೂಡ ಜೊತೆಯಾಗಿ ಕಾಣಿಸಿಕೊಳ್ತಿದ್ದಾರೆ. ಆ ನಂತರ 'ಪಠಾಣ್ 2' ಮತ್ತು ಸುಕುಮಾರ್ ಜೊತೆಗಿನ ಸಿನಿಮಾದತ್ತ ಗಮನ ಕೊಡಲಿದ್ದಾರೆ. ಸುಕುಮಾರ್ ಅವರು ರಾಮ್ ಚರಣ್ ಜೊತೆಗಿನ ಸಿನಿಮಾ ಹಾಗೂ 'ಪುಷ್ಪ ಪಾರ್ಟ್ 3' ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಆ ನಂತರ ಶಾರುಖ್ ಜೊತೆ ಕೈಜೋಡಿಸಲಿದ್ದಾರೆ ಎನ್ನಲಾಗಿದೆ. ತೆಲುಗಿನಲ್ಲಿ ಗೆದ್ದು ಬೀಗಿದ ಹಾಗೇ ಬಾಲಿವುಡ್‌ನಲ್ಲೂ ಸದ್ದು ಮಾಡ್ತಾರಾ ಸುಕುಮಾರ್ ಎಂದು ಕಾದುನೋಡಬೇಕಿದೆ.

## ಚಂದನ್ ಸ್ಪಷ್ಟನೆ

**ಮತ್ತೆ ನಿವೇದಿತಾ ಜೊತೆ ಒಂದಾಗಲ್ಲ**





ಬಿಗ್ ಬಾಸ್ ಬೆಡಗಿ ನಿವೇದಿತಾ ಗೌಡಗೆ ಮತ್ತೆ ಜೊತೆಯಾಗ್ತಾರಾ ಎಂಬ ಅಭಿಮಾನಿಗಳ ಕುತೂಹಲಕ್ಕೆ ಚಂದನ್ ಶೆಟ್ಟಿ ಕ್ಲ್ಯಾರಿಟಿ ನೀಡಿದ್ದಾರೆ. ಇದು ಮಕ್ಕಳ ಆಟ ಅಲ್ಲ, ಮತ್ತೆ ನಿವೇದಿತಾ ಜೊತೆ ಒಂದಾಗಲ್ಲ ಎಂದು ಚಂದನ್ ಹೇಳಿದ್ದಾರೆ. ನಾವು ಡಿವೋರ್ಸ್ ಯಾಕೆ ತೆಗೆದುಕೊಂಡ್ವಿ ಎಂಬುದು ನಮ್ಮ ಪರ್ಸನಲ್ ವಿಚಾರ. ನನ್ನ ನಿರ್ಧಾರದ ಬಗ್ಗೆ ಸ್ಪಷ್ಟವಾಗಿದ್ದೀನಿ. ಇದು ಮಕ್ಕಳ ಆಟ ಅಲ್ಲ, ಇಬ್ಬರೂ ಯೋಚಿಸಿ ಡಿವೋರ್ಸ್ ಪಡೆದಿದ್ದೇವೆ. ಅದು ಬಿಟ್ಟರೆ ಅವರಿಗೆ ಈಗ ಪಶ್ಚಾತ್ತಾಪ ಕಾಡ್ತಿಲ್ಲ. ಮತ್ತೆ ನಿವೇದಿತಾ ಜೊತೆ ಒಂದಾಗಲ್ಲ. ನಮ್ಮ ನಿರ್ಧಾರ ಸರಿಯಿದೆ ಎಂದಿದ್ದಾರೆ. ಇನ್ನೂ ಸೋಶಿಯಲ್ ಮೀಡಿಯಾದಲ್ಲಿ ನಿವೇದಿತಾಗೆ ಕೆಟ್ಟ ಕಾಮೆಂಟ್ ಮಾಡಬೇಡಿ, ನಿಂದಿಸಬೇಡಿ ಎಂದು ಚಂದನ್ ಮಾತನಾಡಿದ್ದಾರೆ. ಇತ್ತೀಚೆಗೆ ಚಂದನ್ ನಟನೆಯ ಸಿನಿಮಾ ಸೆಟ್‌ನಲ್ಲಿ ನಿವೇದಿತಾ ಕಣ್ಣೀರಿಟ್ಟಿದ್ದರು. ಸಿನಿಮಾ ಸೀನ್ ಆಗಿದ್ದರೂ ನಿವೇದಿತಾ ನೈಜವಾಗಿ ನಟಿಸಿದ್ದರು. ಈ ಕುರಿತು ಮಾತನಾಡಿದ ಚಂದನ್, 'ಮುದ್ದು ರಾಕ್ಷಸಿ' ಸಿನಿಮಾ ಸೆಟ್‌ನಲ್ಲಿ ಸಿಕ್ಕಾಗ ನಿವೇದಿತಾ ಎಮೋಷನಲ್ ಆಗಲಿಲ್ಲ. ಅಲ್ಲೇ ಸೆಟ್‌ನಲ್ಲೇ ಅವರು ಕ್ಲ್ಯಾರಿಟಿ ನೀಡಿದ್ದಾರೆ. ಯಾವುದೇ ಸಿನಿಮಾ ಮುಗಿಯೋ ಟೈಮ್‌ನಲ್ಲಿ ಬೇಜರಾಗುತ್ತದೆ, ಅಳು ಬರುತ್ತದೆ ಎಂದು ನಿವೇದಿತಾ ಅಂದೇ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ ಕೊಟ್ಟಿದ್ದಾರೆ. ಹಾಗಾಗಿ ಎಮೋಷನಲಿ ಅವರಿಗೆ ನನ್ನೊಂದಿಗೆ ಯಾವುದೇ ರೀತಿಯ ಬಾಂಧವ್ಯವಿಲ್ಲ. ಇದೇ ಎಂದು ನನಗೂ ಕೂಡ ಅನಿಸಲಿಲ್ಲ ಎಂದರು ಚಂದನ್ ಶೆಟ್ಟಿ.

# ನಮ್ಮ ದುಡ್ಡು ವಾಪಸ್ ಕೊಡಿ ಆರ್‌ಸಿಬಿ ವಿರುದ್ಧ ಅಭಿಮಾನಿಗಳ ಆಕ್ರೋಶ



ಐಪಿಎಲ್‌ನ 18ನೇ ಆವೃತ್ತಿ ಮಾರ್ಚ್ 22 ರಿಂದ ಶುರುವಾಗಲಿದೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿದೆ. ಇನ್ನು ಫೈನಲ್ ಪಂದ್ಯವು ಮೇ 25 ರಂದು ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ಜರುಗಲಿದೆ. ರಂಗು ರಂಗಿನ ಕ್ರಿಕೆಟ್ ಟೂರ್ನಿ ಐಪಿಎಲ್ ಆರಂಭಕ್ಕೂ ಮುನ್ನ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಅನ್‌ಬಾಕ್ಸ್ ಹೆಸರಿನಲ್ಲಿ ರಂಗೀನ್ ಕಾರ್ಯಕ್ರಮ ಏರ್ಪಡಿಸಿದೆ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಮಾರ್ಚ್ 17 ರಂದು ನಡೆದ ಈ ಕಾರ್ಯಕ್ರಮವು ಅದ್ದೂರಿಯಾಗಿ ನಡೆದಿದೆ. ಇದಾಗ್ಯೂ ಲೈವ್ ಸ್ಟ್ರೀಮಿಂಗ್ ವಿರುದ್ಧ ಅಭಿಮಾನಿಗಳು ಆಕ್ರೋಶವನ್ನು ವ್ಯಕಪಡಿಸಿದ್ದಾರೆ.



**ಕಳಪೆ ಲೈವ್ ಸ್ಟ್ರೀಮಿಂಗ್:**

ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಅನ್‌ಬಾಕ್ಸ್ ಕಾರ್ಯಕ್ರಮದ ಸಮಯದಲ್ಲಿ ಕ್ರೀಡಾಂಗಣದಲ್ಲಿ ಹೆಚ್ಚಿನ ಸಂಖ್ಯೆಯ ಅಭಿಮಾನಿಗಳು ಉಪಸ್ಥಿತರಿದ್ದರು. ಖ್ಯಾತ ಡಿಜೆ ಟಿಮ್ಮಿ ಟ್ರಂಪೆಟ್ ಮತ್ತು ಸ್ಥಳೀಯ ಕಲಾವಿದರ ಪ್ರದರ್ಶನಗಳನ್ನು ಅಭಿಮಾನಿಗಳು ಮನಸೂರೆಗೊಂಡರು. ಆದರೆ ಇತ್ತ ಲೈವ್ ಸ್ಟ್ರೀಮಿಂಗ್ ವೀಕ್ಷಿಸುತ್ತಿದ್ದ ಅಭಿಮಾನಿಗಳಿಗೆ ಮಾತ್ರ ಕಳಪೆ ಸ್ಟ್ರೀಮಿಂಗ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿದರು. 99 ರೂ. ರಿಚಾರ್ಜ್‌ನೊಂದಿಗೆ ಆರ್‌ಸಿಬಿ ಈ ಕಾರ್ಯಕ್ರಮದ ನೇರ ಪ್ರಸಾರವನ್ನು ಪ್ರಸ್ತುತಪಡಿಸಿತ್ತು. ಆದರೆ ಲೈವ್ ಸ್ಟ್ರೀಮಿಂಗ್‌ನಲ್ಲಿ ಬಫರಿಂಗ್, ವಿಳಂಬ ಕಂಡು ಬಂದಿದೆ. ಅಲ್ಲದೆ ಸ್ಟ್ರೀಮಿಂಗ್ ಗುಣಮಟ್ಟ ಸಹ ಕಳಪೆಯಿಂದ ಕೂಡಿತ್ತು. ಇದೀಗ ಈ ಬಗ್ಗೆ ಆರ್‌ಸಿಬಿ ಅಭಿಮಾನಿಗಳು ಸೋಷಿಯಲ್ ಮೀಡಿಯಾ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕುತ್ತಿದ್ದಾರೆ. ಅದರಲ್ಲೂ ಕೆಲವರು 99 ರೂ. ಪಾವತಿಸಿದರೂ ಉತ್ತಮ ಸ್ಟ್ರೀಮಿಂಗ್ ವ್ಯವಸ್ಥೆ ಮಾಡದ ಆರ್‌ಸಿಬಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಇನ್ನು ಕೆಲವರು ಲೈವ್ ಸ್ಟ್ರೀಮಿಂಗ್ ವೇಳೆ ಬಫರಿಂಗ್ ಸಮಸ್ಯೆ ಎದುರಿಸಿದ್ದಾಗಿ ತಿಳಿಸಿದ್ದು, ಹೀಗಾಗಿ ರಿಚಾರ್ಜ್ ಮೊತ್ತವನ್ನು ಹಿಂತಿರುಗಿಸುವಂತೆ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ. ಒಟ್ಟಿನಲ್ಲಿ ಆರ್‌ಸಿಬಿ ಅನ್‌ಬಾಕ್ಸ್ ಕಾರ್ಯಕ್ರಮ ಯಶಸ್ವಿಯಾದರೂ, ಇತ್ತ ಕಳಪೆ ಗುಣಮಟ್ಟದ ಲೈವ್ ಸ್ಟ್ರೀಮಿಂಗ್ ಪ್ರಸ್ತುತಪಡಿಸಿ ಇದೀಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ರಾಯಲ್ ಅಭಿಮಾನಿಗಳ ಆಕ್ರೋಶಕ್ಕೆ ಗುರಿಯಾಗಿದೆ.

## ರೋಹಿತ್‌ಗೆ ನೀತಾ ಅಂಬಾನಿ ಕಾರು ಗಿಫ್ಟ್



ಸಾಮಾಜಿಕ ಮಾಧ್ಯಮದಲ್ಲಿ ನೀತಾ ಅಂಬಾನಿ ಮತ್ತು ರೋಹಿತ್ ಶರ್ಮಾ ಒಟ್ಟಿಗೆ ಇರುವ ಎರಡು ಚಿತ್ರಗಳು ವೈರಲ್ ಆಗುತ್ತಿದೆ. ಇದರಲ್ಲಿ ನೀತಾ ಅಂಬಾನಿ ಅವರು ಕಾರಿನ ಕೀಲಿಯನ್ನು ರೋಹಿತ್ ಶರ್ಮಾಗೆ ನೀಡುತ್ತಿರುವುದು ಕಂಡುಬರುತ್ತದೆ. ಈ ಚಿತ್ರವನ್ನು ಹಂಚಿಕೊಂಡ ಬಳಕೆದಾರರು, ಟ್ರೋಫಿ ಗೆದ್ದ ಸಂಭ್ರಮಕ್ಕಾಗಿ ನೀತಾ ಅಂಬಾನಿ ಅವರು ರೋಹಿತ್ ಶರ್ಮಾ ಅವರಿಗೆ ಬುಗಾಟಿಯನ್ನು ಉಡುಗೊರೆಯಾಗಿ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ರೋಹಿತ್ ಶರ್ಮಾ ನೇತೃತ್ವದ ಭಾರತ ಕ್ರಿಕೆಟ್ ತಂಡ 2025 ರ ಚಾಂಪಿಯನ್ಸ್ ಟ್ರೋಫಿ ಪ್ರಶಸ್ತಿಯನ್ನು ಗೆದ್ದಾಗಿದೆ. ಇದೀಗ ಇಡೀ ತಂಡ ದುಬೈನಿಂದ ಭಾರತಕ್ಕೆ ವಾಪಾಸ್ ಆಗಿದ್ದು, ಐಪಿಎಲ್ 2025ಕ್ಕೆ ತಯಾರಿ ನಡೆಸುತ್ತಿದೆ. ಇದರ ಮಧ್ಯೆ, ಭಾರತೀಯ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಉದ್ಯಮಿ ಮುಖೇಶ್ ಅಂಬಾನಿ ಅವರ ಪತ್ನಿ ನೀತಾ ಅಂಬಾನಿ ಅವರ ಫೋಟೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ. ಇದನ್ನು ಹಂಚಿಕೊಳ್ಳುವಾಗ, ಟ್ರೋಫಿ ಗೆದ್ದ ಸಂಭ್ರಮಕ್ಕಾಗಿ ನೀತಾ ಅಂಬಾನಿ ಅವರು ರೋಹಿತ್ ಶರ್ಮಾ ಅವರಿಗೆ ಬುಗಾಟಿಯನ್ನು ಉಡುಗೊರೆಯಾಗಿ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

**ವೈರಲ್ ಪೋಸ್ಟ್‌ನಲ್ಲಿ ಏನಿದೆ:**

ನೀತಾ ಅಂಬಾನಿ ಮತ್ತು ರೋಹಿತ್ ಶರ್ಮಾ ಒಟ್ಟಿಗೆ ಇರುವ ಎರಡು ಚಿತ್ರಗಳನ್ನು ಹಂಚಿಕೊಳ್ಳಲಾಗಿದೆ.

ಇದರಲ್ಲಿ ನೀತಾ ಅಂಬಾನಿ ಅವರು ಕಾರಿನ ಕೀಲಿಯನ್ನು ರೋಹಿತ್ ಶರ್ಮಾಗೆ ನೀಡುತ್ತಿರುವುದು ಕಂಡುಬರುತ್ತದೆ. ಈ ಚಿತ್ರವನ್ನು ಹಂಚಿಕೊಂಡ ಬಳಕೆದಾರರು, ಚಾಂಪಿಯನ್ಸ್ ಟ್ರೋಫಿ 2025 ಗೆದ್ದ ಖುಷಿಗಾಗಿ ತಂಡದ ನಾಯಕ ರೋಹಿತ್ ಶರ್ಮಾರಿಗೆ ನೀತಾ ಅಂಬಾನಿ ಯಾವ ಕಾರನ್ನು ಉಡುಗೊರೆಯಾಗಿ ನೀಡಿದರು ಎಂದು ಬರೆದುಕೊಂಡಿದ್ದಾರೆ.

ಹಾಗೆಯೆ ಇನ್ನೂ ಕೆಲವರು, 2025 ರ ಚಾಂಪಿಯನ್ಸ್ ಟ್ರೋಫಿ ಗೆದ್ದ ನಂತರ ನೀತಾ ಅಂಬಾನಿ ರೋಹಿತ್ ಶರ್ಮಾ ಬುಗಾಟಿಯನ್ನು ನೀಡುತ್ತಿದ್ದಾರೆ ಎಂದು ಬರೆದುಕೊಂಡಿದ್ದಾರೆ. ರೋಹಿತ್ ಶರ್ಮಾಗೆ ನೀತಾ ಅಂಬಾನಿ ಕಾರು ಉಡುಗೊರೆ ನೀಡಿದ್ದು ನಿಜವೇ: ಈ ಸುದ್ದಿಯ ಸತ್ಯಾಸತ್ಯತೆಯನ್ನು ಪರಿಶೋದಿಸಿದಾಗ ಇದೊಂದು ಸಂಪೂರ್ಣ ಸುಳ್ಳು ಮಾಹಿತಿ ಎಂಬುದು ತಿಳಿದುಬಂದಿದೆ. ಮೊದಲನೆಯದಾಗಿ, ನಾವು ಈ ಚಿತ್ರಕ್ಕೆ ಸಂಬಂಧಿಸಿದ ಕೀವರ್ಡ್‌ಗಳ ಮೂಲಕ ಗೂಗಲ್‌ನಲ್ಲಿ ಸರ್ಚ್ ಮಾಡಿದ್ದೇವೆ. ಆದಾಗ್ಯೂ, ಈ ಚಿತ್ರಕ್ಕೆ ಸಂಬಂಧಿಸಿದ ಯಾವುದೇ ವರದಿ ಗೂಗಲ್‌ನಲ್ಲಿ ನಮಗೆ ಕಂಡುಬಂದಿಲ್ಲ.



## 78 ಎಸೆತಗಳಲ್ಲಿ 21 ಸಿಕ್ಸ್: ಪಾಕ್ ವಿರುದ್ಧ ಫಿನ್ ಅಲೆನ್ ಸಿಡಿಲಬ್ಬರ



ಟಿ20 ಕ್ರಿಕೆಟ್‌ನಲ್ಲಿ ನ್ಯೂಝಿಲೆಂಡ್ ದಾಂಡಿಗ ಫಿನ್ ಅಲೆನ್ ಅವರ ಅಬ್ಬರ ಮುಂದುವರೆದಿದೆ. ಅದರಲ್ಲೂ ಪಾಕಿಸ್ತಾನ್ ಬೌಲರ್‌ಗಳ ಬೆಂಡೆತ್ತುವಲ್ಲಿ ಇದೀಗ ಅಲೆನ್ ಮುಂಚೂಣಿಯಲ್ಲಿದ್ದಾರೆ.

ಇದಕ್ಕೆ ಸಾಕ್ಷಿ ಕೇವಲ 78 ಎಸೆತಗಳಲ್ಲಿ ಅವರು 175 ರನ್ ಬಾರಿಸಿರುವುದು. ಈ ವೇಳೆ ಫಿನ್ ಅಲೆನ್ ಅವರ ಬ್ಯಾಟ್‌ನಿಂದ ಮೂಡಿಬಂದಿರುವ ಸಿಕ್ಸರ್‌ಗಳ ಸಂಖ್ಯೆ ಬರೋಬ್ಬರಿ 16. ಪಾಕಿಸ್ತಾನ್ ವಿರುದ್ಧ ಫಿನ್ ಅಲೆನ್ ಸಿಡಿಲಬ್ಬರದ ಮುಂದುವರೆದಿದೆ. ಅದು ಕೂಡ ಡ್ಯುನೆಡಿನ್‌ನ ಯೂನಿವರ್ಸಿಟಿ ಓವಲ್ ಮೈದಾನದಲ್ಲಿ ಸಿಕ್ಸರ್‌ಗಳ ಸುರಿಮಳೆಯೊಂದಿಗೆ ಎಂಬುದು ವಿಶೇಷ. ಈ ಮೈದಾನದಲ್ಲಿ ಪಾಕಿಸ್ತಾನ್ ವಿರುದ್ಧ ಸ್ಫೋಟಕ ಇನಿಂಗ್ಸ್ ಪ್ರದರ್ಶಿಸಿರುವ ಅಲೆನ್ ಈವರೆಗೆ 21 ಸಿಕ್ಸರ್‌ಗಳನ್ನು ಸಿಡಿಸಿದ್ದಾರೆ.

ಜನವರಿ 17, 2024 ರಂದು ಡ್ಯುನೆ ಡಿನ್‌ನ ಯೂನಿವರ್ಸಿಟಿ ಓವಲ್ ಮೈದಾನದಲ್ಲಿ ನಡೆದ ಪಾಕಿಸ್ತಾನ್ ವಿರುದ್ಧದ ಪಂದ್ಯದಲ್ಲಿ ನ್ಯೂಝಿಲೆಂಡ್ ಪರ ಆರಂಭಿಕನಾಗಿ ಕಣಕ್ಕಿಳಿದ ಅಲೆನ್ ಕೇವಲ 62 ಎಸೆತಗಳಲ್ಲಿ 137 ರನ್ ಸಿಡಿಸಿದ್ದರು. ಈ ವೇಳೆ ಫಿನ್ ಅಲೆನ್ ಬ್ಯಾಟ್‌ನಿಂದ ಮೂಡಿಬಂದ ಸಿಕ್ಸ್‌ಗಳ ಸಂಖ್ಯೆ ಬರೋಬ್ಬರಿ 16. ಇನ್ನು 5 ಫೋರ್‌ಗಳನ್ನು ಸಹ ಬಾರಿಸಿದ್ದರು. ಇದೀಗ ಇದೇ ಮೈದಾನದಲ್ಲಿ ಮತ್ತೊಮ್ಮೆ ಫಿನ್ ಅಲೆನ್ ಪಾಕಿಸ್ತಾನ್ ಬೌಲರ್‌ಗಳ ಬೆಂಡೆತ್ತಿದ್ದಾರೆ. ಪ್ರಸ್ತುತ ನಡೆಯುತ್ತಿರುವ 5 ಪಂದ್ಯಗಳ ಟಿ20 ಸರಣಿಯ 2ನೇ ಮ್ಯಾಚ್‌ನಲ್ಲಿ 16 ಎಸೆತಗಳನ್ನು ಎದುರಿಸಿದ ಅಲೆನ್ 38 ರನ್ ಬಾರಿಸಿದ್ದಾರೆ. ಈ ವೇಳೆ ಒಟ್ಟು 5 ಸಿಕ್ಸ್ ಹಾಗೂ 1 ಫೋರ್ ಬಾರಿಸಿದ್ದಾರೆ. 'ವಿಶೇಷ ಎಂದರೆ ಪಾಕಿಸ್ತಾನ್ ವಿರುದ್ಧದ ಈ ಎರಡು ಪಂದ್ಯಗಳಲ್ಲಿ ಫಿನ್ ಅಲೆನ್ ಎದುರಿಸಿದ್ದು ಕೇವಲ 78 ಎಸೆತಗಳನ್ನು ಮಾತ್ರ. ಈ ವೇಳೆ 175 ರನ್ ಸಿಡಿಸಿದ್ದಾರೆ. ಇದರಲ್ಲಿ ಬರೋಬ್ಬರಿ 21 ಸಿಕ್ಸರ್‌ಗಳು ಒಳಗೊಂಡಿವೆ.

ಈ ಮೂಲಕ ಡ್ಯುನೆಡಿನ್‌ನ ಯೂನಿವರ್ಸಿಟಿ ಓವಲ್‌ನಲ್ಲಿ ಪಾಕಿ ಸ್ತಾನ್ ವಿರುದ್ಧ ಅಲೆನ್ ಏಕಪಕ್ಷೀಯ ಪ್ರಾಬಲ್ಯ ಮುಂದುವರೆಸಿದ್ದಾರೆ. ಅಂದಹಾಗೆ ಇದೇ ಫಿನ್ ಅಲೆನ್ ಈ ಹಿಂದೊಮ್ಮೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಭಾಗವಾಗಿದ್ದರು. 2021 ರಲ್ಲಿ ಆರ್‌ಸಿಬಿ ತಂಡಕ್ಕೆ ಎಂಟ್ರಿ ಕೊಟ್ಟಿದ್ದ ಅಲೆನ್ ಮೂರು ವರ್ಷಗಳ ಕಾಲ ಬೆಂಚ್ ಕಾದಿದ್ದರು ಎಂಬುದೇ ವಿಶೇಷ. ಈ ಮೂರು ವರ್ಷಗಳಲ್ಲಿ ಆರ್‌ಸಿಬಿ ಒಟ್ಟು 45 ಪಂದ್ಯಗಳನ್ನಾಡಿದೆ. ಈ ವೇಳೆ ಒಮ್ಮೆಯೂ ಅಲೆನ್ ಅವರನ್ನು ಕಣಕ್ಕಿಳಿಸಿರಲಿಲ್ಲ ಎಂಬುದೇ ಅಚ್ಚರಿ.

## ಸೋತು ಸೋತು ಸುಣ್ಣವಾದ ಪಾಕಿಸ್ತಾನ್



ಪಾಕಿಸ್ತಾನ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಗೆಲುವು ದಾಖಲಿಸಿದ್ದ ನ್ಯೂಝಿಲೆಂಡ್ ತಂಡವು ಇದೀಗ ದ್ವಿತೀಯ ಪಂದ್ಯದಲ್ಲೂ ಜಯ ಸಾಧಿಸಿದೆ. ಈ ಪಂದ್ಯದಲ್ಲಿ ಪಾಕಿಸ್ತಾನ್ ತಂಡ 135 ರನ್ ಕಲೆಹಾಕಿದರೆ, ಈ ಗುರಿಯನ್ನು ಕಿವೀಸ್ ಪಡೆ ಕೇವಲ 13.1 ಓವರ್‌ಗಳಲ್ಲಿ ಚೇಸ್ ಮಾಡಿದೆ. ಈ ಮೂಲಕ 5 ಪಂದ್ಯಗಳ ಸರಣಿಯಲ್ಲಿ 2–0 ಅಂತರದಿಂದ ಮುನ್ನಡೆ ಸಾಧಿಸಿದೆ. ನ್ಯೂಝಿಲೆಂಡ್ ವಿರುದ್ಧದ 2ನೇ ಟಿ20 ಪಂದ್ಯದಲ್ಲೂ ಪಾಕಿಸ್ತಾನ್ ತಂಡ ಪರಾಜಯಗೊಂಡಿದೆ. ಡ್ಯುನೆಡಿನ್‌ನ ಯೂನಿವರ್ಸಿಟಿ ಓವಲ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ನ್ಯೂಝಿಲೆಂಡ್ ಬೌಲಿಂಗ್ ಆಯ್ದುಕೊಂಡಿದ್ದರು. ಮಳೆಯ ಕಾರಣ 15 ಓವರ್‌ಗಳಿಗೆ ಸೀಮಿತವಾಗಿದ್ದ ಈ ಮ್ಯಾಚ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ್ ತಂಡ 9 ವಿಕೆಟ್ ಕಳೆದುಕೊಂಡು 135 ರನ್ ಕಲೆಹಾಕಿತು. 15 ಓವರ್‌ಗಳಲ್ಲಿ 136 ರನ್‌ಗಳ ಗುರಿಯನ್ನು ಬೆನ್ನತ್ತಿದ ನ್ಯೂಝಿಲೆಂಡ್ ತಂಡಕ್ಕೆ ಟಿಮ್ ಸೀಫರ್ಟ್ ಹಾಗೂ ಫಿನ್ ಅಲೆನ್ ಸ್ಫೋಟಕ ಆರಂಭ ಒದಗಿಸಿದ್ದರು. 22 ಎಸೆತಗಳನ್ನು ಎದುರಿಸಿದ ಸೀಫರ್ಟ್ 5 ಭರ್ಜರಿ ಸಿಕ್ಸ್ ಹಾಗೂ 3 ಫೋರ್‌ಗಳೊಂದಿಗೆ 45 ರನ್ ಚಚ್ಚಿದರು.

ಇನ್ನು ಫಿನ್ ಅಲೆನ್ 16 ಎಸೆತಗಳಲ್ಲಿ 5 ಸಿಕ್ಸ್‌ನೊಂದಿಗೆ 38 ರನ್ ಬಾರಿಸಿದರು. ಈ ಮೂಲಕ ನ್ಯೂಝಿಲೆಂಡ್ ತಂಡವು 13.1 ಓವರ್‌ಗಳಲ್ಲಿ 137 ರನ್ ಬಾರಿಸಿ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದು ಪಾಕಿಸ್ತಾನ್ ತಂಡದ 12ನೇ ಸೋಲು ಎಂಬುದು ವಿಶೇಷ. ಅಂದರೆ ಕಳೆದ 16 ಟಿ20 ಪಂದ್ಯಗಳಲ್ಲಿ ಪಾಕ್ ಪಡೆ ಹನ್ನೆರಡು ಮ್ಯಾಚ್‌ಗಳಲ್ಲಿ ಸೋಲನುಭವಿಸಿದೆ. ಇನ್ನು ಗೆದ್ದಿರುವುದು ದುರ್ಬಲ ತಂಡಗಳ ವಿರುದ್ಧ ಮಾತ್ರ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966